ಜನಶಕ್ತಿ

ಕನ್ನಡ ವಾರಪತ್ರಿಕೆ


blog janashakthi.wordpress.com e-mail : js_weekly@yahoo.com

ಸಂಪುಟ 7 ಸಂಚಿಕೆ 29
ಜುಲೈ 21, 2013 ಪುಟ 16 ರೂ. 10/-




ಚುನಾವಣೆಯ ಮೇಲೆ ಕಣ್ಣಿಟ್ಟ ಬಜೆಟ್






ಬುದ್ಧ ಗಯಾದಲ್ಲಿ ಭಯೋತ್ಪಾದನೆ: ಆಧುನಿಕ ಭಾರತೀಯ ಗಣತಂತ್ರವನ್ನು ವಿರೂಪಗೊಳಿಸುವ ಪ್ರಯತ್ನಗಳು



ಉಳ್ಳವರ ಕ್ರೂರ ವ್ಯಂಗ್ಯದ ನಡುವೆ ಇಲ್ಲದವರು ಸೆಣಸಾಡುತ್ತಾ. . .

-ದೇವನೂರು ಮಹದೇವ

'ಜ್ಯೋತಿ ಬಸುಗೆ ಜ್ಯೋತಿ ಬಸುವೇ ಸಾಟಿ'





ಖಾಸಗೀಕರಣದ ವಿರುದ್ಧ ಅಂಗನವಾಡಿ ನೌಕರರ ಪ್ರತಿಭಟನೆ

ಕಾಂಗ್ರೆಸ್ ಕೊಡಬೇಕಾಗಿರುವುದು ಅಕ್ಕಿ ಮಾತ್ರವೇ ಅಲ್ಲಾ

ಕೆ.ಪಿ.ಎಸ್.ಸಿ ಹಗರಣ: ಬುಡಮೇಲಾಗಿರುವ ಸಂವಿಧಾನದ ಆಶಯಗಳು

ಕಾಂಗ್ರೆಸನ್ನು ಸೋಲಿಸಿ- ಬಿಜೆಪಿಯನ್ನು ಹಿಮ್ಮೆಟ್ಟಿಸಿ –ನೀತಿ ಆಧಾರಿತ ಪರ್ಯಾಯ ರೂಪಿಸಿ

ಎಡ ಪಕ್ಷಗಳ ರಾಷ್ಟ್ರಮಟ್ಟದ ರಾಜಕೀಯ ಸಮಾವೇಶದ ಕರೆ

ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನೇತೃತ್ವದ ಕೂಟಗಳ ಜನವಿರೋಧಿ ನೀತಿಗಳಿಗೆ ಬದಲಿ ನೀತಿಗಳ ಆಧಾರದಲ್ಲಿ ರಾಜಕೀಯ ಪರ್ಯಾಯ ರೂಪಿಸುವ ನಿಟ್ಟಿನಲ್ಲಿ ಎಡಪಕ್ಷಗಳ ರಾಷ್ಟ್ರಮಟ್ಟದ ರಾಜಕೀಯ ಸಮಾವೇಶ ದೆಹಲಿಯಲ್ಲಿ ನಡೆಯಿತು. ಇಲ್ಲಿ ಅಂಗೀಕಾರವಾದ ನೀತಿಗಳ ಆಧಾರದಲ್ಲಿ ರಾಷ್ಟ್ರವ್ಯಾಪಿ ಪ್ರಚಾರಾಂದೋಲನಕ್ಕೆ ಕರೆ ನೀಡಿರುವ ಎಡಪಕ್ಷಗಳು ಈ ದಿಸೆಯಲ್ಲಿ ಎಲ್ಲ ರಾಜ್ಯಗಳಲ್ಲಿ ಜುಲೈ ಮತ್ತು ಸೆಪ್ಟೆಂಬರ್ ನಡುವೆ ರಾಜಕೀಯ ರ್‍ಯಾಲಿ ನಡೆಸಲು ತೀರ್ಮಾನಿಸಿವೆ. ದೇಶದ ಎಲ್ಲ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳು ಬದಲಿ ನೀತಿಗಳ ಆಧಾರದ ಈ ವೇದಿಕೆಯನ್ನು ಬೆಂಬಲಿಸಬೇಕು ಹಾಗೂ ಸಮಾವೇಶದ ನಿರ್ಣಯದಲ್ಲಿನ ಬೇಡಿಕೆಗಳನ್ನು ಈಡೇರಿಸಿಕೊಳ್ಳುವ ನಿಟ್ಟಿನಲ್ಲಿ ಎಲ್ಲರೂ ಒಟ್ಟಾಗಿ ಶ್ರಮಿಸಬೇಕೆಂದೂ ಅವು ವಿನಂತಿಸಿವೆ.

ರಾಷ್ಟ್ರದ ರಾಜಧಾನಿ ನವದೆಹಲಿಯ ಮಾವಳಂಕರ್ ಸಭಾಂಗಣದಲ್ಲಿ ಜುಲೈ 1 ರಂದು ನಡೆದ ಎಡಪಕ್ಷಗಳ ಈ ಸಮಾವೇಶದಲ್ಲಿ ನಾಲ್ಕು ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ, ರೆವಲ್ಯೂಷನರಿ ಸೋಷಿಯಲಿಸ್ಟ್ ಪಾರ್ಟಿ ಮತ್ತು ಫಾರ್ವರ್ಡ್ ಬ್ಲಾಕ್‌ಗಳ ಪ್ರಮುಖ ಸದಸ್ಯರು ಇದರಲ್ಲಿ ಭಾಗವಹಿಸಿದರು. ಸಭಿಕರ ಪ್ರಮುಖ ಭಾಗ ಉತ್ತರ ಭಾರತದಿಂದ ಬಂದರೂ ದೇಶದ ಎಲ್ಲ ಭಾಗಗಳಿಗೂ ಇದರಲ್ಲಿ ಪ್ರತಿನಿಧಿತ್ವ ಇತ್ತು. ಇಲ್ಲಿ ಉತ್ಸಾಹ ಮತ್ತು ಧೃಡ ಸಂಕಲ್ಪದ ವಾತಾವರಣವಿತ್ತು.

ಸಿಪಿಐ(ಎಂ)ನ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಾತ್ ಮುಖ್ಯ ಗೊತ್ತುವಳಿ ಮಂಡಿಸಿದರು. ಅದನ್ನು ಸಿಪಿಐ(ಎಂ) ಪಾಲಿಟ್ ಬ್ಯುರೋ ಸದಸ್ಯ ಸೀತಾರಾಂ ಯೆಚೂರಿ, ಸಿಪಿಐ ಪ್ರಧಾನ ಕಾರ್ಯದರ್ಶಿ ಎಸ್.ಸುಧಾಕರ ರೆಡ್ಡಿ, ಫಾರ್ವರ್ಡ್ ಬ್ಲಾಕ್ ಪ್ರಧಾನ ಕಾರ್ಯದರ್ಶಿ ದೇಬ್‌ಬೃತ ಬಿಸ್ವಾಸ್ ಮತ್ತು ಆರ್‌ಎಸ್‌ಪಿಯ ನಾಯಕ ಅಬಾನಿ ರಾಯ್ ಅನುಮೋದಿಸಿ ಮಾತನಾಡಿದರು. ಈ ಸಮಾವೇಶ ಒಂದು ಹತ್ತು ಅಂಶಗಳ ಘೋಷಣೆಯನ್ನು ಅನುಮೋದಿಸಿತು. ಇದು ಇಂದಿನ ಬಹುಮುಖ್ಯ ಅವಶ್ಯಕತೆ ಎಂದು ಅದು ಹೇಳಿತು.

ಯುಪಿಎ ಸರ್ಕಾರದ ನೀತಿಗಳನ್ನು ಜನವಿರೋಧಿ ಮತ್ತು ಪ್ರಜಾಪ್ರಭುತ್ವ ವಿರೋಧಿ ಎಂದು ಹೇಳಿದ ಅದು ಕಾಂಗ್ರೆಸ್ ಮತ್ತು ಅದು ನಾಯಕತ್ವ ವಹಿಸಿರುವ ಯುಪಿಎಯನ್ನು ಸೋಲಿಸಿ ಪರ್ಯಾಯ ನೀತಿಗಳನ್ನು ಜಾರಿಗೆ ತರುವ ಅವಶ್ಯಕತೆ ಇದೆ ಎಂದಿತು. ಅದೇ ಸಮಯದಲ್ಲಿ ಭಾರತೀಯ ಜನತಾ ಪಕ್ಷ ಇದಕ್ಕೂ ಹೆಚ್ಚಿನ ಪ್ರತಿಗಾಮಿ ನಿಲುವಿನ ಪ್ರತಿನಿಧಿಗಳನ್ನು ಹೊಂದಿದೆ ಎಂದ ಅದು ಆ ಪಕ್ಷ ಅಧಿಕಾರಕ್ಕೆ ಬರುವ ಸಾಧ್ಯತೆಯನ್ನು ತಡೆಯಬೇಕು ಎಂದಿತು. ಈ ಎರಡೂ ಅಂದರೆ ಯುಪಿಎ ಮತ್ತು ಎನ್‌ಡಿಎ ರಂಗಗಳು ಆಂತರಿಕ ವೈರುಧ್ಯಗಳಿಂದ ಕೂಡಿವೆ ಎಂದು



ಅದು ಗುರುತಿಸಿತು. ಈ ಹಿನ್ನೆಲೆಯಲ್ಲಿ ಪರ್ಯಾಯ ರಾಜಕೀಯ ಬೇಕಾಗಿದೆ ಎಂದ ಅದು ಅಂತಹ ರಾಜಕೀಯ ಪರ್ಯಾಯವು 'ಪರ್ಯಾಯ ನೀತಿಗಳಿಂದ ಮಾತ್ರ' ಬರಲು ಸಾಧ್ಯ ಎಂದಿದೆ.

ಸಮಾವೇಶವು ರಾಷ್ಟ್ರ ಮಟ್ಟದಲ್ಲಿ ರಾಜಕೀಯ ಪ್ರಚಾರ ನಡೆಸುವ ನಿರ್ಧಾರವನ್ನು ತೆಗೆದುಕೊಂಡಿತು. ಈ ದಿಸೆಯಲ್ಲಿ ಎಲ್ಲ ರಾಜ್ಯಗಳಲ್ಲಿ ಜುಲೈ ಮತ್ತು ಸೆಪ್ಟೆಂಬರ್ ನಡುವೆ ರಾಜಕೀಯ ರ್‍ಯಾಲಿ ನಡೆಸಲಾಗುವುದು.

ದುರ್ಬರ ಜನರ ಬದುಕು

ಘೋಷಣೆಯನ್ನು ಮಂಡಿಸುವ ಮೊದಲು ಪ್ರಕಾಶ್ ಕಾರಾಟ್ ಅವರು ಯುಪಿಎ ಸರ್ಕಾರದ ನೀತಿಗಳ ಪರಿಣಾಮಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿದರು. ನಿರುದ್ಯೋಗಿಗಳ ಸಂಖ್ಯೆ ಶೇ.10ರ ಪ್ರಮಾಣ ಮೀರಿ ಏರುತ್ತಿದೆ ಎಂದರು. ಹದಿನೆಂಟು ವರ್ಷಗಳಿಗೂ ಮೇಲ್ಪಟ್ಟವರಲ್ಲಿ ಶೇ. 38 ರಷ್ಟು ಜನರಿಗೆ ಮಾತ್ರ ಉದ್ಯೋಗವಿದೆ ಎಂದರು. ಅಲ್ಲದೆ ಬೆಲೆಗಳು ಕಳೆದ ನಾಲ್ಕು ವರ್ಷಗಳಲ್ಲಿ ಏರುತ್ತಲೇ ಇವೆ. ಕೃಷಿ ಬಿಕ್ಕಟ್ಟು ಹೆಚ್ಚುತ್ತಲೇ ಇದೆ. ಯುಪಿಎ ಸರ್ಕಾರ ಈ ಮೂಲಭೂತ ವಿಷಯಗಳಲ್ಲಿ ಏನೂ ಮಾಡಲಿಲ್ಲ. ವಿದೇಶಿ ಬಂಡವಾಳ ಈ ಎಲ್ಲದಕ್ಕೂ ಮದ್ದು ಎಂದು ಅದು ಹೇಳುತ್ತಿದೆ. ಅದು ದೇಶದ ಕೋಟಿಗಟ್ಟಲೆ ಜನರ ಜೀವನಾಧಾರವನ್ನೆ ನಾಶಗೊಳಿಸಲಿದೆ ಎಂದರು. ಕೋಮುಗಲಭೆಗಳನ್ನು ಉಂಟುಮಾಡಿ ಆ ಮೂಲಕ ರಾಜಕೀಯ ಲಾಭಗಳಿಸುವ ಸಂಚನ್ನು ಬಿಜೆಪಿ ಪಕ್ಷವು ನಡೆಸಿದೆ ಎಂದು ಕಾರಾಟ್ ಖಂಡಿಸಿದರು. ಉತ್ತರ ಪ್ರದೇಶದಲ್ಲಿ ಬಿಜೆಪಿಯು ಇತ್ತೀಚೆಗೆ ಇಂತಹ ಹಲವು ಗಲಭೆಗಳನ್ನು ಸೃಷ್ಟಿಸಿದೆ ಎಂದು ಅವರು ಗಮನ ಸೆಳೆದರು. ಯುಪಿಎ ಸರ್ಕಾರವು ಭಾರತವನ್ನು ಅಮೆರಿಕನ್ ಸಾಮ್ರಾಜ್ಯಶಾಹಿಗಳ ಕೂಟದ ಅನುಯಾಯಿಯನ್ನಾಗಿಸುವ ಉದ್ದೇಶದಿಂದ ತನ್ನ ಬಹುಕಾಲದ ವಿದೇಶಾಂಗ ನೀತಿಯನ್ನು ನಾಶಗೈಯ್ಯುತ್ತಿದೆ ಎಂದು ಕಟುವಾಗಿ ಟೀಕಿಸಿದರು.

ನಂತರ ಮಾತನಾಡಿದ ಎಲ್ಲ ನಾಯಕರು ಯುಪಿಎ ಸರ್ಕಾರ ಹೇಗೆ ನಾಚಿಕೆ ಎಂಬುದೇ ಇಲ್ಲದೇ ಬಡವರ ಮೇಲೆ ಹೊರೆಗಳನ್ನು ಹೇರುತ್ತಾ ಶ್ರೀಮಂತರ ಕಂಪನಿಗಳಿಗೆ ಲಾಭಗಳ ಹೆಡಿಗೆಗಳನ್ನು ಕೊಡುತ್ತಿದೆ ಎಂಬುದನ್ನು ವಿವರವಾಗಿ ಹೇಳಿದರು. ಸೀತಾರಾಂ ಯೆಚೂರಿ ಮಾತನಾಡುತ್ತಾ ಹಣಕಾಸು ಕೊರತೆ ಐದು ಲಕ್ಷ ಕೋಟಿ ರೂಪಾಯಿಗಳಷ್ಟಿದ್ದರೆ ಅದಕ್ಕೂ ದೊಡ್ಡ ಮೊತ್ತದ ಹಣಕಾಸಿನ ನೆರವನ್ನು ಶ್ರೀಮಂತರ ಕಂಪನಿಗಳಿಗೆ ಸರ್ಕಾರ ನೀಡಿದೆ ಎಂಬುದರತ್ತ ಎಲ್ಲರ ಗಮನ ಸೆಳೆದರು. ಭ್ರಷ್ಟಾಚಾರ ಹೇಗೆ ಬಂಡವಾಳಶಾಹಿ ಆರ್ಥಿಕದ ಅಂತರ್‌ಗಂಗೆಯಾಗಿಬಿಟ್ಟಿದೆ ಎಂಬುದನ್ನೂ ಈ ನಾಯಕರುಗಳು ವಿವರಿಸಿದರು. ಇದಲ್ಲದೆ ಎಡಪಕ್ಷಗಳ ಮೇಲೆ ಹೇಗೆ ಉದ್ದೇಶಪೂರ್ವಕ ದಾಳಿಗಳಾಗುತ್ತಿವೆ ಎಂಬುದನ್ನೂ ವಿವರಿಸಲಾಯಿತು. ಕಾಂಗ್ರೆಸ್ ಮತ್ತು ಬಿಜೆಪಿಗಳ ರಂಗಗಳು ವಿದಳಗೊಳ್ಳುತ್ತಿರುವುದನ್ನೂ ಗಮನಕ್ಕೆ ತರಲಾಯಿತು.

ನೀತಿ–ಬೇಡಿಕೆ ಆಧಾರಿತ

ಎಡಪಕ್ಷಗಳ ಈ ಬಹು ಮುಖ್ಯ ರಾಜಕೀಯ ಸಮಾವೇಶ ಹಿರಿಯ ಕಮ್ಯೂಯಿನಿಸ್ಟ್ ನಾಯಕ ಎ.ಬಿ.ಬರ್ಧನ್ ಅವರ ಭಾವಪೂರ್ಣ ಭಾಷಣದೊಂದಿಗೆ ಮುಕ್ತಾಯವಾಯಿತು. ಬರ್ಧನ್ ಅವರು ಮುಂದುವರಿದು "ಎಡ ಪಕ್ಷಗಳು ಅಧಿಕಾರಕ್ಕಾಗಿ ಕಾಂಗ್ರೆಸ್ಸೇತರ ಮತ್ತು ಬಿಜೆಪಿಯೇತರ ಜನಗಳನ್ನು ಹೇಗಾದರೂ ಮಾಡಿ ಒಗ್ಗೂಡಿಸುವ ಆಶಯವನ್ನು ಹೊಂದಿಲ್ಲ. ಅಂತಹ ಚುನಾವಣಾ ರಂಗಗಳನ್ನು ಹುಟ್ಟಿಹಾಕಿದರೂ ಒಂದು ವಿಶ್ವಾಸಾರ್ಹ ಕಾರ್ಯಕ್ರಮವಿರದೆ ಅದು ಬಾಳಲಾರದು. ಅದೇ ಸಮಯದಲ್ಲಿ ಎಡಪಕ್ಷಗಳಿಲ್ಲದೆ ಇರುವ ರಂಗಗಳು ಅಥವಾ ಪರ್ಯಾಯಗಳು ಸಾಧ್ಯವಾಗುವುದು ಕನಸಿನ ಮಾತಾಗುತ್ತದೆ" ಎಂದರು. ಈ ಸಮಾವೇಶದ ಘೋಷಣೆಯನ್ನು ಜನರ ಬಳಿ ಒಯ್ಯಲು ಹಲವು ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ಸಂಘಟಿಸಿ ಪ್ರಚಾರ ನಡೆಸಬೇಕೆಂದು ಕರೆ ನೀಡಿದರು. ಸಮಾವೇಶ ಹಿರಿಯ ನಾಯಕರ ಈ ಸೂಚನೆಯನ್ನು ತುಂಬು ಹೃದಯದಿಂದ ಒಪ್ಪಿಕೊಂಡು ಅನುಮೋದಿಸಿತು. ಎಡಪಕ್ಷಗಳ ಒಕ್ಕಟ್ಟಿನ ಘೋಷಣೆಗಳೊಂದಿಗೆ ಸಮಾವೇಶ ಮುಕ್ತಾಯವಾಯಿತು. ಸಿಪಿಐ(ಎಂ)ನ ಬೃಂದಾ ಕಾರಾಟ್, ಸಿಪಿಐನ ಅಮರ್ಜಿತ್ ಕೌರ್, ಎಫ್‌ಬಿಯ ಬರುಣ್ ಘೋಷ್ ಮತ್ತು ಆರ್‌ಎಸ್‌ಪಿಯ ಅಬಾನಿ ರಾಯ್ ಅವರನ್ನೊಳಗೊಂಡ ಆಧ್ಯಕ್ಷ ಮಂಡಳಿ ಸಮಾವೇಶದ ಕಾರ್ಯಕ್ರಮಗಳನ್ನು ನಡೆಸಿಕೊಟ್ಟಿತು.

ನಾಳಿನ ಕಾರ್ಯಕ್ರಮ

* ಕರ್ನಾಟಕ ಪ್ರಾಂತ್ಯ ರೈತ ಸಂಘದ ರಾಜ್ಯ ಸಮ್ಮೇಳನ ಸಿಂಧನೂರು – ಜುಲೈ 18 ರಿಂದ 19

* ಸಿಪಿಐ(ಎಂ) ಪಕ್ಷದ ರಾಜ್ಯ ಮಟ್ಟದ ಶಾಲೆ– ಅಗಸ್ಟ್ 4 ರಿಂದ 10ರ ವರೆಗೆ ಹಾಸನ

ಸಂಪಾದಕೀಯ

ಒಗ್ಗಟ್ಟನ್ನು ಉಳಿಸಿಕೊಳ್ಳುವುದರಲ್ಲೇ ದಲಿತರ ಹಿತವಿದೆ

ಕರ್ನಾಟಕದಲ್ಲಿರುವ ಲಂಬಾಣಿ ಬಂಜಾರಾ, ಭೋವಿ, ಕೊರಮ, ಹಾಗೂ ಕೊರಚ ಸಮುದಾಯಗಳನ್ನು ಪರಿಶಿಷ್ಟ ಜಾತಿಗಳ ಪಟ್ಟಿಯಿಂದ ತೆಗೆದು ಹಾಕಬೇಕೇ ಅಥವ ಬೇಡವೆ ಎಂಬುದರ ಬಗ್ಗೆ ಸಾರ್ವಜನಿಕ ಅಹವಾಲು ಆಲಿಸಲು ಇತ್ತೀಚೆಗೆ ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗ ಬೆಂಗಳೂರಿಗೆ ಆಗಮಿಸಿದಾಗ, ಸಾವಿರಾರು ಸಂಖ್ಯೆಯಲ್ಲಿ ಅಲ್ಲಿ ನೆರೆದಿದ್ದ ವಿವಿಧ ದಲಿತ ಸಮುದಾಯಗಳ ಜನ ಎರಡು ಗುಂಪುಗಳಾಗಿ ನಿಂತು ಪರಸ್ಪರ ವಾಗ್ದಾಳಿ ನಡೆಸಿದ ಘಟನೆ ನಡೆಯಿತು. ಈಗ ಒಂದು ವರ್ಷದ ಹಿಂದೆ ಒಳ ಮೀಸಲಾತಿ ಕುರಿತಾಗಿ ನ್ಯಾಯಮೂರ್ತಿ ಎ.ಜೆ. ಸದಾಶಿವ ಅವರು ಸರ್ಕಾರಕ್ಕೆ ತಮ್ಮ ವರದಿಯನ್ನು ಸಲ್ಲಿಸಿದಾಗಲೂ ಇದೇ ರೀತಿಯಲ್ಲಿ ರಾಜ್ಯದ ದಲಿತ ಸಮುದಾಯಗಳು ಎರಡು ಗುಂಪುಗಳಾಗಿ ಒಡೆದು ಪರಸ್ಪರ ವಿರುದ್ಧವಾಗಿ ಬೀದಿಗಿಳಿದಿದ್ದರು.

ಲಂಬಾಣಿ ಬಂಜಾರಾ, ಭೋವಿ, ಕೊರಮ ಮತ್ತು ಕೊರಚ ಸಮುದಾಯಗಳನ್ನು ಪರಿಶಿಷ್ಟ ಜಾತಿಗಳ ಪಟ್ಟಿಯಿಂದ ತೆಗೆದು ಹಾಕಬೇಕೆಂದು ಕೋರಿ ಕಲಬುರ್ಗಿಯ ಕರ್ನಾಟಕ ರಾಜ್ಯ ಅಸ್ಪ್ರಶ್ಯ ಸಮಾಜ ಮಹಾಸಭಾ ರಾಜ್ಯ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿತ್ತು. ಅರ್ಜಿಯನ್ನು ವಿಚಾರಣೆಗೆ ಎತ್ತಿಕೊಂಡ ನ್ಯಾಯಾಲಯವು ಈ ಕುರಿತು ಸಾರ್ವಜನಿಕರ ಅಭಿಪ್ರಾಯಗಳನ್ನು ಸಂಗ್ರಹಿಸಿ ವರದಿ ಮಾಡಲು ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗಕ್ಕೆ ನಿರ್ದೇಶನ ನೀಡಿತು. ಇದೇ ಜುಲೈ 2 ರಂದು ಸಾರ್ವಜನಿಕರಿಂದ ಮತ್ತು ಸಂಘ ಸಂಸ್ಥೆಗಳಿಂದ ಮನವಿ ಸ್ವೀಕರಿಸಲು ಆಯೋಗ ಬೆಂಗಳೂರಿಗೆ ಬಂದಾಗ ದಲಿತ ಸಮುದಾಯಗಳ ನಡುವೆ ಹೆಚ್ಚುತ್ತಿರುವ ಒಡಕು ಬಯಲಿಗೆ ಬಂತು.


ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನವ ಉದಾರೀಕರಣದ ಧೋರಣೆಗಳ ಹಿನ್ನೆಲೆಯಲ್ಲಿ ದಲಿತರ ಮತ್ತು ಇತರ ದಮನಿತ ವರ್ಗಗಳ ಜನಗಳು ತಮ್ಮ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕಳೆದಕೊಳ್ಳುತ್ತಿರುವಾಗ, ಈ ದಾಳಿಯ ವಿರುದ್ಧ ದಲಿತರೆಲ್ಲರೂ ಒಂದಾಗಿ ಹೋರಾಟ ಮಾಡಬೇಕಾಗಿರುವಾಗ ದಲಿತರನ್ನು ಒಡೆಯುವ ಹುನ್ನಾರ ನಡೆದಿರುವುದು ಆಘಾತಕಾರಿಯಾಗಿದೆ. ಶಿಕ್ಷಣ ಮತ್ತು ಉದ್ಯೋಗದ ಕ್ಷೇತ್ರದಲ್ಲಿ ಮೀಸಲಾತಿಯನ್ನು ಒದಗಿಸುವ ಸಂವಿಧಾನದ ನಿರ್ದೇಶನವನ್ನೇ ವಿಫಲಗೊಳಿಸುವ ಪ್ರಯತ್ನ ನಡೆಯುತ್ತಿದೆ. ಸಾರ್ವಜನಿಕ ರಂಗವನ್ನು ಕಳಚಿ ಹಾಕಿ ಖಾಸಗೀಕರಣಕ್ಕೆ ಆದ್ಯತೆ ನೀಡಲಾಗುತ್ತಿರುವುದರಿಂದ ಮೀಸಲಾತಿಗೆ ಅವಕಾಶವೇ ಇಲ್ಲದಂತಾಗುತ್ತಿದೆ. ಸರ್ಕಾರದ ಖಾಸಗೀಕರಣ ನೀತಿಯ ವಿರುದ್ಧ ಹಾಗೂ ಖಾಸಗೀ ರಂಗದಲ್ಲಿಯೂ ದಲಿತರಿಗೆ ಮೀಸಲಾತಿಯನ್ನು ವಿಸ್ತರಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಲು ದಲಿತರೆಲ್ಲರೂ ಮೊದಲಿಗಿಂತಲೂ ಹೆಚ್ಚು ಒಗ್ಗಟ್ಟಿನಿಂದ ಹೋರಾಡುವುದು ಅತ್ಯಗತ್ಯವಾಗಿದೆ. ಇಂತಹ ಸನ್ನಿವೇಶದಲ್ಲಿ ದಲಿತರು ಪರಸ್ಪರ ಹೊಡೆದಾಟಕ್ಕೆ ನಿಲ್ಲುವುದು ಅವರ ಹಿತಕ್ಕೇ ವಿರುದ್ಧವಾಗಿದೆ.

ದಲಿತರನ್ನು ವಿಭಜಿಸುವ ಈ ಷಡ್ಯಂತ್ರದ ಅಪಾಯವನ್ನು ಎಲ್ಲಾ ದಲಿತ ಸಮುದಾಯಗಳು ಅರ್ಥಮಾಡಿಕೊಳ್ಳಬೇಕು. ತಮ್ಮ ನಡುವಿನ ಭಿನ್ನತೆಗಳನ್ನು ಮತ್ತು ಭಿನ್ನಾಭಿಪ್ರಾಯಗಳನ್ನು ಪರಸ್ಪರ ಪ್ರೀತಿ ವಿಶ್ವಾಸದಿಂದ ಬಗೆಹರಿಸಿಕೊಳ್ಳಬಹುದು. ಎಲ್ಲ ದಲಿತ – ದಮನಿತರ ಸಾಮಾನ್ಯ ಶತ್ರುವಿನ ವಿರುದ್ಧ ಅಂದರೆ ಉದಾರೀಕರಣ, ಖಾಸಗೀಕರಣ ನೀತಿಗಳ ವಿರುದ್ಧ ಎಲ್ಲರೂ ಹೆಚ್ಚು ಒಗ್ಗಟ್ಟಿನಿಂದ ಹೋರಾಡುವುದು ಸಾಧ್ಯವಾಗಬೇಕಾಗಿದೆ. ಪರಿಶಿಷ್ಟ ಜಾತಿಗಳ ಪಟ್ಟಿಯ ವಿಷಯದಲ್ಲಿ ಯಥಾಸ್ಥಿತಿಯನ್ನು ಮುಂದುವರೆಸಬೇಕೆಂದು ಒತ್ತಾಯಿಸುವುದು ದಲಿತರ ನಡುವಿನ ಒಗ್ಗಟ್ಟನ್ನು ಬಲಪಡಿಸಲು ಪೂರಕವಾಗಲಿದೆ.

ದಲಿತರ ನಡುವೆ ಸ್ಪ್ರಶ್ಯರು ಮತ್ತು ಅಸ್ಪ್ರಶ್ಯರು ಎಂದು ಭೇದ ಮಾಡುವುದೇ ಸರಿಯಲ್ಲ. ಯಾರೂ ಅಸ್ಪ್ರಶ್ಯರಲ್ಲ. ಯಾರನ್ನಾದರೂ ಅಸ್ಪ್ರಶ್ಯರೆಂದು ಪರಿಗಣಿಸುವುದು ಕಾನೂನು ಬಾಹೀರವಾಗಿದೆ. ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ಅಸ್ಪಶ್ಯತೆಯ ವಿರುದ್ಧ ಎಲ್ಲರೂ ಸೇರಿಕೊಂಡು ಹೋರಾಡಬೇಕಾಗಿದೆ. ದಲಿತರೆಲ್ಲರೂ ಅಸ್ಪ್ರಶ್ಯತೆ ವಿರುದ್ಧ ಹೋರಾಡಲು ಒಂದಾಗಬೇಕಾಗಿದೆ. ದಲಿತರ ನಡುವಿನ ಒಡಕು ಅಸ್ಪ್ರಶ್ಯತೆಯನ್ನು ಆಚರಿಸುವ – ಪ್ರತಿಪಾದಿಸುವ ಮಾನವ ವಿರೋಧಿ ಶಕ್ತಿಗಳನ್ನು ಬಲಪಡಿಸುತ್ತದೆ. ದಲಿತರ ಒಗ್ಗಟ್ಟಿನಲ್ಲೇ ಅವರ ಬಲವಿದೆ. ರಾಜ್ಯ ಸರ್ಕಾರ ಕೈಗೊಳ್ಳಲು ಹೊರಟಿರುವ ಜಾತಿವಾರು ಸಮೀಕ್ಷೆಯೂ ಸಹ ಹಿಂದುಳಿದ ಜಾತಿಗಳಲ್ಲಿ ಒಡಕನ್ನು ಉಂಟು ಮಾಡಲು ಬಳಕೆಯಾಗದಂತೆ ಎಚ್ಚರಿಕೆ ವಹಿಸಬೇಕು.

ಕೊಡಬೇಕಾಗಿರುವುದು ಅಕ್ಕಿ ಮಾತ್ರವೇ ಅಲ್ಲಾ. . .

ಅಂತೂ ಹಲವು ಅನುಮಾನಗಳು, ಗೊಂದಲಗಳ ನಡುವಿನಲ್ಲಿ ಮುಗ್ಗಲು ಹಿಡಿಯುತ್ತಿದ್ದ 1ರೂ. ಗೆ ಕೆಜಿ ಅಕ್ಕಿ ನೀಡುವ ಯೋಜನೆ ಬಡವರ ಪಾತ್ರೆಯಲ್ಲಿ ಅನ್ನವಾಗಿ ಅರಳುವ ಅವಕಾಶ ಒದಗಿದೆ. ಬಜೆಟ್ ಮಂಡನೆಯ ಸಿದ್ಧತೆಯಲ್ಲಿರುವಾಗಲೇ ಸಿದ್ಧರಾಮಯ್ಯನವರ ಸರಕಾರ ಇದೇ 2013ರ ಜುಲೈ11ರಂದು ಯೋಜನೆಯ ಜಾರಿಯನ್ನು ರಾಜ್ಯದಲ್ಲಿ ಆರಂಭಿಸಿದೆ. ಇದರಿಂದ ಅಂತ್ಯೋದಯದ 11ಲಕ್ಷದ 11 ಸಾವಿರ ಒಳಗೊಂಡು ಒಟ್ಟು ಸುಮಾರು 98ಲಕ್ಷ ಬಿಪಿಎಲ್ ಕಾರ್ಡ್‌ದಾರರರು ಫಲ ಪಡೆಯಲಿದ್ದಾರೆ ಎಂದಿದೆ ಸರಕಾರ. ಒಬ್ಬ ಸದಸ್ಯನಿಗೆ 10ಕೆಜಿ, ಇಬ್ಬರಿದ್ದರೆ 20 ಅದರ ನಂತರ ಅದೆಷ್ಟೇ ಸಂಖ್ಯೆಯಲ್ಲಿದ್ದರೂ ಆ ಕುಟುಂಬ ಗರಿಷ್ಠವಾಗಿ 30ಕೆಜಿ ಪಡೆಯಲಿದೆ. ಸರಕಾರದ ಲೆಕ್ಕದಂತೆ 5.7 ಕೋಟಿ ಜನ ಫಲಾನುಭವಿಗಳಾಗಲಿದ್ದಾರೆ(?) ಅದರಂತೆ ಪ್ರತಿ ತಿಂಗಳು 2 ಲಕ್ಷದ 78,428 ಕೆಜಿ ಅಕ್ಕಿ ಬೇಕಾಗುತ್ತದೆ. ಇದಕ್ಕೆ ಕೊರತೆ ಇರುವ ಲಕ್ಷ ಟನ್ ನಷ್ಟು ಅಕ್ಕಿಯನ್ನು ಹೊರ ರಾಜ್ಯದಿಂದ ತರಿಸಿಕೊಳ್ಳುವ ಪ್ರಯತ್ನಗಳಿವೆ. ಇದರಿಂದ ಅಂದಾಜು ವರ್ಷಕ್ಕೆ 4200 ಕೋಟಿ ರೂ. ಗಳು ಬೇಕಾಗುತ್ತವೆ ಎಂಬ ಅಂದಾಜು. ಲಕ್ಷ ಕೋಟಿ ಮೀರಿದ ಬಜೆಟ್ ನಲ್ಲಿ ಇದು ಅಸಮಾನ್ಯವೇನಲ್ಲ.



ಹಸಿವಿಗೆ ಮುಕ್ತಿ ಇದೆಯೇ?

ಕೇಂದ್ರದಲ್ಲಿನ ಕಾಂಗ್ರೆಸ್ ನೇತೃತ್ವದ ಯು.ಪಿ.ಎ–2 ಸರಕಾರ ಆಹಾರ ಭದ್ರತಾ ಮಸೂದೆ



ಅಂಗೀಕರಿಸಿಯೂ ಜನಸಾಮಾನ್ಯರ ಅನ್ನ ಕಸಿಯುವ ಯೋಜನೆಯ ಅನುಷ್ಠಾನದಲ್ಲಿ ಬಿಗಿಯಾಗಿ ನಿಂತಿರುವಾಗ ರಾಜ್ಯದಲ್ಲಿನ ಕಾಂಗ್ರೆಸ್ ಸರಕಾರ ಬಡವರ ಬಗ್ಗೆ ಉದಾರವಾಗಿದೆ ಎಂದು ಭಾವಿಸುವ ಅಗತ್ಯವಿಲ್ಲ. ಚುನಾವಣೆಯ ಪ್ರಣಾಳಿಕೆಯ ಎಲ್ಲಾ ಭರವಸೆಗಳನ್ನು ಧೃಡವಾಗಿ ಜಾರಿಗೊಳಿಸುತ್ತದೆ ಎಂದೂ ಅಂದುಕೊಳ್ಳಲಾಗುವುದಿಲ್ಲ. ಅಥವಾ ಮುಖ್ಯಮಂತ್ರಿಗಳು ಹೇಳಿದಂತೆ 'ಹಸಿವು ಮುಕ್ತ, ಗುಡಿಸಲು ಮುಕ್ತ ಕರ್ನಾಟಕದ ನಿರ್ಮಾಣ'ವೂ ಕನಸಿನಲ್ಲಿಯಂತೆ ಕೈಗೂಡುವುದೆಂದು ಭ್ರಮಿಸಬೇಕಿಲ್ಲ. ಆಡಳಿತ ಪಕ್ಷದ ನಾಯಕರು ಅದೇನೇ ಹೇಳಿಕೊಂಡರೂ ಇಂತಹ ಕ್ರಮಗಳ ಹಿಂದೆ ರಾಜಕಿಯ ಲಾಭದ ಉದ್ದೇಶ ತಳ್ಳಿ ಹಾಕಲಾಗುವುದಿಲ್ಲ. ಅದನ್ನು ಆಂಧ್ರ, ತಮಿಳುನಾಡು ಮುಂತಾದೆಡೆ ಕಾಂಗ್ರೆಸ್ ತಡವಾಗಿಯಾದರೂ ಕಂಡಿದೆ.

ಮುಖ್ಯ ಪ್ರಶ್ನೆ, ಇಂದು ಏರುತ್ತಲೇ ಇರುವ ಅಗತ್ಯ ವಸ್ತುಗಳ ಬೆಲೆಗಳಿಂದಾಗಿ ಬಹುತೇಕ ಎಲ್ಲಾ ವರ್ಗಗಳ ದುಡಿಯುವ ಜನತೆ ತತ್ತರಿಸುತ್ತಿದ್ದಾರೆ. ದಿನಕ್ಕೆ 20ರೂ. ಆದಾಯ ಮೀರದವರ ಸಂಖ್ಯೆ ಕೋಟಿಗಳನ್ನು ಮೀರಿ ಬೆಳೆಯುತ್ತಲಿದೆ. ಆದ್ದರಿಂದಲೇ ಇಂತಹ ಒಂದು ಸಮಗ್ರ ಆಹಾರ ಭದ್ರತಾ ಯೋಜನೆ ಮಧ್ಯಮ ವರ್ಗವನ್ನೂ ಒಳಗೊಂಡು ಎಲ್ಲಾ ವಿಭಾಗಗಳಿಗೆ ವಿಸ್ತರಣೆಯಾಗಬೇಕೆಂದು ಎಡ ಪಕ್ಷಗಳು ನಿರಂತರ ಆಗ್ರಹಿಸುತ್ತಿರುವುದು.

ಅರ್ಥಹೀನ ಟೀಕೆಗಳು

ನಿಜ, ರಾಜ್ಯದಲ್ಲಿನ ಈ ಯೋಜನೆಯಿಂದ ಬಡ ಕುಟುಂಬಗಳಿಗೆ ಖಂಡಿತವಾಗಿಯೂ ನೆರವಾಗಲಿದೆ. ಇದರಿಂದ 'ಜನ ಸೋಮಾರಿಗಳಾಗುತ್ತಾರೆ' ಎಂಬ ಸ್ಥಾಪಿತ ಹಿತಾಸಕ್ತಿಗಳ ಟೀಕೆಗೆ ಯಾರೂ ಸೊಪ್ಪು ಹಾಕಬೇಕಿಲ್ಲ. ಅದು ದುರದ್ದೇಶದ್ದು. ಜನರ ದಾರುಣ ಸ್ಥಿತಿಯ ಬಗ್ಗೆ ಅರಿಯದೇ ಅಥವಾ ಅರಿಯಲು ನಿರಾಕರಿಸುವವರ ಉಡಾಫೆಯ ಜನರ ಸಂಖ್ಯೆಯೂ ಅಧಿಕವಿದೆ. ಕೇವಲ ನಾಲ್ಕು ವರುಷಗಳಲ್ಲೇ ಸುಮಾರು 5 ಲಕ್ಷದ 60 ಸಾವಿರ ಕೋಟಿ ರೂಪಾಯಿಗಳ ತೆರಿಗೆ ರಿಯಾಯಿತಿಯನ್ನು ಕಾರ್ಪೋರೇಟ್ ಕಂಪನಿಗಳು ಪಡೆದಿರುವುದನ್ನಾಗಲೀ, ರಾಜ್ಯದಲ್ಲಿ ಇನ್ನಷ್ಟು ರಿಯಾಯಿತಿಗಳನ್ನು ಕೇಳುತ್ತಿರುವ ವಿಪ್ರೋ, ಇನ್‌ಫೋಸಿಸ್ , ರಿಲೆಯೆನ್ಸ್ ನಂತಹ ತೆರಿಗೆಗಳ್ಳ ಕಂಪನಿಗಳ ಲೂಟಿಯ ವಾಂಛೆಯ ಬಗ್ಗೆ ಏನೂ ಮಾತನಾಡದ ಈ ವಿಭಾಗವೇ ಬಡಜನರ ಒಡಲಿನ ಗಂಜಿಯನ್ನು ವಿರೋಧಿಸುವುದು ಖಂಡನೀಯ. ಇಂತಹ ಟೀಕೆಗಳ ಹಿಂದೆ ಶ್ರಮ ಶೋಷಣೆಯ ಸಮರ್ಥನೆಯ, ಸ್ವಾರ್ಥ ಸಾಧನೆಯ ದುಷ್ಟ ಹಂಚಿಕೆ ಇದೆ. ಅಂತಹವರಲ್ಲಿರುವುದು ಖಜಾನೆಯ ಕಾಸಿನ ಬಗೆಗಿನ ಕಾಳಜಿಯಲ್ಲ, ಬದಲಾಗಿ ಬಡವರ ಬಗೆಗಿನ ದ್ವೇಷ!

ಅದಷ್ಟೇ ಸಾಲದು

ನಮ್ಮ ಪ್ರಶ್ನೆ ದುಡಿಯುವವರ ಆದಾಯ ಕುಸಿತ, ಕಸಿತ ನಿರಂತರವಿರುವಾಗ ಕೇವಲ ಅಕ್ಕಿ ನೀಡಿಕೆಯೊಂದೇ ಈ ಕುಟುಂಬಗಳನ್ನು ಸಂಕಷ್ಟದಿಂದ ಪಾರು ಮಾಡುವುದಿಲ್ಲ. ಈಗ ನೀಡುತ್ತಿರುವ ಅಕ್ಕಿಯನ್ನು ಹೆಚ್ಚಿಸಬೇಕು(ಕನಿಷ್ಟ ಒಂದು ಕಿರು ಕುಟುಂಬಕ್ಕೆ 35 ಕೆಜಿ ಗೆ). ಅಕ್ಕಿ ಮಾತ್ರವಲ್ಲ ಜೋಳ, ರಾಗಿ ಯಂತಹ ಧಾನ್ಯಗಳನ್ನು ವಿವಿಧ ಪ್ರದೇಶಗಳ ಜನರ ಆಹಾರ ಪದ್ಧತಿಗನುಗುಣವಾಗಿ ವಿತರಿಸಬೇಕು. ಅಲ್ಲದೇ ಮುಖ್ಯವಾಗಿ ಇದರೊಂದಿಗೆ ಆಹಾರಕ್ಕೆ ಅಗತ್ಯವಾಗಿರುವ ಬೇಳೆ, ಎಣ್ಣೆ, ಮೆಣಸಿನಕಾಯಿ ಮುಂತಾದ ಅಗತ್ಯ ವಸ್ತುಗಳನ್ನು ರಿಯಾಯಿತಿ ಧರಗಳಲ್ಲಿ ಸರಕಾರ ನೀಡಬೇಕು. ಅಂದಾಗಲೇ ಅವರಿಗೆ ಕನಿಷ್ಟ ಆಹಾರದ ಭದ್ರತೆ ಸಿಗಲು ಸಾಧ್ಯ. ಇದು ಅಸಾಧ್ಯವೇನಲ್ಲ ಎಂಬುದನ್ನು ಎಡ ಪಕ್ಷಗಳ ನೇತೃತ್ವದ ಸರಕಾರಗಳು ತೋರಿಸಿವೆ. ಬೇಕಿರುವುದು ಜನಪರವಾದ ಬದ್ಧತೆ. ಜನರನ್ನು

ಪುಟ 4 ಕ್ಕೆ

ಬಿಬಿಎಂಪಿ ಹೊರಗುತ್ತಿಗೆ ಕಂಪ್ಯೂಟರ್ ಆಪರೇಟರ್‌ಗಳ ಮುಂದುವರಿಕೆಗಾಗಿ ಹೋರಾಟ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ)ಯ 260 ಸಹಾಯಕ ಕೇಂದ್ರಗಳಲ್ಲಿ ಕಂದಾಯ ಪಾವತಿಗೆ ಸಂಬಂಧಿಸಿದ ಕೆಲಸ, ಚುನಾವಣೆ ಗುರುತು ಪತ್ರ ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ಅಲ್ಲದೇ ಆರೋಗ್ಯ ಮತ್ತು ಇನ್ನಿತರೆ ದೈನಂದಿನ ಕಛೇರಿ ಕೆಲಸಗಳಿಗೆ ಕಂಪ್ಯೂಟರ್ ಆಪರೇಟರ್‌ಗಳ ಸೇವೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಹಲವಾರು ವರ್ಷಗಳಿಂದಲೂ ಬಿಬಿಎಂಪಿ ಪಡೆಯುತ್ತಾ ಬಂದಿದೆ. ಈ ಕೇಂದ್ರಗಳಲ್ಲಿ 290ಕ್ಕೂ ಅಧಿಕ ಕಂಪ್ಯೂಟರ್ ಆಪರೇಟರ್‌ಗಳು ದುಡಿಯುತ್ತಾ ಬಂದಿದ್ದಾರೆ. ಬಿಬಿಎಂಪಿಯ ಒಂದೇ ಒಂದು ಆದೇಶ ಅವರನ್ನು ಅವರ ಕೆಲಸದಿಂದ ಕಿತ್ತೆಸೆದಿದೆ.



ಬಡ ಕುಟುಂಬದಿಂದ ಬಂದವರು, ಹಿಂದುಳಿದ ವರ್ಗದವರು, ದಲಿತರು, ಅಂಗವಿಕಲರು ವಿಧವೆಯರು ಮತ್ತು ಏನೋ ಒಂದು ಕೆಲಸದ ಆಸರೆ ಇದೆಯೆಂದು ಬೇರೆ ಕೆಲಸದ ಕಡೆ ಗಮನ ಕೊಡದೇ ಉಳಿದವರು ಹೀಗೆ ನಾನಾ ಹಿನ್ನೆಲೆಯ ವಿದ್ಯಾವಂತರು ಇಲ್ಲಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಬಿಬಿಎಂಪಿಯ ಅಪರ ಆಯುಕ್ತರು (ಆಡಳಿತ) ಜೂನ್ 29, 2013 ರಂದು ಕೊಟ್ಟ ಆದೇಶ ಕಂಪ್ಯೂಟರ್ ಆಪರೇಟರ್‌ಗಳ ಸೇವೆಯನ್ನು 'ಅಂತಿಮ'ಗೊಳಿಸುವಂತೆ ಹೇಳಿದೆ.

ಗುತ್ತಿಗೆ ಉಪ ಗುತ್ತಿಗೆ ಎಂಬ ಸರಣಿ ಶೋಷಕ ವ್ಯವಸ್ಥೆ

ಈ ನೌಕರರೆಲ್ಲಾ 'ಕಿಯೋನಿಕ್ಸ್' ಸಂಸ್ಥೆಯ ಮೂಲಕ ಕೆಲಸಕ್ಕೆ ಬಂದವರು. ಕಿಯೋನಿಕ್ಸ್ ಇಲ್ಲಿ ಮುಖ್ಯ ಗುತ್ತಿಗೆದಾರ ಸಂಸ್ಥೆಯಂತೆ. ಆದರೆ ಇಲ್ಲಿ ಆ ಸಂಸ್ಥೆ ಮಾತ್ರ ಇಲ್ಲ. ಎಂ.ಎಂ. ಅಡ್ವನ್‌ಟೆಜ್, ಮಯೂರ್ ಎಂಟರ್ ಪ್ರೈಸಸ್ ಮುಂತಾದ ಉಪ ಗುತ್ತಿಗೆದಾರರ ಮೂಲಕ ನೌಕರರು ನೇಮಕವಾಗಿದ್ದಾರೆ.

ಕಂಪ್ಯೂಟರ್ ಆಪರೇಟರ್‌ಗಳಿಗೆ ಸರ್ಕಾರದಿಂದ ನಿಗದಿಯಾಗಿರುವ ಕನಿಷ್ಟ ವೇತನ ಮಾತ್ರ ಇವರಿಗೆ ಸಿಗುತ್ತಿತ್ತು. ಅದು ತಿಂಗಳಿಗೆ 6532.00 ರೂ. ಬೆಂಗಳೂರು ಮಹಾನಗರದಲ್ಲಿ ತಿಂಗಳಿಗೆ 6,532 ರೂ ಸಂಬಳ ತೆಗೆದುಕೊಂಡು ಬದುಕು ನೂಕುವುದು ಹೇಗೆ ? ಗುತ್ತಿಗೆದಾರ ಸಂಸ್ಥೆಗೆ ಪ್ರತಿ ನೌಕರರ ವೇತನದ ಲೆಕ್ಕದಲ್ಲಿ ಸು. 10,700 ರೂಪಾಯಿ ಕೈ ತಲುಪುವುದಂತೆ. ಆದರೆ ವೇತನ ಬಿಬಿಎಂಪಿ ಖಜಾನೆಯಿಂದ ಕೈ ಬದಾಲಾಯಿಸಿ ಬದಲಾಯಿಸಿ ನೌಕರರ ಕೈ ತಲುಪುವ ಹೊತ್ತಿಗೆ ಅದು ಮೇಣದಂತೆ ಎಲ್ಲರ ಕೈಗೆ ಮೆತ್ತಿಕೊಂಡು ಕರಗಿ ಇಷ್ಟಾಗುತ್ತಿತ್ತು. ಈಗ ಅದೂ ಇಲ್ಲ ಎಂದು ಬಿಬಿಎಂಪಿ ಕೈ ತಿರುಗಿಸುತ್ತಿದೆ.

ಬಿಬಿಎಂಪಿಯು ಕಂದಾಯ ಪಾವತಿ, ಚುನಾವಣಾ ಗುರುತು ಪತ್ರ ಮುಂತಾದ ದಾಖಲೆಗಳನ್ನು 'ಆನ್ ಲೈನ್' ಮೂಲಕವೇ ಮಾಡಿಸುತ್ತೇವೆ ಎನ್ನುತ್ತಿದೆ. ಅಂದರೆ ಉಪ ಕೇಂದ್ರವೂ ಬೇಡ, ಸಿಬ್ಬಂದಿಯೂ ಬೇಡ. ಕೆಲಸ ಆಗಬೇಕು ಎನ್ನುವ ಜನರೇ ಎಲ್ಲೋ ಖಾಸಗಿ ಇಂಟರ್ ನೆಟ್ ಕೇಂದ್ರಗಳಲ್ಲಿ ಒದ್ದಾಡಲಿ. ನಮಗೇನು ಎನ್ನುವ ಧೋರಣೆ ಬಿಬಿಎಂಪಿ ತಲೆಗೆ ಹೊಕ್ಕಿದೆ.

ಇದೇ ವರ್ಷ ಮೇ 19 ರಿಂದ 21 ರವರೆಗೆ ಈ ನೌಕರರು ಮೂರು ದಿನಗಳ ಮುಷ್ಕರ ಮಾಡಿದ್ದರು. ಕಾರಣ, 6 ತಿಂಗಳು ಅವರಿಗೆ ಸಂಬಳ ಸಿಕ್ಕಿರಲಿಲ್ಲ. ಆಗ ಮಾಡಿದ ಹೋರಾಟದಿಂದ 4 ತಿಂಗಳ ವೇತನ ದೊರೆಯಿತು. ಮತ್ತೆ 2 ತಿಂಗಳ ವೇತನದ ಬಾಕಿ ಹಾಗೇ ಉಳಿಯಿತು. ಈಗ ಮತ್ತೆ ಒಂದು ತಿಂಗಳ ವೇತನವನ್ನು ಬಾಕಿ ಇರಿಸಿಕೊಂಡು ಅಂದರೆ ಒಟ್ಟು ಮೂರು ತಿಂಗಳ ವೇತನವನ್ನು ಕೊಡದೇ ನೌಕರರನ್ನು ಹೊರಗೆ ಹಾಕಲಾಗಿದೆ.

ಈ ನೌಕರರು ಸಂಘ ಮಾಡಿಕೊಳ್ಳುತ್ತಾರೆ. ಬಾಕಿ ಸಂಬಳ ಕೊಡಿ ಎನ್ನುತ್ತಾರೆ. 'ಕೇಳಬಾರದ್ದೇನೇನೋ' ಕೇಳುತ್ತಾರೆ. ಆದ್ದ-ರಿಂದ ನೌಕರರೇ ಬೇಡ. ಅವರ ತಂಟೆಯೇ ಬೇಡ. !!?? ಭಲೇ. ಭೇಷ್. ಬೆಂಗಳೂರು ನಗರದ ರಸ್ತೆಗಳು, ಬೀದಿಗಳಿಂದ ಕಸವನ್ನು ತೆಗೆಯದಿದ್ದರೆ ಏನಂತೆ. ನೌಕರರನ್ನು 'ತೆಗೆಯುವ' ಬಿಬಿಎಂಪಿ ಶೌರ್ಯಕ್ಕೆ ತಲೆದೂಗಲೇ ಬೇಕು.

ಪ್ರತಿಭಟನೆ

ನೌಕರರು ಮತ್ತೆ ಪ್ರತಿಭಟನೆಗೆ ಮುಂದಾಗಿದ್ದಾರೆ. ಜುಲೈ 3 ರಂದು ಕಾರ್ಮಿಕರ ಆಯುಕ್ತ ಕಛೇರಿ ಮುಂದೆ, ಜುಲೈ 4 ರಂದು ಬಿಬಿಎಂಪಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ್ದಾರೆ. 290 ರಷ್ಟು ಜನ ಇರುವ ಈ ನೌಕರರ ಪ್ರತಿಭಟನೆಯಲ್ಲಿ ಸುಮಾರು 450 ಜನ ಭಾಗವಹಿಸಿದ್ದಾರೆ. ಅದು ಹೇಗೆ ಎಂದರೆ–

ಬಿಬಿಎಂಪಿಯ ಸಹಾಯಕ ಕೇಂದ್ರಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುವವರ ಸಂಖ್ಯೆ 290. ಆದರೆ ಬಿಬಿಎಂಪಿಯಲ್ಲಿ ಗುತ್ತಿಗೆ ಆದಾರದಲ್ಲಿ ಒಟ್ಟು 839 ಜನರು ಕೆಲಸ ಮಾಡುತ್ತಿದ್ದಾರೆ. ಬಿಬಿಎಂಪಿಯ ಆಲೋಚನೆ–ಧೋರಣೆ ಅರಿತ ಇತರ ಗುತ್ತಿಗೆ ನೌಕರರೂ ಮುಂದೆ ತಮಗೆ ಒದಗಬಹುದಾದ ಅಪಾಯವನ್ನು ನೆನೆದು ಈ ಹೋರಾಟದಲ್ಲಿ ಪಾಲ್ಗೊಂಡಿದ್ದಾರೆ.

ಬಿಬಿಎಂಪಿಗೆ ಮಾನವೀಯತೆ ಮನುಷ್ಯತ್ವ ಎಂಬುದೆಲ್ಲಾ ಗೊತ್ತಿಲ್ಲ. ಬಿಬಿಎಂಪಿ ಕಛೇರಿಯಲ್ಲಿ ಎಗ್ಗುಸಿಗ್ಗು ಇಲ್ಲದೇ ಲಂಚ ಮುಕ್ಕುವ ಹೊಟ್ಟೆಬಾಕ ಇಲಿ ಹೆಗ್ಗಣಗಳದ್ದೇ ಸಾಮ್ರಾಜ್ಯವಾಗಿದೆ.

ನೌಕರರ ಹಿತರಕ್ಷಣೆಯ ಪ್ರಶ್ನೆ–ಬೆಂಗಳೂರು ನಾಗರೀಕರ ಪ್ರಾಣ ರಕ್ಷಣೆ-ಯ ಪ್ರಶ್ನೆಗೂ ಬಿಬಿಎಂಪಿಗೂ ಯಾವ ಸಂಬಂಧ ?!! ಹೋರಾಟ ಮುಂದುವರಿದಿದೆ. ನೌಕರರ ಹೋರಾಟದ ದೃಢತೆ–ಐಕ್ಯತೆ-ಯೇ ಅವರನ್ನು ಗೆಲ್ಲಿಸಿ ದಡಸೇರಿಸಬೇಕು. ನೌಕರರು 'ಬಿಬಿಎಂಪಿ ಕಂಪ್ಯೂಟರ್ ಆಪರೇಟರ್ಸ್ ಯೂನಿಯನ್' ಎಂಬ ಸಂಘ ರಚಿಸಿಕೊಂಡಿದ್ದಾರೆ. ಪಳನಿಸ್ವಾಮಿ.ಜಿ.ಕೆ. ಪ್ರಧಾನ ಕಾರ್ಯದರ್ಶಿಯಾಗಿದ್ದಾರೆ. ತನುಜಾಕ್ಷಿ.ಕೆ.ಎಂ ಸಂಘದ ಅಧ್ಯಕ್ಷರು. ಇವರ ನೇತೃತ್ವದಲ್ಲಿ ಹೋರಾಟ ಮುಂದುವರೆದಿದೆ. ಗುತ್ತಿಗೆ ನೌಕರರು ಮಾತ್ರವಲ್ಲ ಕಾರ್ಮಿಕರ ವರ್ಗ ಎಲ್ಲ ವಿಭಾಗಳಿಂದಲೂ ಹೋರಾಟಕ್ಕೆ ಬೆಂಬಲ ಅಗತ್ಯವಾಗಿ ಬೇಕಾಗಿದೆ.

ಕೊಡಬೇಕಾಗಿರುವುದು....

ಪುಟ 3 ರಿಂದ

ಪ್ರೀತಿಸುವ, ಅವರ ಬದುಕಿನ ಬಗೆಗಿನ ನೈಜ ಕಾಳಜಿ.

ಮತ್ತೊಂದು ಪ್ರಶ್ನೆ, ಅರ್ಹ ಎಲ್ಲರಿಗೂ ಬಿಪಿಲ್ ಕಾರ್ಡ್ ಸಿಕ್ಕದ್ದಾವೆಯೇ? ಸರಕಾರ ನೀಡುವ ಅಂಕಿಗಳನ್ನು ಗಮನಿಸಿದರೆ ನೀಡಿದಂತೆ ಭಾಸವಾಗಬಹುದು. ಆದರೆ ವಾಸ್ತವದಲ್ಲಿ ಅರ್ಹ ಜನರಿಗೆ ಪೂರ್ತಿ ಸಿಕ್ಕಿಲ್ಲ. ಅದು ಸಿಗುವಂತಾಗಬೇಕು. ಈಗಲೂ 12 ಲಕ್ಷ ಕುಟುಂಬಗಳು ಅರ್ಜಿ ಹಾಕಿ ಕಾದಿವೆ. ಬಡ ಜನರನ್ನು ಸತಾಯಿಸಲಾಗುತ್ತಿದೆ, ಲಂಚವನ್ನೂ ಕೇಳಲಾಗುತ್ತದೆ. ಕಾರ್ಡು ಮಾಡಿಸಲು ಅನುಸರಿಸುವ ಮಾನದಂಡಗಳು, ದುರ್ಗಮ ವಿಧಾನಗಳೂ ಬದಲಾಗಲೇಬೇಕು. ಕೆಲವೆಡೆ ಬಲಾಢ್ಯರು, ಸ್ಥಾಪಿತ ಹಿತಾಸಕ್ತಿಗಳು ಅವುಗಳನ್ನು ದಕ್ಕಿಸಿಕೊಂಡಿದ್ದಾರೆ. (ಬಿಜೆಪಿಯ ಮಾಜಿ ಸಚಿವ ಕಾರಜೋಳರವರ ಕುಟುಂಬವೂ ಈ ಕಾರ್ಡ್ ಹೊಂದಿದೆಯಂತೆ). ಪ್ರಸಕ್ತವಾಗಿ ರೇಷನ್ ನೀಡಿಕೆಯಲ್ಲೂ ಹಲವಾರು ಸೋರಿಕೆಗಳಿವೆ, ಮದ್ಯವರ್ತಿಗಳ ನುಂಗಾಟಗಳಿವೆ. ಇವನ್ನೆಲ್ಲಾ ಸರಿಪಡಿಸಬೇಕು.

ಕೇಂದ್ರದ ಸರಕಾರ ಆಹಾರ ಹಕ್ಕಿನ ಮಸೂದೆಯನ್ನು ನಾಲ್ಕು ವರ್ಷಗಳ ಕಾಲ ನೆನೆಗುದಿಯಲ್ಲಿಟ್ಟು ಅದನ್ನು ಸಂಸತ್ತಿನ ಚರ್ಚೆಗೆ ಒಳಪಡಿಸದೇ ಇದೀಗ ಬೇ-ಕೆಂದೇ ತರಾತುರಿಯಲ್ಲಿ ಸುಗ್ರೀವಾಜ್ಞೆ ಹೊರಡಿಸಿದೆ. ಇದರಲ್ಲಿ ಇರಲೇಬೇಕಾದ ಸಾರ್ವಜನಿಕ ವಿತರಣಾ ವ್ಯವಸ್ಥೆ ಬಲಗೊಳಿಸುವ, ಸಾರ್ವತ್ರಿಕಗೊಳಿಸುವ ಅಂಶವೇ ಇಲ್ಲ. ಮೇಲಾಗಿ ಟಾರ್ಗೆಟ್ ಪದ್ಧತಿ ಮುಂದುವರಿಯಲಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲಾ ಅರ್ಹರಿಗೆ ನೀಡುವ ಬದಲು ಕೇವಲ ಸೀಮಿತವಾದ ಶೇ. ಪ್ರಮಾಣವನ್ನು ನಿಗದಿಗೊಳಿಸಲಾಗುತ್ತದೆ. ಹೀಗಾದಲ್ಲಿ ಅರ್ಹ ಗಣನೀಯ ವಿಭಾಗಗಳು ಹೊರಗುಳಿಯಲಿವೆ. ಅಂ–ದರೆ ಕಾಂಗ್ರೆಸ್ ನ ಕಾಳಜಿ ಎಂತಹುದು?

ಅಸಂಬದ್ಧತೆಗಳು

ಇದೇ ಹೊತ್ತಿನಲ್ಲಿ, ಈ ಯೋಜನೆಯ ಭವಿಷ್ಯವೇನಾದೀತೆಂಬ ಅನುಮಾನ ಕಾಡತೆ-ೂಡಗಿದೆ. ವಿಚಿತ್ರವೆಂದರೆ, ಆಡಳಿತ ಕಾಂಗ್ರೆಸ್‌ನ ಅಧ್ಯಕ್ಷರಾದ ಪರಮೇಶ್ವರ್ ಅಸಮಧಾನ ವ್ಯಕ್ತ ಪಡಿಸಿದ್ದಾರೆ! ಸಂಪುಟದ ಹಿರಿಯ ಸಚಿವ ಹೆಚ್.ಕೆ.ಪಾಟೀಲ್‌ರು ಅನ್ನ, ಹಸಿವು ಕಾಡದ ಆರ್ಥಿಕ ಸಬಲತೆ ಸಾಧಿಸುವ ಉನ್ನತ ಉದ್ದೇಶದ ಭೋಧನೆ ಮಾಡಿ ಈ ಯೋಜನೆ ಅಪ್ರಯೋಜಕವೆನ್ನುವಂತೆ ಸಾರ್ವಜನಿಕವಾಗಿ ಅಸಹನೆ ವ್ಯಕ್ತ ಪಡಿಸಿದ್ದಾರೆ. ಸ್ವಾವಲಂಬನೆ ಸಾಧಿಸುವಂತಾಗಿಸಲು ತಡೆದವರಾದರೂ ಯಾರು? ಇಷ್ಟು ವರ್ಷಗಳೂ 'ಗರೀಬಿ ಹಟಾವೋ ಕಾಂಗ್ರೆಸ್ಸೇ' ಆಳಿದ್ದಲ್ಲವೇ? ಇನ್ನು ಜೆಡಿ ಎಸ್‌ನಂತಹ ಅಧಿಕ್ರತ ಘನ ವಿರೋಧ ಪಕ್ಷ ಕವಿತೆ, ಹಾಸ್ಯದ ಮೂಲಕ ಗೇಲಿ ಮಾಡಿದ್ದಾರೆ.(ಸೋತ ಸಂಕಟದಲ್ಲಿಯೂ ಹಾಸ್ಯ ಪ್ರಜ್ಞೆ ಸಹಾಯಕವಾಗಬಹುದು!) ಇನ್ನು ಬಿಜೆಪಿಯಂತೂ ಬೇಗುದಿಯಲ್ಲಿದೆ.

ನಿಲ್ಲದಿರಲಿ ಆಗ್ರಹ

ಒಟ್ಟಾರೆ, ಇದು ಹಲವರ ರಾಜಕೀಯ ಲೆಕ್ಕಾಚಾರಗಳು, ಅಡ್ಡ ಹಾದಿ ಚಿಂತನೆಗಳ ನಡುವೆ ಮಂಗಮಾಯವಾಗುವ ಸಾಧ್ಯತೆಗಳು ಇಲ್ಲದಿಲ್ಲ. ಆದ್ದರಿಂದ ಜನತೆಯ ಚಳುವಳಿ ಇದನ್ನು ಪರಿಣಾಮಕಾರಿಯಾಗಿ ಜಾರಿಯಾಗುವಂತೆ, ಎಲ್ಲಾ ಅರ್ಹರಿಗೂ , ಪೂರ್ಣವಾಗಿ ವಸ್ತುಗಳು ಸಿಗುವಂತೆ, ವಿಸ್ತರಣೆಗಾಗಿ, ಸಾರ್ವತ್ರಿಕ ಪಡಿತರ ಜಾರಿಗಾಗಿ ಪ್ರಬಲ ಒತ್ತಡ, ಹೋರಾಡ ನಡೆಸಬೇಕು. ಕೇಳುತ್ತಿರುವುದು ನಮ್ಮದೇ ಹಣದ ಸೌಲಭ್ಯಗಳನ್ನು, ಹಕ್ಕುಗಳನ್ನು, ಯಾರೊಬ್ಬರದೋ ಸ್ವಂತ ದುಡಿಮೆಯ ಆಸ್ತಿಯನ್ನಲ್ಲ.

ಕೆಪಿಎಸ್‌ಸಿ ಭ್ರಷ್ಟಾಚಾರ – ಬುಡಮೇಲಾಗಿರುವ ಸಂವಿಧಾನದ ಆಶಯಗಳು.

ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಭ್ರಷ್ಟಾಚಾರ, ಲಂಚಗುಳಿತನದಿಂದ ಕೊಳೆತು ನಾರುತ್ತಿದೆ. ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕಾತಿಯಲ್ಲಿ ನಡೆದ ವ್ಯಾಪಕ ಅಕ್ರಮಗಳು ಬಯಲಾಗಿ, ಮಾಧ್ಯಮಗಳ ಬಾಯಿಗೆ ಪ್ರತಿ ದಿನವೂ ರುಚಿರುಚಿಯಾದ 'ಬ್ರೇಕ್‌ಫಾಸ್ಟ್' ಕೂಡ ಸಿಗುತ್ತಿದೆ.


– ಲಿಂಗರಾಜು

ಇತ್ತೀಚೆಗೆ 361 ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕಾತಿಗಾಗಿ ನಡೆದ ಅಭ್ಯರ್ಥಿಗಳ ಸಂದರ್ಶನ, ನಂತರ ಹೊರಬಂದ ಫಲಿತಾಂಶ ಸಾಕಷ್ಟು ವಿವಾದಗಳನ್ನು ಹುಟ್ಟುಹಾಕಿದೆ. ಈ ಹುದ್ದೆಗಳ ಆಯ್ಕೆಗಾಗಿ ಕೆಪಿಎಸ್‌ಸಿಯ ಸದಸ್ಯರೊಬ್ಬರು ಕರೆಮಾಡಿ 80 ಲಕ್ಷ ರೂ.ಗಳ ಬೇಡಿಕೆಯನ್ನು ಇಟ್ಟಿದ್ದಾಗಿ ಸ್ವತಃ ಅಭ್ಯರ್ಥಿಯಾಗಿದ್ದ ಡಾ॥ ಮೈತ್ರಿ, ಸ್ಫೋಟಕ ಮಾಹಿತಿಯನ್ನು ಹೊರಹಾಕಿದ್ದಾರೆ. ಒಂದುವೇಳೆ ಈ ವಿಷಯ ಬಹಿರಂಗವಾಗದಿದ್ದಲ್ಲಿ ಎಲ್ಲವೂ 'ಸಹಜ'ವೆನ್ನುವಂತೆ ನಡೆದು ಹೋಗುತ್ತಿತ್ತು. ಈ ವಿಚಾರದಲ್ಲಿ ಡಾ॥ ಮೈತ್ರಿಯವರ ಧೈರ್ಯವನ್ನು ಪ್ರಶಂಸಿಸಲೇಬೇಕು. ಈ ಹುದ್ದೆಗಳು ಅಕ್ಷರಶಃ ಬಿಕರಿಯಾಗಿವೆ. ಬಿಕರಿಯೆಂದರೆ ಅದು ಕೇವಲ ಚಿಲ್ಲರೆ ವ್ಯವಹಾರವಲ್ಲ. ಬರೋಬ್ಬರಿ 80 ಲಕ್ಷ ರೂ. ಅಂದರೆ 361 ಹುದ್ದೆಗಳೂ ಮಾರಾಟವಾಗಿವೆ! ಈ ಆಘಾತಕಾರಿ ಸುದ್ದಿ ವಿದ್ಯಾವಂತ ನಿರುದ್ಯೋಗಿಗಳನ್ನು ಹಾಗು ತನ್ನ ಮಗ/ಮಗಳು ದೊಡ್ಡ ಅಧಿಕಾರಿಯಾಗಬೇಕೆಂಬ ಕನಸು ಕಾಣುತ್ತಿದ್ದ ಪೋಷಕರನ್ನು ಬೆಚ್ಚಿಬೀಳಿಸದೆ ಇರಲಾರದು.

ಈ ವಿಷಯದಲ್ಲಿ ನೂತನ ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ಆದೇಶಿಸಿದೆ. ತನಿಖೆ ಆರಂಭದ ಹಂತದಲ್ಲಿದ್ದರೂ ಅದು ಕೆಪಿಎಸ್‌ಸಿ ಮಾಜಿ ಅಧ್ಯಕ್ಷರಾದ ಗೋನಾಳ್ ಭೀಮಪ್ಪ ಮತ್ತು ಇತರೆ ಸದಸ್ಯರ ಕೊರಳಿಗೆ ಉರುಳಾಗುವ ಲಕ್ಷಣಗಳು ಕಾಣುತ್ತಿವೆ. ಆದರೆ ತನಿಖೆ ತಾರ್ಕಿಕ ಅಂತ್ಯ ಕಾಣಲಿದೆಯೆ? ಕಾದು ನೋಡಬೇಕು.

ಕೆಪಿಎಸ್‌ಸಿಯಲ್ಲಿನ ಈ ಭ್ರಷ್ಟಾಚಾರ ಇಂದು ನಿನ್ನೆಯದಲ್ಲ. ಇದು ಜನ್ಮ ತಳೆದಂದಿನಿಂದ ಈ ಭ್ರಷ್ಟಾಚಾರದ ಕಳಂಕವನ್ನು ಮೆತ್ತಿಕೊಂಡೇ ಬಂದಿದೆ. ಕೆಪಿಎಸ್‌ಸಿಯಲ್ಲಿ ದುಡ್ಡು ಕೊಡದೇ ಯಾರಾದರೂ ಉದ್ಯೋಗ ಪಡೆದು–ಕೊಂಡಿದ್ದರೆ ಬಹುಶಃ ಅದನ್ನು 'ಪವಾಡ' ಎನ್ನಬಹುದೇನೊ? ಹೀಗಾಗಿ ಕೆಪಿಎಸ್‌ಸಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎನ್ನಲಾದ ಸಂಗತಿ ಯಾರಿಗೂ ಆಶ್ಚರ್ಯವನ್ನು ತರುವುದಿಲ್ಲ. ಏಕೆಂದರೆ ಕೆಪಿಎಸ್‌ಸಿಯಲ್ಲಿ 'ದುಡ್ಡಿದ್ದರೆ ಮಾತ್ರವೇ ಉದ್ಯೋಗ' ಎಂಬ ಅಲಿಖಿತ ನಿಯಮ ಬಹಳ ವರ್ಷಗಳಿಂದಲೂ ಚಾಲ್ತಿಯಲ್ಲಿದೆ. ಇದು ನಮ್ಮ ಶಾಸಕಾಂಗದ 'ಪ್ರಭು'ಗಳಿಗೆ ತಿಳಿಯದ ವಿಚಾರವೇನಲ್ಲ. ಕೆಪಿಎಸ್‌ಸಿ ಛೇರ್‌ಮನ್ ಆಗುವವರು ಮತ್ತು ಸದಸ್ಯರಾಗ ಬಯಸುವವರು ಬಹುತೇಕ ಈ 'ಧಣಿ'ಗಳಿಗೆ 'ಕಪ್ಪ ಕಾಣಿಕೆ'ಗಳನ್ನು ಒಪ್ಪಿಸಿಯೇ ಈ ಆಯಕಟ್ಟಿನ ಜಾಗಕ್ಕೆ ಪೈಪೋಟಿಯ ಮೇಲೆ ಬರುತ್ತಾರೆಂಬುದು ಜಗಜ್ಜಾಹೀರಾಗಿರುವ ವಿಚಾರ. 'ಬೇಲಿಯೇ ಎದ್ದು ಹೊಲ ಮೇಯ್ದಂತೆ' ಅಧಿಕಾರಸ್ಥ ರಾಜಕಾರಣಿಗಳಿಂದಲೇ ಈ ಅಕ್ರಮ ಆರಂಭಗೊಳ್ಳುತ್ತದೆ. ಇಡೀ ಆಡಳಿತ ವ್ಯವಸ್ಥೆಯೇ ಭ್ರಷ್ಟಾಚಾರದ ಕೂಪದಲ್ಲಿ ಬಿದ್ದು ನರಳುತ್ತಿರುವಾಗ ಕೆಪಿಎಸ್‌ಸಿ ಮಾತ್ರವೇ ಇದರಿಂದ ಹೊರತಾಗಿರಲು ಹೇಗೆ ತಾನೇ ಸಾಧ್ಯ?





ಸ್ವಾಯತ್ತತೆಯ ದುರ್ಬಲಿಕೆ

ಕರ್ನಾಟಕ ಲೋಕಸೇವಾ ಆಯೋಗ ಒಂದು ಸಾಂವಿಧಾನಿಕ ಸ್ವಾಯತ್ತ ಸಂಸ್ಥೆ. ಸಾಂವಿಧಾನಿಕವಾಗಿ ನೀಡಿರುವ ಈ ಸ್ವಾಯತ್ತತೆಯನ್ನು ದುರ್ಬಳಕೆ ಮಾಡಿಕೊಂಡು ಇಡೀ ಕೆಪಿಎಸ್‌ಸಿಯನ್ನು ದಂಧೆಯ ಕೇಂದ್ರವನ್ನಾಗಿ ಮಾಡಿಕೊಳ್ಳಲಾಗಿರುವುದು ಅತ್ಯಂತ ಆಘಾತಕಾರಿ. ಉದ್ಯೋಗ ನೇಮಕಾತಿಯಲ್ಲಿ ಸಾಮಾಜಿಕ ನ್ಯಾಯ ಹಾಗೂ ಪಾರದರ್ಶಕತೆಯನ್ನು ಕಾಪಾಡಿಕೊಳ್ಳಬೇಕೆಂಬ ಘನ ಉದ್ದೇಶವನ್ನು ಘೋಷಿಸಿಕೊಂಡು ಸ್ಥಾಪನೆಯಾದದ್ದು ಈ ಕೆಪಿಎಸ್‌ಸಿ. ಸಂವಿಧಾನದ ಪರಿಚ್ಛೇದ 315 ಮತ್ತು 316 ರ ಸಾಂವಿಧಾನಿಕ ಆದೇಶದನ್ವಯ 1951 ಮೇ 18 ರಂದು ಯುಪಿಎಸ್‌ಸಿ ಜೊತೆಯಲ್ಲೇ ರಾಜ್ಯವಾರು ಲೋಕಸೇವಾ ಆಯೋಗಗಳು ರಚನೆಯಾಗಿ ಅದರಂತೆ ಕೆಪಿಎಸ್‌ಸಿ ಕೂಡ ಸ್ಥಾಪನೆಯಾಯಿತು. ಆಯೋಗ ಸ್ಥಾಪನೆಯಾದ ಆವತ್ತಿನ ಸಂದರ್ಭದಲ್ಲಿ ವಿದ್ಯಾವಂತ ಉದ್ಯೋಗಾಕಾಂಕ್ಷಿಗಳು ಕಡಿಮೆ ಸಂಖ್ಯೆಯಲ್ಲಿದ್ದುದರಿಂದ ಹಾಗೂ ಸಹಜವಾಗಿ ಸ್ವಾತಂತ್ರ್ಯ ಹೋರಾಟದ ಪ್ರಭಾವವೂ ಸೇರಿಕೊಂಡು ನೇಮಕಾತಿಯಲ್ಲಿ ಒಂದು ಹಂತದವರೆಗೆ ಪ್ರಾಮಾಣಿಕತೆಯನ್ನು ತೋರಲಾಗುತ್ತಿತ್ತು. ರಾಜಕೀಯ ಕ್ಷೇತ್ರದಲ್ಲಿ ಭ್ರಷ್ಟಾಚಾರದ ಅನಿಷ್ಟ ಪಿಡುಗು ತೀವ್ರವಾಗಿ ಬೆಳೆಯುತ್ತಬಂದಂತೆ ಅದು ಇಡೀ ಆಡಳಿತ ಕ್ಷೇತ್ರವನ್ನು ಆಳವಾಗಿ ಕೊರೆಯಿತು. ಜಾಗತೀಕರಣದ ಈ ದಿನಗಳಲ್ಲಿ ಭ್ರಷ್ಟಾಚಾರದ ಪಿಡುಗು ರಾಕ್ಷಸಾವತಾರ ತಾಳಿ ಸಂವಿಧಾನದ ಆಶಯಗಳನ್ನು ಈಡೇರಿಸುವ ಹೆಸರಿನಲ್ಲಿ ಹುಟ್ಟಿದ ಈ ಸಾಂವಿಧಾನಿಕ ಸ್ವಾಯತ್ತ ಸಂಸ್ಥೆಯ 'ಪಾವಿತ್ರತೆ'ಯೇ ಮಣ್ಣು ಪಾಲಾಗಿದೆ.

'ಅಳಿಯ'ನಾಗುವುದಾದರೆ 'ಲಂಚ'ದ ಹಣ ಮನ್ನಾ

ಕೆಪಿಎಸ್‌ಸಿಯಲ್ಲಿನ ಭ್ರಷ್ಟಾಚಾರ ಕೇವಲ ಹಣ ತೆಗೆದುಕೊಳ್ಳುವುದಕ್ಕೆ ಸೀಮಿತವಾಗಿಲ್ಲ. ಬದಲಾಗಿ ಇದು ವಿವಿಧ ಮಜಲುಗಳನ್ನು ಹೊಂದಿದೆ. ತುಂಬಾ ಕುತೂಹಲಕಾರಿ ಸಂಗತಿಯೆಂದರೆ ಇದು ವೈವಾಹಿಕ ಸಂಬಂಧಗಳ ವ್ಯವಹಾರಕ್ಕೂ ತನ್ನ ಜಾಲವನ್ನು ವಿಸ್ತರಿಸಿಕೊಂಡಿದೆ. ಕೆಪಿಎಸ್‌ಸಿಯಲ್ಲಿನ ಸದಸ್ಯರ ಮತ್ತು ಅಧಿಕಾರಿಗಳ ಮಗ/ಮಗಳು ಅಥವಾ ಅವರ ಹತ್ತಿರದ ಸಂಬಂಧಿಕರ ಮದುವೆಗಳೂ ಕೂಡ ಈ ಮೂಲಕ ನಡೆದು ಬರುತ್ತಿವೆ. ಅಭ್ಯರ್ಥಿ ತನ್ನ ಉದ್ಯೋಗಕ್ಕಾಗಿ ಕೆಪಿಎಸ್‌ಸಿ ಸದಸ್ಯರ ಬಳಿ ಅಲೆದಾಡುವುದು ಇಂದು ಸಾಮಾನ್ಯವಾಗಿದೆ. ಈ ದೌರ್ಬಲ್ಯವನ್ನು ಸರಿಯಾಗಿಯೇ 'ಸದುಪಯೋಗ'ಪಡಿಸಿಕೊಳ್ಳುತ್ತಿರುವ ಆಯೋಗದ ಸದಸ್ಯರುಗಳು ಹಣ ಬೇಡ 'ಇಂಥವರನ್ನು' ಮದುವೆಯಾಗುವುದಿದ್ದರೆ ಉದ್ಯೋಗ ಕೊಡಿಸಿಕೊಡುವುದಾಗಿ ಆಮಿಷವೊಡ್ಡಿ ಇಲ್ಲವೇ ಒತ್ತಡ ತಂದು ಮದುವೆಗೆ ಒಪ್ಪಿಸುವುದು ಕೆಪಿಎಸ್‌ಸಿಯಲ್ಲಿ ಈಗ ಸಹಜವಾಗಿದೆ. ಹೀಗಾಗಿ ಕೆಪಿಎಸ್‌ಸಿ ಕೇವಲ ಉದ್ಯೋಗ ನೇಮಕಾತಿ ಕೇಂದ್ರ ಮಾತ್ರವಲ್ಲ, ಅದು 'ಮ್ಯಾರೇಜ್ ಬ್ರೋಕರ್' ಆಗಿಯೂ ಕೆಲಸ ನಿರ್ವಹಿಸುತ್ತಿದೆ!.

'ವರ್ಗೀಕೃತ' ಜಾತೀಯತೆ

ಕೆಪಿಎಸ್‌ಸಿಯೊಳಗೆ ನಡೆಯುತ್ತಿರುವ ಜಾತೀಯತೆ ಅಸಹ್ಯ ಎನ್ನುವಷ್ಟು ಮೀರಿಹೋಗಿದೆ. ಇದರೊಳಗಿನ ಜಾತೀಯತೆ–ಯ ಆಳವನ್ನು ಅರಿಯಬೇಕಾದರೆ ಕೆಪಿಎಸ್‌ಸಿಯ ಒಳಹೊಕ್ಕು ನೋಡಬೇಕು. ಆಗ ಅದರ 'ದರ್ಶನ'ದ ಭಾಗ್ಯ ಸಿಗುತ್ತದೆ. ಕೆಪಿಎಸ್‌ಸಿ ಅಧ್ಯಕ್ಷರು ಮತ್ತು ಸದಸ್ಯರು ಈ ಜಾತಿವಾರು ಪ್ರಾತಿನಿಧ್ಯದ ಮೇಲೆಯೇ ಒಳಬಂದವರಾಗಿರುತ್ತಾರೆ. ಹೀಗಾಗಿ ಬಹುತೇಕ ಪ್ರಮುಖ ಜಾತಿಗಳ ಪ್ರತಿನಿಧಿಗಳಾಗಿ ಇಲ್ಲಿ ಕೆಲಸ ನಿರ್ವಹಿಸುತ್ತಾರೆ. ಆದರೆ ಜಾತೀಯತೆ ಎಷ್ಟೇ ತುಂಬಿ ತುಳುಕಾಡಿದರೂ ಇವರ ನಡುವೆ ಮಾತ್ರ ಒಂದು ಬಿಡಿಸಲಾಗದ ಐಕ್ಯತೆ ಹಾಗೂ ಸಾಮ್ಯತೆ ಮತ್ತು ಒಳ ಒಪ್ಪಂದವಿದೆ. ಉದಾ : ಒಂದು ನಿರ್ದಿಷ್ಟ ಜಾತಿಯ ಅಭ್ಯರ್ಥಿಯು ಕೆಪಿಎಸ್‌ಸಿ ಸದಸ್ಯರೊಬ್ಬರಲ್ಲಿ ತನ್ನ ಉದ್ಯೋಗದ ಖಾತ್ರಿಗೆ ಲಂಚ ನೀಡಲು ಬಯಸುತ್ತಾರೆಂದರೆ ಆ ಸದಸ್ಯರು ಆ ನಿರ್ದಿಷ್ಟ ಜಾತಿಗೆ ಸೇರಿರದ ಪಕ್ಷದಲ್ಲಿ ಅವರು ಅಷ್ಟೇ ಪ್ರಾಮಾಣಿಕವಾಗಿ ಕೆಪಿಎಸ್‌ಸಿಯ ಆ ನಿರ್ದಿಷ್ಟ ಜಾತಿಯ ಸದಸ್ಯರ ಬಳಿಯೇ ಹೋಗುವಂತೆ ನಿರ್ದೇಶಿಸುತ್ತಾರೆ. ಅಂದರೆ 'ಎ' ಜಾತಿಯ ಅಭ್ಯರ್ಥಿಯ ವ್ಯವಹಾರವನ್ನು 'ಬಿ' ಜಾತಿಯ ಸದಸ್ಯರು ಡೀಲ್ ಮಾಡುವುದಿಲ್ಲ. 'ಎ' ಜಾತಿಯ ಸದಸ್ಯರ ಬಳಿಯೇ ಕಳುಹಿಸಿಕೊಡುತ್ತಾರೆ. ಹಾಗೆಯೇ 'ಬಿ' ಜಾತಿಗೆ ಸೇರಿದ ಸದಸ್ಯರು ಕೂಡ. ಇನ್ನು ಈ ಜಾತಿಗಳ ಒಳಗೆ ಉಪ ಜಾತಿಗಳು ಕೂಡ ತಮ್ಮ ಪ್ರಾಬಲ್ಯ ಬಿಟ್ಟುಕೊಡುವುದಿಲ್ಲ. ಇದು ಕೇವಲ ಕೆಲವು ಜಾತಿಗಳಿಗೆ ಸೀಮಿತವಾಗಿಲ್ಲ. ಬದಲಾಗಿ ಎಲ್ಲ ಜಾತಿಗಳಿಗೂ ಕೂಡ ಅನ್ವಯವಾಗುತ್ತದೆ. ಹೀಗೆ ಈ ಜಾತಿಯ ಕಮಟು ವಾಸನೆ ಇಡೀ ಉದ್ಯೋಗ ಭವನವನ್ನು ಆವರಿಸಿದೆ.

'ಮೌಖಿಕ ಸಂದರ್ಶನ' ಎಂಬ ನಾಟಕದ ಪರದೆ

ಕೆಪಿಎಸ್‌ಸಿಯಲ್ಲಿನ ಭ್ರಷ್ಟಾಚಾರದ ಮೂಲ ಇರುವುದು 'ಮೌಖಿಕ ಸಂದರ್ಶನ'ವೆಂಬ ರಾಜಮಾರ್ಗದಲ್ಲಿ. ಇನ್ನೂ ಹಲವು ಮಾರ್ಗಗಳಿದ್ದಾಗ್ಯೂ ಕೂಡ ಮೌಖಿಕ ಸಂದರ್ಶನ 'ಮಾದರಿ'ಯಾದ ಮಾರ್ಗ ಎಂಬ ಅಭಿಪ್ರಾಯ ಸಾಮಾನ್ಯವಾಗಿದೆ.

ಪುಟ 15 ಕ್ಕೆ

ಯಶಸ್ವಿ ರೈತರ ಸಮ್ಮೇಳನ

ಕರ್ನಾಟಕ ಪ್ರಾಂತ ರೈತ ಸಂಘದ ದ.ಕ. ಜಿಲ್ಲಾ ಸಮ್ಮೇಳನವು ಜುಲಾಯಿ 7 ರಂದು ಬಿ.ಸಿ.ರೋಡ್ (ಬಂಟ್ವಾಳ)ನಲ್ಲಿ ನಡೆಯಿತು. ಪ್ರಾಂತ ರೈತ ಸಂಘದ ರಾಜ್ಯಾ ಧ್ಯಕ್ಷರಾದ ಮಾರುತಿ ಮಾನ್ಪಡೆಯವರು ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿದರು.

ದ.ಕ.ಜಿಲ್ಲೆಯಲ್ಲಿ ಪ್ರಾಂತ ರೈತ ಸಂಘವು ನಡೆಸಿದ ಸಮರಶೀಲ ಹೋರಾಟಗಳಿಂದಾಗಿ ರಾಜ್ಯವು ಜಾರಿಗೊಳಿಸಿದ ಭೂಸುಧಾರಣೆಗಳ ಪ್ರಯೋಜನ ಇಲ್ಲಿನ ರೈತರಿಗೆ ದೊರೆಯುವಂತಾಗಿದೆ. ಬಳಿಕದ ನಲ್ವತ್ತು ವರ್ಷಗಳಲ್ಲಿ ರಾಷ್ಟ್ರಮಟ್ಟದಲೇ ಕೃಷಿ ಬಿಕ್ಕಟ್ಟಿಗೆ ಸಿಲುಕಿದೆ. ಕೇಂದ್ರ-ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ಆರ್ಥಿಕ ನೀತಿಗಳ ಪರಿಣಾಮವಾಗಿ, ಕಳೆದೆರಡು ದಶಕಗಳಲ್ಲಿ ಎಡರೂವರೆ ಲಕ್ಷಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಅವರು ವಿವರಿಸಿದರು.


ಸಭೆಯ ಅಧ್ಯಕ್ಷತೆ ವಹಿಸಿದ್ದ ಹಿರಿಯ ರೈತ ಹಾಗೂ ಕಾರ್ಮಿಕ ಮುಖಂಡ ಕೆ.ಆರ್.ಶ್ರೀಯಾನ್ ಮಾತನಾಡಿ, ದ.ಕ. ಜಿಲ್ಲೆಯಲ್ಲಿ ಹಿಂದೆ ಭೂಮಾಲಕರ ದೌರ್ಜನ್ಯಗಳ ವಿರುದ್ಧ ಪ್ರಾಂತ ರೈತ ಸಂಘದಿಂದ ಹೋರಾಟ ಮಾಡಲಾಗಿದೆ; ಇವತ್ತು ಈಗಿನ ಸರಕಾರಗಳ ರೈತ ವಿರೋಧಿ ನೀತಿಗಳ ವಿರುದ್ಧ ಹೋರಾಟ ಅಗತ್ಯವಾಗಿದೆ. ಭೂಮಿಗಾಗಿ ಹೋರಾಟ ಎಂಬುದು ಹೊಸ ಘೋಷಣೆ ಏನೂ ಅಲ್ಲ ಎಂದು ತಿಳಿಸಿದರು.

ಧ್ವಜಾರೋಹಣವನ್ನು ಬಂಟ್ವಾಳ ತಾಲೂಕಿನ ಹಿರಿಯ ರೈತ ಮುಖಂಡರಾದ ಎಂ.ಚೆನ್ನಪ್ಪ ಪೂಜಾರಿ ನೆರವೇರಿಸಿದರು. ಲಿಂಗಪ್ಪ ಕರ್ಕೆರ ಅಧ್ಯಕ್ಷರಾಗಿರುವ ಸ್ವಾಗತ ಸಮಿತಿ ಜಿಲ್ಲಾ ಸಮ್ಮೇಳನವನ್ನು ವ್ಯವಸ್ಥೆಗೊಳಿಸಿತ್ತು.

ಉದ್ಘಾಟನಾ ಸಮಾರಂಭದಲ್ಲಿ ಸಂಘಟನೆಯ ರಾಜ್ಯ ಸಮಿತಿ ಸದಸ್ಯ ಎಸ್.ಎಂ.ಹರಿದಾಸ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಯಾದವ ಶೆಟ್ಟಿ ಮಾತನಾಡಿದರು. ಸ್ವಾಗತ ಸಮಿತಿ ಕಾರ್ಯದರ್ಶಿ ಬಿ.ನಾರಾಯಣ ಸ್ವಾಗತಿಸಿದರು.



ಪ್ರತಿನಿಧಿ ಅಧಿವೇಶನದಲ್ಲಿ ಕಾರ್ಯದರ್ಶಿ ಯಾದವ ಶೆಟ್ಟಿ ಮಂಡಿಸಿದ ವರದಿಯ ಮೇಲೆ ಚರ್ಚೆಯಲ್ಲಿ ಹಲವು ಪ್ರತಿನಿಧಿಗಳು ಭಾಗವಹಿಸಿದರು. ಅಕ್ರಮ-ಸಕ್ರಮ ಅನುಷ್ಠಾನ, ನಿವೇಶನ ರಹಿತರಿಗೆ ಭೂಮಿ, ವಾಸಿಸುವ ಭೂಮಿಗೆ ಹಕ್ಕುಪತ್ರ, ಎಪಿಎಲ್, ಬಿಪಿಎಲ್ ವ್ಯತ್ಯಾಸ ಮಾಡದೆ ರೇಶನ್ ಕಾರ್ಡ್, ರೈತರ ಕೃಷಿ ಸಾಲ ಮನ್ನಾ ಮತ್ತು ಬೆಳೆಗೆ ಬೆಂಬಲ ಬೆಲೆ ನೀಡಬೇಕೆಂದು ಸರ್ಕಾರವನ್ನು ಆಗ್ರಹಿಸುವ ನಿರ್ಣಯಗಳನ್ನು ಕೈಗೊಳ್ಳಲಾಯಿತು.



ನಿಡ್ಡೋಡಿ ಉಷ್ಣ ವಿದ್ಯುತ್ ಸ್ಥಾವರದ ಬಗ್ಗೆ ನಿರ್ಣಯ :

ಮಂಗಳೂರು ತಾಲೂಕಿನ ನಿಡ್ಡೋಡಿಯಲ್ಲಿ ಸರ್ಕಾರ ಸ್ಥಾಪಿಸಲು ಉದ್ದೇಶಿಸಿರುವ ಉಷ್ಣ ವಿದ್ಯುತ್ ಸ್ಥಾವರದಿಂದ ಸ್ಥಳೀಯ ರೈತರ ಸಾವಿರಾರು ಎಕ್ರೆ ಕೃಷಿ ಭೂಮಿ ನಾಶವಾಗಲಿದೆ. ಈಗಾಗಲೇ ಉಡುಪಿ ಜಿಲ್ಲೆಯ ಪಡುಬಿದ್ರಿ ಸಮೀಪ ಸ್ಥಾಪಿತವಾಗಿರುವ ಉಷ್ಣ ವಿದ್ಯುತ್ ಸ್ಥಾವರಕ್ಕಾಗಿ ಭೂಮಿ ಕಳಕೊಂಡ ರೈತರಿಗೆ ಯೋಗ್ಯ ಪರಿಹಾರ ದೊರಕಿಲ್ಲ. ಸ್ಥಾವರದ ಹಾರು ಬೂದಿಯಿಂದ ಸುತ್ತಲಿನ ಜಮೀನಿನಲ್ಲಿ ಯಾವುದೇ ಕೃಷಿ ಮಾಡಲು ಅಸಾಧ್ಯವಾಗಿದೆ; ಕುಡಿಯುವ ನೀರು ಕಲುಷಿತಗೊಂಡಿದೆ. ಈ ಹಿನ್ನೆಲೆಯಲ್ಲಿ ನಿಡ್ಡೋಡಿ ವಿದ್ಯುತ್ ಸ್ಥಾವರದ ಸಾಧಕ-ಬಾಧಕ ಬಗ್ಗೆ ವೈಜ್ಞಾನಿಕ ಪರಿಶೀಲನೆ ನಡೆಸಬೇಕು ಎಂದು ಸಮ್ಮೇಳನ ಒತ್ತಾಯಿಸುತ್ತದೆ. ರೈತರಲ್ಲಿ ಚರ್ಚಿಸದೆ ಸ್ಥಾವರ ಸ್ಥಾಪನೆಗೆ ಮುಂದಾಗಿರುವ ಸರಕಾರದ ಧೋರಣೆಯನ್ನು ಜಿಲ್ಲಾ ರೈತ ಸಮ್ಮೇಳನವು ಖಂಡಿಸುತ್ತದೆ ಮತ್ತು ಚರ್ಚಿಸಲು ತಪ್ಪಿದಲ್ಲಿ ಹೋರಾಟದಲ್ಲೂ ಪ್ರಾಂತ ರೈತ ಸಂಘವು ಭಾಗಿಯಾಗುವುದು ಎಂಬುದಾಗಿ ನಿರ್ಣಯ ಕೈಗೊಳ್ಳಲಾಗಿದೆ.

ನೂತನ ಜಿಲ್ಲಾ ಸಮಿತಿ

ಸಮ್ಮೇಳನವು 21 ಮಂದಿ ಸದಸ್ಯರನ್ನೊಳಗೊಂಡ ಜಿಲ್ಲಾ ಸಮಿತಿಯನ್ನು ಮುಂದಿನ ಅವಧಿಗೆ ಆಯ್ಕೆ ಮಾಡಿರುತ್ತದೆ. ಕೆ.ಆರ್.ಶ್ರೀಯಾನ್ ಅಧ್ಯಕ್ಷರಾಗಿ, ಕೆ.ಯಾದವ ಶೆಟ್ಟಿ ಪ್ರಧಾನ ಕಾರ್ಯದರ್ಶಿಯಾಗಿ ಪುನರಾಯ್ಕೆಯಾಗಿರುತ್ತಾರೆ.

ಸಿಂಧನೂರಿನಲ್ಲಿ ನಡೆಯಲಿರುವ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮ್ಮೇಳನಕ್ಕೆ 13 ಮಂದಿ ಪ್ರತಿನಿಧಿಗಳನ್ನು ಜಿಲ್ಲಾ ಸಮ್ಮೇಳನ ಆಯ್ಕೆ ಮಾಡಿರುತ್ತದೆ.



ದಲಿತ ಹಕ್ಕುಗಳಿಗಾಗಿ ಸಿಪಿಐ(ಎಂ)ನಿಂದ ಮಂಗಳೂರಿನಲ್ಲಿ ಪ್ರತಿಭಟನೆ ಪ್ರತಿಭಟನೆ.

ಪಂಕ್ತಿಭೇದ, ಮಡೆಸ್ನಾನ ವಿರೋಧಿಸಿ ಮಂಗಳೂರಿನಲ್ಲಿ ಪ್ರತಿಭಟನೆ :

ಉಡುಪಿ ಕೃಷ್ಣ ದೇವಾಲಯದಲ್ಲಿ ಪಂಕ್ತಿಭೇದವನ್ನು ಮತ್ತು ಕುಕ್ಕೆ ಸುಬ್ರಹ್ಮಣ್ಯದಲ್ಲಿ ಮಡೆಸ್ನಾನವನ್ನು ನಿಷೇಧಿಸಬೇಕು ಹಾಗೂ ಪಂಕ್ತಿಭೇದ ಮಡೆಸ್ನಾನದ ವಿರುದ್ಧ ಉಡುಪಿಯಲ್ಲಿ ಪ್ರತಿಭಟನೆ ನಡೆಸಿದ ಸಿಪಿಐ(ಎಂ) ಕಾರ್ಯಕರ್ತರ ಮೇಲಿನ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಜುಲಾಯಿ 9 ರಂದು ಮಂಗಳೂರಿನಲ್ಲಿ ಜಿಲ್ಲಾಧಿಕಾರಿ ಕಚೇರಿ ಎದುರು ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಮತ್ತು ದಲಿತ ಹಕ್ಕುಗಳ ಹೋರಾಟ ಸಮಿತಿಗಳು ನಡೆಸಿದ ಪ್ರತಿಭಟನೆ ವೇಳೆ ಆಗ್ರಹಿಸಲಾಯಿತು.

ದಲಿತರ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಹಣವನ್ನು ಮೀಸಲಿಡಬೇಕು, ಪೌರ ಕಾರ್ಮಿಕರನ್ನು ಮ್ಯಾನ್‌ಹೋಲ್‌ನಲ್ಲಿ ಇಳಿಸುವುದನ್ನು ನಿಲ್ಲಿಸಬೇಕು, ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿಯನ್ನು ವಿಸ್ತರಣೆ ಮಾಡಬೇಕು ಇತ್ಯಾದಿ ಬೇಡಿಕೆಗಳನ್ನು ಮಂಡಿಸಲಾಯಿತು. ಬಳಿಕ ಮನವಿಯನ್ನು ಜಿಲ್ಲಾಧಿಕಾರಿಗೆ ಸಲ್ಲಿಸಲಾಯಿತು.

ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ವಸಂತ ಆಚಾರಿ, ಮಂಗಳೂರು ನಗರ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ದಲಿತ ಹಕ್ಕುಗಳ ಹೋರಾಟ ಸಮಿತಿ ಮಂಗಳೂರು ನಗರ ಕಾರ್ಯದರ್ಶಿ ಲಿಂಗಪ್ಪ ನಂತೂರು, ಬೆಳ್ತಂಗಡಿ ಸಮಿತಿ ಅಧ್ಯಕ್ಷ ಶೇಖರ ಲಾಯಿಲ ಮಾತನಾಡಿದರು.

ದಲಿತ ಹಕ್ಕುಗಳ ಸಮಿತಿ ಕಾರ್ಯಕರ್ತರಾದ ಜಯ ಕುಮಾರ್ ಕೋಡಿಕಲ್, ತಿಮ್ಮಯ್ಯ ಕೊಂಚಾಡಿ, ಕಿಶೋರ್ ಪೊರ್ಕೋಡಿ, ಸರೋಜಮ್ಮ, ರಘುವೀರ್ ಉರ್ವಸ್ಟೋರ್, ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಸದಸ್ಯರಾದ ಸದಾಶಿವ ದಾಸ್, ವಾಸುದೇವ ಉಚ್ಚಿಲ, ಮುನೀರ್ ಕಾಟಿಪಳ್ಳ ಮತ್ತಿತರರು ಭಾಗವಹಿಸಿದ್ದರು.

ಕೆರಾಡಿ: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ ರಚನೆ

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ. ಕಾರ್ಮಿಕರ ಫೆಡರೇಶನ್ (ಸಿಡಬ್ಲ್ಯೂಎಫ್ಐ)ಗೆ ಸಂಯೋಜಿಸಲ್ಪಟ್ಟ ಕುಂದಾಪುರ ತಾಲೂಕು ಮತ್ತು ಇತರೆ ನಿರ್ಮಾಣ ಕಾರ್ಮಿಕರ ಸಂಘ (ರಿ) (ಸಿಐಟಿಯು)ದ ಕೆರಾಡಿ ಗ್ರಾಮ ಘಟಕವನ್ನು ಜುಲೈ 07, 2013ರಂದು ಕೆರಾಡಿ ಗ್ರಾಮ ಪಂಚಾಯತ್ ಕಚೇರಿ ವಠಾರದಲ್ಲಿ ವಿದ್ಯುಕ್ತವಾಗಿ ಉದ್ಘಾಟಿಸಲಾಯಿತು.

ಸಂಘದ ಬೈಂದೂರು ವಲಯ ಅಧ್ಯಕ್ಷ ಗಣೇಶ ತೊಂಡೆಮಕ್ಕಿ ಕೆರಾಡಿ ಗ್ರಾಮ ಕಟ್ಟಡ ಕಾರ್ಮಿಕರ ಸಂಘ ಉದ್ಘಾಟಿಸಿ ಮಾತನಾಡುತ್ತಾ ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ - ಕಟ್ಟಡ ಕಾರ್ಮಿಕರಿಗೆ ವಿವಿಧ ಸೌಲಭ್ಯಗಳು ಸಕಾಲದಲ್ಲಿ ಸಿಗುವಂತಾಗಲು ಕಾರ್ಮಿಕ ಇಲಾಖೆಯಲ್ಲಿರುವ ಸಿಬ್ಬಂದಿ ಕೊರತೆ ನೀಗಿಸಲು - ಖಾಲಿ ಬಿದ್ದಿರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸಿದರು.

ಸಂಘದ ಕುಂದಾಪುರ ತಾಲೂಕು ಸಮಿತಿ ಜತೆ ಕಾರ್ಯದರ್ಶಿ ವೆಂಕಟೇಶ ಕೋಣಿ ಮುಖ್ಯ ಅತಿಥಿಯಾಗಿ ಸಭೆಯಲ್ಲಿ ಭಾಗವಹಿಸಿದ್ದರು. ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ಕಟ್ಟಡ ಕಾರ್ಮಿಕರಿಗೆ ಪಿಂಚಣಿ ಸೌಲಭ್ಯವನ್ನು ಮಾಸಿಕ ರೂ. 2000/-ಕ್ಕೆ ಹೆಚ್ಚಿಸಬೇಕೆಂದು ಸರಕಾರವನ್ನು ಆಗ್ರಹಿಸಿದರು.

ಕೆರಾಡಿ ಗ್ರಾಮ ಘಟಕದ ನೂತನ ಅಧ್ಯಕ್ಷರಾಗಿ ರವೀಂದ್ರ ಕೊಠಾರಿ, ದಿನೇಶ ನಾಯಕ್, ಚಂದ್ರ ಆಚಾರಿ (ಉಪಾಧ್ಯಕ್ಷರು), ದಿನೇಶ ಆಚಾರ್ಯ (ಕಾರ್ಯದರ್ಶಿ), ರಾಘವೇಂದ್ರ (ಜತೆ ಕಾರ್ಯದರ್ಶಿ) ಇವರನ್ನೊಳಗೊಂಡು ಎಂಟು ಮಂದಿ ಕಾರ್ಯಕಾರಿ ಸಮಿತಿಗೆ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ರಾಘವೇಂದ್ರ ಕೊಠಾರಿ ಸ್ವಾಗತಿಸಿ, ದಿನೇಶ ಆಚಾರ್ಯ ವಂದಿಸಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಆಧುನಿಕ ಭಾರತೀಯ ಗಣತಂತ್ರವನ್ನು ವಿರೂಪಗೊಳಿಸುವ ಪ್ರಯತ್ನಗಳು

ಕೋಮುವಾದಿ ಧ್ರುವೀಕರಣ ಹೆಚ್ಚೆಚ್ಚು ತೀಕ್ಷ್ಣವಾದಂತೆ, ಅದೇ ಅನುಪಾತದಲ್ಲಿ ಭಯೋತ್ಪಾದಕ ದಾಳಿಗಳೂ ಹೆಚ್ಚುತ್ತವೆ ಎಂಬ ಸಂಗತಿಯನ್ನು ಬೋಧಗಯಾ ಸ್ಫೋಟಗಳು ಭೀಕರ ಸ್ವರೂಪದಲ್ಲಿ ನೆನಪಿಸಿವೆ. ಈ ಸನ್ನಿವೇಶದಲ್ಲಿ ನೋಡಿದಾಗ, ಬಿಜೆಪಿ 2014ರ ಸಾರ್ವತ್ರಿಕ ಚುನಾವಣೆಗಳ ಸಿದ್ಧತೆಯಾಗಿ ತನ್ನ ಮೂಲಮಂತ್ರಗಳಿಗೆ ಮರಳಲು ನಿರ್ಧರಿಸಿರುವಂತೆ ಈಗ ಕಾಣುತ್ತಿರುವುದು ಒಂದು ಅನಿಷ್ಟಕಾರಿ ಸಂಕೇತ. ಭಾರತದ ಭವಿಷ್ಯತ್ತಿನ ದೃಷ್ಟಿಯಿಂದ, ಆಧುನಿಕ ಭಾರತೀಯ ಗಣತಂತ್ರದ ರೂಪಾಂತರಕ್ಕೆ ನಡೆಸಿರುವ ಪ್ರಯತ್ನಗಳನ್ನು ಎದುರಿಸಿ ಸೋಲಿಸಬೇಕು.

ಸೀತಾರಾಮ ಯೆಚೂರಿ

ಗಯಾ ಬುದ್ಧನಿಗೆ ಜ್ಞಾನೋದಯವಾದ ಪವಿತ್ರ ಸ್ಥಳ. ಅದರ ಮೇಲೆ ಗುರಿಯಿಟ್ಟ ಇತ್ತೀಚಿನ ಸರಣಿ ಬಾಂಬ್ ಸ್ಫೋಟಗಳು, ಕೋಮುವಾದಿ ಧ್ರುವೀಕರಣ ಹೆಚ್ಚೆಚ್ಚು ತೀಕ್ಷ್ಣವಾದಂತೆ, ಅದೇ ಅನುಪಾತದಲ್ಲಿ ಭಯೋತ್ಪಾದಕ ದಾಳಿಗಳೂ ಹೆಚ್ಚುತ್ತವೆ ಎಂಬ ಸಂಗತಿಯನ್ನು ಭೀಕರ ಸ್ವರೂಪದಲ್ಲಿ ನೆನಪಿಸಿವೆ. ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಮತ್ತು ಇತರರು ಈ ಘೋರ ದಾಳಿಗಳನ್ನು ನಡೆಸಿದವರಾರು ಎಂಬ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಇನ್ನೊಂದೆಡೆ ಈ ಬಗ್ಗೆ ಬಹಳಷ್ಟು ಊಹಾಪೋಹಗಳು ನಡೆದಿವೆ. ಬೋಧಗಯಾ ದೇವಾಲಯದ ಹತೋಟಿ ಕುರಿತಂತೆ ಬೌದ್ಧರು ಮತ್ತು ಹಿಂದೂಗಳ ನಡುವೆ ಬಹುಕಾಲದಿಂದ ಒಳಗೊಳಗೇ ಕುದಿಯುತ್ತಿರುವ ವಿವಾದವೊಂದಿದೆ.

ಇತ್ತೀಚೆಗೆ ಪಾಕಿಸ್ತಾನದ ಜಮಾತ್-ಉದ್-ದವಾದ ಮುಖ್ಯಸ್ಥ, ಹಾಫೀಝ್ ಸೈಯದ್, ಬೌದ್ಧರ ಪ್ರಾಬಲ್ಯ ಇರುವ ಮ್ಯಾನ್ಮಾರ್ ದೇಶದಲ್ಲಿ ಮುಸ್ಲಿಮರ ಮೇಲೆ ಅತ್ಯಾಚಾರಗಳನ್ನು ನಡೆಸುವಲ್ಲಿ ಭಾರತ ನೆರವಾಗುತ್ತಿದೆ ಎಂದು ಆಪಾದಿಸಿದ್ದ. ಬಂಗಾಲಿ ಭಾಷಿಕ ರೊಹಿಂಗ್ಯ ಮುಸ್ಲಿಮರು ಮ್ಯಾನ್ಮಾರಿನ ಒಂದು ಅಲ್ಪಸಂಖ್ಯಾತ ಸಮುದಾಯ. ಅವರು ಬಾಂಗ್ಲಾದೇಶದಿಂದ ಬಂದಿರುವ ಕಾನೂನುಬಾಹಿರ ವಲಸೆಗಾರರು ಎಂದು ಮ್ಯಾನ್ಮಾರ್ ಪರಿಗಣಿಸಿದೆ. ಬಾಂಗ್ಲಾದೇಶ್ ಇದನ್ನು ನಿರಾಕರಿಸಿ ಅವರು ಮ್ಯಾನ್ಮಾರಿಗಳು ಎನ್ನುತ್ತಿದೆ. ಇವರು ಮ್ಯಾನ್ಮಾರ್‌ನ 135 ಮಾನ್ಯತೆ ಪಡೆದ ಜನಾಂಗೀಯ ಗುಂಪುಗಳ ಪಟ್ಟಿಯಲ್ಲಿ ಇಲ್ಲ. 2012 ರಲ್ಲಿ ಅಲ್ಲಿ ನಡೆದ ಸತತ ಹಿಂಸಾಚಾರದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ರೊಹಿಂಗ್ಯಾ ಜನರು ಸ್ಥಳಾಂತರಗೊಂಡರು. ಈ ವರ್ಷ ಮಾರ್ಚ್‌ನಲ್ಲಿ ನಡೆದ ಮುಸ್ಲಿಂ-ವಿರೋಧಿ ಗಲಭೆಗಳಲ್ಲಿ 40 ಮಂದಿ ಸತ್ತರು, ಸಾವಿರಾರು ಮಂದಿ ನಿರಾಶ್ರಿತರಾದರು.

ಯಾರೀ ಭಯೋತ್ಪಾದಕರು?

ಎನ್‌ಐಎ ವಿಚಾರಣೆಗಳ ನಂತರ ಮುಂಬೈಯ 26/11 ರ ಭಯೋತ್ಪಾದಕ ದಾಳಿಗಳಲ್ಲಿನ ಅಮೆರಿಕನ್- ಪಾಕಿಸ್ತಾನಿ ಡೇವಿಡ್ ಹೆಡ್ಲಿ, ಗಯಾದ ಮಹಾಬೋಧಿ ದೇವಾಲಯ ಭಯೋತ್ಪಾದಕರ ಪಟ್ಟಿಯಲ್ಲಿ ಇತ್ತು ಎಂದು ಹೇಳಿಕೊಂಡಿದ್ದಾನೆ. ಅದೇ ರೀತಿ ಒಬ್ಬ ಇಂಡಿಯನ್ ಮುಜಾಹಿದಿನ್ ಕಾರ್ಯಕರ್ತ ಕೂಡ ಬೋಧಗಯಾ ಭಯೋತ್ಪಾದಕರ ಗುರಿಗಳಲ್ಲಿ ಒಂದು ಎಂದು ತನಿಖಾಗಾರರಿಗೆ ಹೇಳಿದ್ದಾನೆ.



ಬುದ್ಧಗಯಾದ ಮೇಲೆ ಬಾಂಬ್ ದಾಳಿ

ಈ ಹಿಂದೆ ಅಜ್ಮೇರ್ ಶರೀಫ್, ಮಲೇಗಾಂವ್ ಮತ್ತು ಹೈದರಾಬಾದಿನ ಮಕ್ಕಾಮಸೀದಿಯಲ್ಲಿನ ಭಯೋತ್ಪಾದಕ ದಾಳಿಗಳ ತನಿಖೆಗಳ ಪ್ರಕಾರ ಕೆಲವು ಹಿಂದುತ್ವ ಗುಂಪುಗಳು ಇದಕ್ಕೆ ಹೊಣೆ ಎಂದು ಕಂಡು ಬಂದಿತ್ತು. ಮೊದಲಿಗೆ ಇವು ಮುಸ್ಲಿಂ ಗುಂಪುಗಳ ಕೃತ್ಯಗಳು ಎಂದು ಭಾವಿಸಲಾಗಿತ್ತು, ಆ ರೀತಿಯ ಆಪಾದನೆಗಳನ್ನು ಹಾಕಲಾಗಿತ್ತು. ಅದರ ಫಲಿತಾಂಶವಾಗಿ ದೊಡ್ಡ ಪ್ರಮಾಣದಲ್ಲಿ ಮುಸ್ಲಿಂ ಯುವಜನರನ್ನು ಬಂಧಿಸಲಾಗಿತ್ತು (ದುರದೃಷ್ಟವಶಾತ್, ಈಗಲೂ, ತನಿಖೆಗಳು ಬೇರೆಯೇ ತೀರ್ಮಾನಕ್ಕೆ ಬಂದ ನಂತರವೂ ಹಲವಾರು ಮಂದಿ ಪೋಲೀಸ್ ಕಸ್ಟಡಿಗಳಲ್ಲಿ ಕೊಳೆಯುತ್ತಿದ್ದಾರೆ). ಇತ್ತೀಚಿನ ಈ ಭಯೋತ್ಪಾದಕ ದಾಳಿಯಲ್ಲೂ ಹಿಂದುತ್ವ ಗುಂಪುಗಳ ಇಂತಹ ಒಂದು ಪಾತ್ರ ಇರುವ ಸಾಧ್ಯತೆಗಳಿವೆ ಎಂದು ಕೆಲವು ಕಾಂಗ್ರೆಸ್ ಮುಖಂಡರು ಸೂಚಿಸುತ್ತಿದ್ದಾರೆ.

ಇವೆಲ್ಲ, ಅಪರಾಧಿಗಳನ್ನು ಪತ್ತೆ ಹಚ್ಚಲು ಮತ್ತು ಶಿಕ್ಷಿಸಲು ಒಂದು ತ್ವರಿತವಾದ, ಆಮೂಲಾಗ್ರವಾದ ತನಿಖೆ ನಡೆಯಬೇಕಾಗಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸುತ್ತವೆ. ಭಯೋತ್ಪಾದಕ ದಾಳಿಗಳು, ಅವು ಯಾವುದೇ ಬಣ್ಣ-ವಿಧದವುಗಳಾಗಿರಲಿ, ಅವುಗಳ ಉಗಮ ಎಲ್ಲಿಯೇ ಇರಲಿ, ಎಲ್ಲವೂ ರಾಷ್ಟ್ರ-ವಿರೋಧಿ ಕೃತ್ಯಗಳೇ. ಅದರಿಂದಾಗಿ ಅವು ಎಂದೂ ಸ್ವೀಕಾರಯೋಗ್ಯವಲ್ಲ. ಒಂದು ಆಮೂಲಾಗ್ರ ತನಿಖೆ ಯಾವ ತೀರ್ಮಾನಕ್ಕೆ ಬರುತ್ತದೋ, ಅದರ ಪ್ರಕಾರ ಅಪರಾಧಿಗಳನ್ನು ಶಿಕ್ಷಿಸಬೇಕು. ಮತ್ತು ಇದು ಕೋಮುದ್ವೇಷವನ್ನು ಮತ್ತು ಧ್ರುವೀಕರಣವನ್ನು ತೀಕ್ಷ್ಣಗೊಳಿಸಲು ಉತ್ತೇಜಿಸುವವರಿಗೆ ಪಾಠವಾಗಬೇಕು. ಅವರು ಮತ್ತೆ ಅಂತಹ ಕೆಲಸಕ್ಕೆ ಕೈಹಾಕದಂತೆ ಮಾಡಬೇಕು.

ನಮ್ಮ ಭದ್ರತಾ ವ್ಯವಸ್ಥೆಯನ್ನು ಕೂಡ ತುರ್ತಾಗಿ ಗಟ್ಟಿಗೊಳಿಸಬೇಕಾಗಿದೆ ಎಂಬುದೂ ಸ್ಪಷ್ಟವಾಗಿದೆ. ಬೋಧಗಯಾ ಭಯೋತ್ಪಾದಕರ ದಾಳಿ ಪಟ್ಟಿಯಲ್ಲಿ ಇದೆ ಎಂದು ನಮ್ಮ ಬೇಹುಗಾರಿಕಾ ಸಂಸ್ಥೆ, ಐ.ಬಿ. ಕಳೆದ ಮೂರು ತಿಂಗಳಲ್ಲಿ ಎರಡು ಬಾರಿ ಬಿಹಾರ ರಾಜ್ಯ ಸರಕಾರವನ್ನು ಎಚ್ಚರಿಸಿತ್ತು ಎಂದು ಮಾಧ್ಯಮ ವರದಿಗಳು ಸೂಚಿಸುತ್ತವೆ. ಆದರೂ ಈ ದಾಳಿಯನ್ನು ತಪ್ಪಿಸಲಾಗಲಿಲ್ಲ. ನಮ್ಮ ದೇಶದ ಐಕ್ಯತೆ, ಸಮಗ್ರತೆ ಮತ್ತು ಆಂತರಿಕ ಭದ್ರತೆಗಾಗಿ, ಇಂತಹ ದೌರ್ಬಲ್ಯಗಳನ್ನು ನಿವಾರಿಸಬೇಕಾಗಿದೆ. ಎಲ್ಲಾ ಬಣ್ಣಗಳ ಭಯೋತ್ಪಾದನೆಯನ್ನು ಎದುರಿಸಿ ನಿಲ್ಲಬೇಕು



ಎಂಬ ಈ ಪ್ರಶ್ನೆಯಲ್ಲಿ ಯಾವ ಚರ್ಚೆಗೂ, ಯಾವ ರಾಜಿಗೂ ಅವಕಾಶವಿರಲು ಸಾಧ್ಯವಿಲ್ಲ.

ಅನಿಷ್ಟಕಾರಿ ಸಂಕೇತ

ಈ ಸನ್ನಿವೇಶದಲ್ಲಿ ನೋಡಿದಾಗ, ಬಿಜೆಪಿ, ಆರೆಸ್ಸೆಸ್‌ನ ರಾಜಕೀಯ ಅಂಗವಾಗಿ ಕಾರ್ಯನಿರ್ವಹಿಸುತ್ತ, 2014ರ ಸಾರ್ವತ್ರಿಕ ಚುನಾವಣೆಗಳ ಸಿದ್ಧತೆಯಾಗಿ ತನ್ನ ಮೂಲಮಂತ್ರಗಳಿಗೆ ಮರಳಲು ನಿರ್ಧರಿಸಿರುವಂತೆ ಈಗ ಕಾಣುತ್ತಿರುವುದು ಒಂದು ಅನಿಷ್ಟಕಾರಿ ಸಂಕೇತ. ಇದು ಕೋಮು ಧ್ರುವೀಕರಣವನ್ನು ಇನ್ನಷ್ಟು ತೀಕ್ಷ್ಣಗೊಳಿಸುತ್ತದೆ, ಆಮೂಲಕ ಎಲ್ಲ ತರದ ಭಯೋತ್ಪಾದನೆಗಳು ಸಮೃದ್ಧವಾಗಿ ಬೆಳೆಯಲು ಒಂದು ಫಲವತ್ತಾದ ನೆಲವನ್ನು ಹದಮಾಡಿ ಕೊಡುತ್ತದೆ. ಒಂದು ಹುಚ್ಚು ಅಸಹಿಷ್ಣುತೆಯ ಫ್ಯಾಸಿಸ್ಟ್ ಮಾದರಿಯ 'ಹಿಂದೂ ರಾಷ್ಟ್ರ'ವನ್ನು ಸ್ಥಾಪಿಸುವ ಆರೆಸ್ಸೆಸ್ ಯೋಜನೆಯನ್ನು ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಸೋಲಿಸಲಾಯಿತು. ಸ್ವತಂತ್ರ ಭಾರತ ತನ್ನನ್ನು ಒಂದು ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಪ್ರತಿಷ್ಠಾಪಿಸಿಕೊಂಡಿತು. ಈ ಸೋಲುಂಡ ಆರೆಸ್ಸೆಸ್‌ನ ಪ್ರತ್ಯಾಘಾತ-ಕ್ಕೆ ಅತ್ಯಂತ ದುರದೃಷ್ಟಕರ ಆಹುತಿಯೆಂದರೆ ಮಹಾತ್ಮ ಗಾಂಧಿ.

ತನ್ನ ಗುರಿಸಾಧನೆಗಾಗಿ ಕೋಮು ಉದ್ವೇಗಗಳನ್ನು ತೀಕ್ಷ್ಣಗೊಳಿಸುವಲ್ಲಿ ತೊಡಗಿರುವ ಆರೆಸ್ಸೆಸ್ ಸ್ವಾತಂತ್ರ್ಯಕ್ಕಾಗಿ ಜನತೆ ನಡೆಸಿದ ಹೋರಾಟದಲ್ಲಿ ಯಾವ ಪಾತ್ರವನ್ನೂ ವಹಿಸಿರಲಿಲ್ಲ. ಆದರೆ ತನ್ನ ಗುರಿಸಾಧನೆಯ ಭಾಗವಾಗಿ ಸ್ವಾತಂತ್ರ್ಯ ಹೋರಾಟದ ಕೆಲವು ದಿಗ್ಗಜರನ್ನು ತಮ್ಮವರಾಗಿಸಿಕೊಳ್ಳುವ ಆತುರದಲ್ಲಿ ಅವರು ಸರ್ದಾರ್ ಪಟೇಲ್ ಬಳಿ ಸಾರುತ್ತಿದ್ದಾರೆ. ಇದೊಂದು ಅಪಹಾಸ್ಯ. ಏಕೆಂದರೆ ಮಹಾತ್ಮ ಗಾಂಧಿಯವರ ಹತ್ಯೆಯಾದಾಗ ಆರೆಸ್ಸೆಸ್‌ನ್ನು ನಿಷೇಧಿಸಿದವರು ಈ ಸರ್ದಾರ್ ಪಟೇಲ್ ಅವರೇ ಎಂಬುದನ್ನು ಈಗ ನೆನಪಿಸಿಕೊಳ್ಳುವುದು ಅಗತ್ಯ.

ಜನಸಂಘ-ಬಿಜೆಪಿ

ಆರೆಸ್ಸೆಸ್ ಮೇಲೆ ನಿಷೇಧವನ್ನು ಪ್ರಕಟಿಸುವ ಫೆಬ್ರುವರಿ 4, 1948ರ ಸರಕಾರೀ ಹೇಳಿಕೆ ಹೀಗಂದಿತ್ತು: "..ಆದರೆ ಸಂಘದ ಆಕ್ಷೇಪಾರ್ಹ ಮತ್ತು ಹಾನಿಕಾರೀ ಚಟುವಟಿಕೆಗಳು ಅವಿರತವಾಗಿ ಮುಂದುವರೆಯುತ್ತಿವೆ ಮತ್ತು ಸಂಘದ ಚಟುವಟಿಕೆಗಳು ಪ್ರಾಯೋಜಿಸುವ, ಅದರ ಸ್ಫೂರ್ತಿಯಿಂದ ನಡೆಯುತ್ತಿರುವ ಹಿಂಸಾಚಾರದ ಪಂಥ ಹಲವರನ್ನು ಆಹುತಿ ತೆಗೆದುಕೊಂಡಿದೆ. ಹೀಗೆ ಬಲಿಯಾದ ಇತ್ತೀಚಿನ ಮತ್ತು ಅತ್ಯಂತ ಅಮೂಲ್ಯವಾದ ಜೀವವೆಂದರೆ ಸ್ವತಃ ಗಾಂಧೀಜಿಯವರು." ಈ ಹೇಳಿಕೆಯ ಕರಡು ಸಿದ್ಧಪಡಿಸಿದವರು ಸ್ವತಃ ಸರ್ದಾರ್ ಪಟೇಲ್.

ನಂತರ ಹಲವಾರು ಪಂಚಕ ರಾಜಿಗಳ ಮೂಲಕ ಆರೆಸ್ಸೆಸ್ ತನ್ನ ಮೇಲಿನ ನಿಷೇಧವನ್ನು ಹಿಂತೆಗೆದುಕೊಳ್ಳುವ ಉದ್ದೇಶವನ್ನು ಸಾಧಿಸಿಕೊಂಡಿತು. ಅದಕ್ಕಾಗಿ ತಾನು ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದಿಲ್ಲ, ಒಂದು 'ಸಾಂಸ್ಕೃತಿಕ ಸಂಘಟನೆ'ಯಾಗಷ್ಟೇ ತನ್ನನ್ನು ಸೀಮಿತಗೊಳಿಸಿಕೊಳ್ಳುವುದಾಗಿ ಭರವಸೆ ನೀಡಿ ನಿಷೇಧದಿಂದ ಹೊರಬಂತು. ಅದ್ದರಿಂದ, ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣರಾಜ್ಯವನ್ನು ಒಂದು 'ಹಿಂದೂ ರಾಷ್ಟ್ರ'ದ ತನ್ನ ಆವೃತ್ತಿಯಾಗಿ ಪರಿವರ್ತಿಸುವ ತನ್ನ ಗುರಿಸಾಧನೆಗೆ ಅದಕ್ಕೊಂದು ರಾಜಕೀಯ

ಪುಟ 14 ಕ್ಕೆ

'ಮಾರ್ಕ್ಸ್‌ವಾದವನ್ನು ಭಾರತದ ಮಣ್ಣಿಗೆ ಕಸಿ ಮಾಡಿದ ವಿಶಿಷ್ಟ ಅಧ್ಯಯನಶೀಲ-ಕ್ರಾಂತಿಕಾರಿ ಹೋರಾಟಗಾರ'

ಪಿ. ಸುಂದರಯ್ಯ ಜನ್ಮ ಶತಮಾನೋತ್ಸವ: ಅರ್ಥಪೂರ್ಣ ಸಮಾರೋಪ

ಭಾರತದ ಅಪ್ರತಿಮ ಕ್ರಾಂತಿಕಾರಿ ಹಿರಿಯ ಸ್ವಾತಂತ್ರ ಹೋರಾಟಗಾರ, ತೆಲಂಗಾಣ ವಿಪ್ಲವ ವೀರಸೇನಾನಿ ಕಾಂ. ಪುಚ್ಚಲಪಲ್ಲಿ ಸುಂದರಯ್ಯನವರ ಜನ್ಮ ಶತಾಬ್ಧಿಯ ಹಿನ್ನೆಲೆಯಲ್ಲಿ ವರ್ಷಪೂರ್ತಿ ಅರ್ಥಪೂರ್ಣ ಕಾರ್ಯಕ್ರಮಗಳ ಬಳಿಕ ಇದೀಗ ಅದರ ಸಮಾರೋಪ ಸಮಾರಂಭವು ವಿಶಿಷ್ಟವಾಗಿಯೇ ಜರುಗಿತ್ತು. ಅದರ ವರದಿ ಇಲ್ಲಿದೆ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿ ಒಂದು ವರ್ಷ ಕಾಲದ ಕಾಂ. ಸುಂದರಯ್ಯ ಜನ್ಮ ಶತಮಾನೋತ್ಸವದ ಆಚರಣೆಯನ್ನು ಅರ್ಥವಾಗಿ ಸಮಾರೋಪ ಮಾಡಿತು.

ಮೇ1 ರಂದು-ಮೇ ದಿನಾಚರಣೆ-ಯಂದೇ ಕಾಂ. ಸುಂದರಯ್ಯ ಜನ್ಮ ದಿನ. ಆದರೆ ಕರ್ನಾಟಕದಲ್ಲಿ ಆಗ ಚುನಾವಣಾ ಸಮಯವಾದ್ದರಿಂದ ಆಚರಣೆ ಜುಲೈ 7 ರಂದು ನಡೆಯಿತು. ಬೆಂಗಳೂರಿನ ಜೈಭೀಮ್ ಭವನದಲ್ಲಿ ನಡೆದ ಸಮಾರಂಭದ ಅಧ್ಯಕ್ಷತೆಯನ್ನು ಸಿಪಿಐ(ಎಂ) ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ವಿಜೆಕೆ ನಾಯರ್ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಕಾಂ. ಜಿ.ವಿ. ಶ್ರೀರಾಮರೆಡ್ಡಿ ಸಮಾರೋಪ ಭಾಷಣವನ್ನು ಮಾಡಿದರು.

ಭಾರತ ದೇಶದ ಸ್ವಾತಂತ್ರ್ಯ ಹೋರಾಟದಲ್ಲೂ, ಕಮ್ಯೂನಿಸ್ಟ್ ಆಂದೋಲನದಲ್ಲೂ ಒಬ್ಬ ಅಪ್ರತಿಮ ಕ್ರಾಂತಿಕಾರಿ ಪಿ. ಸುಂದರಯ್ಯ, ಅವರು ತಮ್ಮ ಜೀವನದ ಸಾರ್ವಜನಿಕ ಚಟುವಟಿಕೆಯನ್ನು ಆರಂಭಿಸಿದ್ದು ತುಂಬಾ ಸಣ್ಣ ವಯಸ್ಸಿನಲ್ಲಿ. ಅದು ತನ್ನ ಮನೆಯವರ ವಿರುದ್ದವೇ- ತನ್ನ ಕುಟುಂಬದವರ ಅಸ್ಪೃಶ್ಯತೆಯ ಆಚರಣೆಯ ವಿರುದ್ಧದ ಹೋರಾಟದ ಮೂಲಕ. ಅಸ್ಪೃಶ್ಯತೆ ಪ್ರಶ್ನೆ ಇಂದಿಗೂ ಪ್ರಸ್ತುತವಾಗಿದೆ. ತಮಿಳು ನಾಡು, ಆಂಧ್ರಗಳಲ್ಲಿ ಈಗ ಅಸ್ಪೃಶ್ಯತೆ ವಿರುದ್ಧ ತೀವ್ರ ಚಳುವಳಿ ಮುಂದುವರೆದಿದೆ.

ಪಿ.ಸುಂದರಯ್ಯ ಎತ್ತಿದ ಮತ್ತೊಂದು ಮಹತ್ವದ ಪ್ರಶ್ನೆ ಭೂಮಿ ಪ್ರಶ್ನೆ. ಅದೂ ಸಹ ಇಂದಿಗೂ ಅತ್ಯಂತ ಪ್ರಸ್ತುತವಾದ ಪ್ರಶ್ನೆಯಾಗಿದೆ ಎಂದು ಜಿ.ವಿ.ಶ್ರೀರಾಮರೆಡ್ಡಿಯವರು ಹೇಳಿದರು.

ಚಾರಿತ್ರಿಕ 'ತೆಲಂಗಾಣ' ಹೋರಾಟದ ಅಗ್ರಗಣ್ಯ ನಾಯಕ


ಪುಚ್ಚಲಪಲ್ಲಿ ಸುಂದರಯ್ಯನವರು ಚಾರಿತ್ರಿಕ ತೆಲಂಗಾಣ ಶಸಸ್ತ ಹೋರಾಟದ ಒಬ್ಬ ಅಗ್ರಗಣ್ಯ ನಾಯಕ. ನಿಜಾಮನ ಸೈನ್ಯದ ಕ್ರೌರ್ಯ ಹಿಂಸೆಯ ವಿರುದ್ಧ ಕ್ರೂರ ಭೂಮಾಲಕರ ಹಿಂಸೆಯ ವಿರುದ್ಧ ಭೂಹೀನ ರೈತರನ್ನು ಸಂಘಟಿಸಿ ನಾಲ್ಕು ವರ್ಷಗಳ ಕಾಲ ನಡೆಸಿದ ಶಸಸ್ತ ಹೋರಾಟ. ಚಳುವಳಿಯನ್ನು ಮುಂದಕ್ಕೆ ತೆಗೆದುಕೊಂಡು ಹೋದ ಅವರ ವಿಧಾನ, ಧೀಮಂತಿಕೆ, ಅವರ ಶಿಸ್ತು ಅಪ್ರತಿಮ. ಈ ಹೋರಾಟವು ಸು. ನಾಲ್ಕು ಸಾವಿರ ಹಳ್ಳಿಗಳನ್ನು ವಿಮೋಚನೆಗೊಳಿಸಿ ಅಲ್ಲಿ ಸ್ವಂತ ಸರ್ಕಾರವನ್ನು ಸ್ಥಾಪಿಸಿತ್ತು. ಈ ಐತಿಹಾಸಿಕ ಹೋರಾಟದ ಮೊದಲ ಕಿಡಿ-ಐಲಮ್ಮ ಒಬ್ಬ ದಲಿತ ಮಹಿಳೆ ಎಂಬುದು ಸಹ ನಾವು ವಿಶೇಷವಾಗಿ ಗಮನಿಸಬೇಕಾದ ಅಂಶ. ರಾಜ್ಯದಲ್ಲಿ ಮತ್ತು

ವರದಿ : ಆರ್. ರಾಮಕೃಷ್ಣ

ದೇಶದಲ್ಲಿ ಇಂದು ಜಾತಿ-ಅಸ್ಪೃಶ್ಯತೆಯ ವಿರುದ್ದದ ಹೋರಾಟ ಹಾಗೂ ಭೂಮಿ ಇಲ್ಲದವರಿಗೆ ಭೂಮಿಯ ಹಂಚಿಕೆಗಾಗಿ ಚಳುವಳಿ ಪೂರ್ಣಗೊಳ್ಳಬೇಕಾಗಿದೆ. ಇದಾಗದೇ ಜನರಿಗೆ ನಿಜವಾದ ಸ್ವಾತಂತ್ರ್ಯ ಸಿಗುವುದು ಅಸಾಧ್ಯ ಎಂದೂ ಶ್ರೀರಾಮರೆಡ್ಡಿ ಹೇಳಿದರು.

ಅಧ್ಯಯನ-ಅಂದೋಲನದ ದಾರಿದೀಪ

ಆಂಧ್ರ ಪ್ರದೇಶದ ನೆಲ್ಲೂರು ಜಿಲ್ಲೆಯ ಭೂ ಮಾಲಿಕರ ಮನೆಯಲ್ಲಿ ಹುಟ್ಟಿದ ಪಿ. ಸುಂದರಯ್ಯನವರು ಬಾಲ್ಯದಲ್ಲಿ ಜಾತಿ ತಾರತಮ್ಯದ ವಿರುದ್ಧ ಸಿಡಿದೆದ್ದರು. ವೇಮನನ ಹೆಸರಿನಲ್ಲಿ ತಮ್ಮ ಮನೆಯಲ್ಲಿ ಕಾರ್ಯಕ್ರಮ ಸಂಘಟಿಸಿದ ಬಾಲಕ ಸುಂದರಯ್ಯ ತಮ್ಮ ಊರಿನ ದಲಿತ-ಹಿಂದುಳಿದ ಜಾತಿಯ ಜನರನ್ನು ಸಮಾರಂಭಕ್ಕೆ ಕರೆಯುತ್ತಾರೆ. ಇದನ್ನು ಅವರ ದೊಡ್ಡಪ್ಪ, ಚಿಕ್ಕಪ್ಪನ ಮಕ್ಕಳು ವಿರೋಧಿಸುತ್ತಾರೆ. ಗದರಿಸುತ್ತಾರೆ. ಬೆದರಿಸುತ್ತಾರೆ. ಕಾರ್ಯಕ್ರಮಕ್ಕೆ ಯಾರೂ



ಬರುವುದಿಲ್ಲ. ಸುಂದರಯ್ಯ ಆಗ ತಮ್ಮದೇ ಮನೆಯ ಮುಂದೆ ಉಪವಾಸ ಕೂರುತ್ತಾರೆ. ಆ ನಂತರ ಓದು ಮುಗಿಸಿ ಬಂದ ಮೇಲೆ ಹೋರಾಟ ಮುಂದುವರಿಸುವುದಾಗಿ ತೀರ್ಮಾನ ಅವರು ಮಾಡುತ್ತಾರೆ. ತಮ್ಮ ಊರಿನಲ್ಲಿ ಸಹಾಕಾರಿ ಸಂಘ ಸ್ಥಾಪಿಸಿ



ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ ಜನ

ಸಹಕಾರಿ ಅಂಗಡಿ ಆರಂಭಿಸಿ ದೂರದ ತಾಲ್ಲೂಕು ಕೇಂದ್ರದಿಂದ ಸರಕುಗಳನ್ನು ತಂದು ತಮ್ಮ ಮನೆಯ ಜೀತಗಾರರು ಮತ್ತು ದಲಿತರಿಗೆ ಕಡಿಮೆ ಬೆಲೆಯಲ್ಲಿ ಮಾರುತ್ತಾರೆ. ಅವರಿಗೆ ಸರಳ ಸಾಲವನ್ನು ನೀಡುತ್ತಾರೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಜಿ.ಎನ್. ನಾಗರಾಜ್ ಹೇಳಿದರು.

ನಿರ್ದಿಷ್ಟ ಆಧ್ಯಯನ

ಆಂಧ್ರ ಪ್ರದೇಶದ ಸಮಾಜದ ರಚನೆಯನ್ನು ವೈಗ್ನಾನಿಕವಾದ ಅಧ್ಯಯನಕ್ಕೆ ಒಳಪಡಿಸುವ ನಿಟ್ಟಿನಲ್ಲಿ ಅವರು ಮೂರು ಹಳ್ಳಿಗಳ ನಿರ್ದಿಷ್ಟ ಅಧ್ಯಯನ ನಡೆಸುತ್ತಾರೆ. ಹಳ್ಳಿಯ ಜನರನ್ನು ಮೂರು ಭಾಗಗಳಾಗಿ ಮಾಡಿಕೊಂಡು ಸತ್ಯದ ಆಧಾರದ ಮೇಲೆ ವಿಶ್ಲೇಷಣೆ ನಡೆಸುತ್ತಾರೆ. ಈ ಅಧ್ಯಯನವು ಮಾರ್ಕ್ಸ್‌ವಾದವನ್ನು ಭಾರತದ ಮಣ್ಣಿಗೆ ಕಸಿ ಮಾಡಿದ ವಿಶಿಷ್ಟ ಅಧ್ಯಯನ. ನಮ್ಮ ಅಧ್ಯಯನಕ್ಕೆ ದಾರಿದೀಪ ಎಂದು ಜಿ.ಎನ್. ನಾಗರಾಜು ಹೇಳಿದರು.

ಪಿ. ಸುಂದರಯ್ಯ ಸರಳ ಜೀವಿಯಾಗಿದ್ದರು. ರಾಜ್ಯಸಭಾ ಸದಸ್ಯರಾಗಿ ಪಾರ್ಲಿಮೆಂಟಿಗೆ ಸೈಕಲ್‌ನಲ್ಲಿ ಹೋದರು.

ಕೂಲಿಕಾರರ ಶ್ರಮ[illegible] ಅಗಾಧತೆಯನ್ನು ಅರ್ಥ ಮಾಡಿಕೊಳ್ಳಲು ಸ್ವತಃ ಭತ್ತದ ಹೊರೆ ಹೊತ್ತು ಕೆಲಸ ಮಾಡಿದರು ಎಂದೂ ಜಿ.ಎನ್. ನಾಗರಾಜ್ ಹೇಳಿದರು.

ಸಾಮಾಜಿಕ ಪ್ರಶ್ನೆಗಳ ಆದ-ಾರದ ಸಮಾಜ ಸುಧಾರಣಾ ಚಳುವಳಿಯಗಳ ಮೇಲೆಯೇ ದೇಶದಲ್ಲಿ ಕಮ್ಯೂನಿಸ್ಟ್ ಚಳುವಳಿ ಬೆಳೆದು ಬಂದಿದೆ. ಇಎಂಎಸ್ ನಂಬೂದರಿಪಾಡ್ ಅವರು ತಾವು ಹುಟ್ಟಿದ ನಂಬೂದರಿ ಜಾತಿ ಜನರನ್ನು ಸುಧಾರಿಸುವ ಚಳುವಳಿಯನ್ನು ನಡೆಸಿದರು. ಆ ಜಾತಿಯಲ್ಲಿ ದೊಡ್ಡ ಗಂಡು ಮಗನಿಗೆ ಮಾತ್ರ ಮದುವೆ ಇತ್ತು. ಉಳಿದ ಗಂಡು ಮಕ್ಕಳು ನಾಯರ್ ಜಾತಿಯ ಹೆಣ್ಣುಗಳೊಂದಿಗೆ ಸಂಬಂಧ ಇಟ್ಟುಕೊಳ್ಳಬಹುದಿತ್ತು. ಮದುವೆ ಇರಲಿಲ್ಲ. ಅದೇ ರೀತಿ ದಲಿತ ಮತ್ತು ಹಿಂದುಳಿದ ಜಾತಿಗಳ ಮಹಿಳೆಯರು ದೇಹ[illegible] ಮೇಲ್ಭಾಗವನ್ನು ಮುಚ್ಚಿಕೊಳ್ಳುವಂತಿರಲಿಲ್ಲ. ಈ ಮಹಿಳೆಯರು ಮೇಲ್ ವಸ್ತ್ರ ತೊಡುವ ಹಕ್ಕಿಗಾಗಿ ಚಳುವಳಿ ನಡೆದಿದೆ. ಅಲಪುರದಲ್ಲಿ 1950 ರಲ್ಲಿ ಸಹ ದಲಿತರು ಸತ್ತರೆ ದೇಹ ಸಂಸ್ಕಾರಕ್ಕೆ ಜಾಗ ಸಿಗುತ್ತಿರಲಿಲ್ಲ. ದೇಹಕ್ಕೆ ಕಲ್ಲು ಕಟ್ಟಿ ನದಿಯಲ್ಲಿ ಮುಳುಗಿಸಲಾಗುತ್ತಿತ್ತು. ಈ ಅನ್ಯಾಯದ ವಿರುದ್ಧ ಹೋರಾಟ ಮಾಡಿದ್ದು ಕಮ್ಯೂನಿಸ್ಟ್ ಚಳುವಳಿಯ ಹಿರಿಮೆ ಎಂದು ವಿಜೆಕೆ ನಾಯರ್ ಹೇಳಿದರು. ಕರ್ನಾಟಕದ ಸಮಾಜದ ನಿರ್ದಿಷ್ಟ ಪರಿಸ್ಥಿತಿಯ ಆಳವಾದ ಅಧ್ಯಯನ ನಡೆಸಿ ಚಳುವಳಿ ಬಲಪಡಿಸುವ ಕೆಲಸ ಆಗಬೇಕಿದೆ ಎಂದು ವಿಜೆಕೆ ನಾಯರ್ ಹೇಳಿದರು.

ಸಿಪಿಐ(ಎಂ) ಪಕ್ಷದ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕೆ. ಪ್ರಕಾಶ್ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು, ಉತ್ತರ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ವಂದಿಸಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಉಳ್ಳವರ ಕ್ರೂರ ವ್ಯಂಗ್ಯದ ನಡುವೆ ಇಲ್ಲದವರು ಸೆಣಸಾಡುತ್ತಾ

ಪಿ. ಸುಂದರಯ್ಯ ಜನ್ಮಶತಮಾನೋತ್ಸವ ಸಮಾರಂಭದಲ್ಲಿ ದೇವನೂರು ಮಹಾದೇವರ 'ಒಡಲಾಳ'ದ ಮಾತುಗಳು

ಡಾ.ಅಂಬೇಡ್ಕರ್ ನೆನಪಿನ ಜೈಭೀಮ್ ಭವನದಲ್ಲಿ 'ಕಮ್ಯುನಿಸ್ಟ್ ಪಕ್ಷದ ಪ್ರಣಾಳಿಕೆ' ಈಗ ಬಿಡುಗಡೆಯಾಗುತ್ತಿರುವುದು ಏನಾದರೂ ಸ್ವಾತಂತ್ರ್ಯಪೂರ್ವದಲ್ಲಿ- ಅಂಬೇಡ್ಕರ್ ಅವರಿಂದಲೇ ಬಿಡುಗಡೆಯಾಗಿದ್ದರೆ ಹೇಗಿರುತ್ತಿತ್ತು? ಆ ಪರಿಣಾಮದಿಂದಾಗಿ ಇಂದು ಸಮಾಜ ಹೇಗೆ ಎಷ್ಟು ಬದಲಾಗಿರುತ್ತಿತ್ತು? ಇದು ಅಂದಾಜಿಗೆ ಸಿಗದು.

ಅಂಬೇಡ್ಕರ್ ಬೌದ್ಧ ಧರ್ಮ ಹಾಗೂ ಕಮ್ಯುನಿಸಂ ನಡುವೆ ಆಯ್ಕೆಗೆ ತೂಗುಯ್ಯಾಲೆ ಆಡುತ್ತಾರೆ. ಕೊನೆಗೆ ಬೌದ್ಧ ಧರ್ಮ ಆಯ್ಕೆ ಮಾಡಿಕೊಳ್ಳುತ್ತಾರೆ. ಅಂಬೇಡ್ಕರ್ ಅವರು ಕಮ್ಯುನಿಸಂ ವಿರೋಧಿಸುತ್ತಾರೆ ಎಂದು [illegible]ಸುವ ಕಟ್ಟಾ ಕಮ್ಯುನಿಸ್ಟರಿಗೆ ನಾನು 'ಅಲ್ರಪ್ಪಾ, ಮದುವೆಯಾಗಲು ನೂರಾರು ಹೆಣ್ಣುಗಳನ್ನು ನೋಡಿ ಕೊನೆಗೆ ಇಬ್ಬರನ್ನು ಆಯ್ಕೆ ಮಾಡಿ ಅವರ ನಡುವೆ ತುಲನೆ ಮಾಡಿ ಒಬ್ಬಳನ್ನು ಮದುವೆ ಮಾಡಿಕೊಂಡರೆ ಅದರ ಅರ್ಥ ಅವರ ದೃಷ್ಟಿಯಲ್ಲಿ ನೀವು ಕಳಪೆ ಅಂತಲ್ಲ, ನೀವು ರನ್ನರ್ ಅಪ್' ಅಂತ ತಮಾಷೆ ಮಾಡಿದ್ದೆ.

ಕಮ್ಯುನಿಸ್ಟ್ ಪಕ್ಷದ ಪ್ರಣಾಳಿಕೆಯಲ್ಲಿ 'ಜಗತ್ತಿನ ದುಡಿಮೆಗಾರರೇ ಒಂದಾಗಿ' ಎಂಬ ಮಹಾವಾಕ್ಯವಿದೆ. ಇದು ಭೂಮಿ ಮೇಲೆ ಬರೆದ ಬರಹ, ಜೀವಂತ ನುಡಿ. ಆದರೆ ಈ ನುಡಿ ಚಿಗುರುವಂತಾಗಲು ಆ ಸ್ಥಳಕ್ಕೆ ತಕ್ಕಂತೆ ಅಲ್ಲಿನ ಗಾಳಿನೀರು ಮಣ್ಣಿಗೆ ಅನುಗುಣ ಕಸಿಮಾಡಬೇಕಾಗಿದೆ, ಆಗ ಸಮಾನತೆ ಜೀವಾಡುತ್ತದೆ. ಮಾರ್ಕ್ಸ್-ಎಂಗೆಲ್ಸ್‌ರು ಜಗತ್ತಿನ ದುಡಿಯುವ ವರ್ಗವನ್ನು ಶ್ರಮಜೀವಿ ಎಂದು ಕರೆದು ಯಾಕೆ ಭಾರತದ ಅಸ್ಪೃಶ್ಯರನ್ನು, ಕಠಿಣ ಶ್ರಮಜೀವಿಗಳು ಎಂದು ಕರೆಯುತ್ತಾರೆ ಎಂಬುದನ್ನು ಅರ್ಥಮಾಡಿಕೊಳ್ಳಲು ಭಾರತದ ಕಮ್ಯುನಿಸ್ಟರು ಪ್ರಯತ್ನಿಸಬೇಕಿತ್ತು.

ಸಮಾನತೆಯೆಂಬುದು ಕೆಲವು ಸಮುದಾಯಗಳಿಗೆ ವೈಯಕ್ತಿಕ ತುರ್ತು ಆಗಿರುತ್ತದೆ. ಆ ಸಮುದಾಯವೇ ಸಮಾನತಾ ಆಂದೋಲನದ ನಾಯಕತ್ವ ವಹಿಸುವುದು ಸಮಾನತೆಗೆ ವೇಗೋತ್ಕರ್ಷ ಎಂಬುದನ್ನು ಸೈದ್ಧಾಂತಿಕ ಸಮಾನತೆಯ ಆಶಯದ ಸಂಘಟನೆಗಳು ಅರ್ಥಮಾಡಿಕೊಳ್ಳಬೇಕಾಗಿತ್ತು. ಯಾಕೆಂದರೆ ಒಳತುರ್ತಿನ ಸಮಾನತೆಯ ಆಶಯದ ಜನಸಮುದಾಯವು ಅಡ್ಡಾದಿಡ್ಡಿ ಬೆಳೆದ ವ್ಯವಸ್ಥಿತವಲ್ಲದ ಕಾಡಿನ ಮರಗಿಡಗಳಂತಾದರೆ ಸೈದ್ಧಾಂತಿಕ ಸಮಾನತೆಯ ಸಂಘಟನೆಗಳು ಅಚ್ಚುಕಟ್ಟಾಗಿ ನೆಟ್ಟ ಮರಗಿಡಗಳಂತೆ. ಇದನ್ನು ಕಾಣುವ ಕಣ್ಣಳಿರಬೇಕಾಗಿತ್ತು.

ಒಂದುಕಡೆ, ಇಲ್ಲದವರು ಒಂದಾಗುವುದು ಭಾರತದಲ್ಲಂತೂ ಬಲು ಕಷ್ಟ. ನಿರಾಶ್ರಿತರ ಕ್ಯಾಂಪ್‌ನಂಥ ಭೀಕರ ಪರಿಸ್ಥಿತಿಯಲ್ಲೂ ಎಲ್ಲಾ ಜಾತಿ ಧರ್ಮಗಳವರೂ ಒಂದೇ ಕಡೆ ವಾಸಿಸುತ್ತ ಒಟ್ಟಿಗೆ ಅಡುಗೆ ಮಾಡಿ ಜತೆಗೂಡಿ ಉಣ್ಣುವ ಪರಿಸ್ಥಿತಿ ಇಲ್ಲದ ದುಃಸ್ಥಿತಿ ನಮ್ಮದಾಗಿದೆ. ಇನ್ನೊಂದು ಕಡೆ, ನಮ್ಮ ಅಲೆಮಾರಿ ದೊಂಬರ ಸಮುದಾಯದಲ್ಲಿ ಈಗಲೂ ಒಂದು ತಲೆತಲಾಂತರದಿಂದಲೂ ನಡೆದುಕೊಂಡು ಬಂದ ಒಂದು ಪದ್ಧತಿ ಏನೆಂದರೆ - ಈ ಸಮುದಾಯದವರು ವರ್ಷಕ್ಕೆ ಒಂದೆರಡು ಸಲ ಪ್ರತಿಯೊಬ್ಬರೂ ವರಿ(ವಂತಿಕೆ) ಎತ್ತಿ ಎಲ್ಲರೂ ಸೇರಿ ಪರ ಮಾಡುತ್ತಾರೆ.

ಆಗ ಅನ್ನಾಹಾರ ಪಾಲಾಕುವಾಗ ಈ ಪರದ ಸ್ಥಳಕ್ಕೆ ಬರಲಾಗದ ವಯಸ್ಸಾದವರಿಗೂ ಬಸುರಿ ಬಾಣಂತಿಯರಿಗೂ ಪಾಲನ್ನು ಅವರು ಇರುವಲ್ಲಿಗೇ ಕೊಟ್ಟು ಕಳಿಸುತ್ತಾರೆ. ಅಷ್ಟೇ ಅಲ್ಲ, ಬಸುರಿ ಹೆಣ್ಣು ಮಗಳ ಗರ್ಭದೊಳಗಿರುವ ಶಿಶುವನ್ನೂ ಲೆಕ್ಕ ಹಾಕಿ ಅದಕ್ಕೂ ಒಂದು ಪಾಲು ನೀಡುತ್ತಾರೆ. ಈ ಮಾನವೀಯ ಸಂಸ್ಕೃತಿ ಅಲೆಮಾರಿಯಾಗಿ ಅಲೆಯುತ್ತಿದೆ. ಹಾಗೇ ಕಡುಬಡತನ ಹೇಗಿದೆ



ದೇವನೂರು ಮಾತನಾಡುತ್ತಿರುವುದು. ಕೆ. ಪ್ರಕಾಶ್, ಮೀನಾಕ್ಷಿ ಸುಂದರಂ, ಜಿ.ವಿ. ಶ್ರೀರಾಮರೆಡ್ಡಿ, ವಿ.ಜೆ.ಕೆ. ನಾಯರ್, [illegible]. ನಾಗರಾಜು

ಎಂಬುದಕ್ಕೆ ನಮ್ಮ ಜನಪದರು ತಮ್ಮ ಒಡಲಿನ ಆ ಪಾಡನ್ನೇ ಒಂದು ದಾರುಣ ಹಾಡಾಗಿಸಿದ್ದಾರೆ :

'ಬಡವರು ಸತ್ತರೆ ಸುಡಲಿಕ್ಕೆ ಸೌದಿಲ್ಲೋ
ಒಡಲ ಕಿಚ್ಚಲ್ಲೇ ಹೆಣಬೆಂದೋ
ದೇವರೆ ಬಡವರಿಗೆ ಸಾವ ಕೊಡಬೇಡ'

- ಹೀಗೆ ಬಡತನ ತನ್ನ ಹಾಡನ್ನು ಹಾಡಿಕೊಂಡರೆ ಮತ್ತೊಂದು ಕಡೆ ಇತ್ತೀಚೆಗೆ ಜನರಿಂದಲೇ ಆಯ್ಕೆಯಾದ ಜನಪ್ರತಿನಿಧಿಗಳ ವಿಧಾನಸೌಧದೊಳಗೂ ಇನ್ನೊಂದು ಹಾಡು ಓಡಾಡಿತು:

ಆಶ್ರಯಕ್ಕೆ ಆಶ್ರಯ ಮನೆಯಿರಲು
ರೂಪಾಯಿಗೆ ಒಂದು ಕೆ.ಜಿ ಅಕ್ಕಿ ಸಿಗುತ್ತಿರಲು
ರಾತ್ರಿ ನಶೆಗೆ ಅಗ್ಗದ ಮದ್ಯವಿರಲು
ಕೂಲಿ ಕೆಲಸಕ್ಕೆ ಬೆಂಕಿ ಹಚ್ಚೆಂದ
ಇದಕ್ಕೆ ಎಲ್ಲರೂ ನಕ್ಕರು.

ನಾವೂ ನಕ್ಕೆವು. ನಾವು ಪ್ರಶ್ನಿಸಲಿಲ್ಲ. ನಾವು ಪ್ರಶ್ನಿಸಬೇಕಿತ್ತು- ವಾಸಕ್ಕೆ ಬಂಗಲೆಯಿರುವವನು, ಮನೆತುಂಬಾ ತರಾವರಿ ದವಸ ಧಾನ್ಯ ತುಂಬಿಕೊಂಡವನು, ರಾತ್ರಿ ನಶೆಗೆ ದೇಶ ವಿದೇಶಗಳ ಅತಿ ಬೆಲೆಯ ಮದ್ಯ ಇಟ್ಟುಕೊಂಡವನು-ತನ್ನ ಕೆಲಸಕ್ಕೆ ಬೆಂಕಿ ಹಚ್ಚು ಅನ್ನುತ್ತಾನೆಯೇ? ಈ ಪ್ರಶ್ನೆ ಮಾಡಬೇಕಿತ್ತು.

ನಮ್ಮ ವಿಧಾನಸೌಧವು, ಇಲ್ಲದವರು ಯಾಕಾಗಿ ದುಡಿಯುತ್ತಾರೆ? ಯಾರಿಗಾಗಿ ದುಡಿಯುತ್ತಾರೆ? ಇದನ್ನು ಪ್ರಶ್ನೆ ಮಾಡಬೇಕಾಗಿತ್ತು. ಹಾಗೇ ಉಳ್ಳವರು ಯಾರಿಗಾಗಿ ದುಡಿಯುತ್ತಾರೆ? ಯಾಕಾಗಿ ದುಡಿಯುತ್ತಾರೆ? ಇದನ್ನೂ ಪ್ರಶ್ನೆ ಮಾಡಬೇಕಾಗಿತ್ತು. ಬದುಕನ್ನು ಎಳೆದುಕೊಂಡು, ದೂಡಿಕೊಂಡು ಸತ್ತರೆ ಸಾಕಪ್ಪಾ ಎಂದು ಸಾಗುವವರ ಮೇಲೆ ಸವಾರಿ ಮಾಡುವ ಉಳ್ಳವರ ಕ್ರೂರ ವ್ಯಂಗ್ಯವಿದು.

ಹಸಿದವರು ಹೊಟ್ಟೆಗಿಲ್ಲದೆ ಗುಲಾಮರಂತೆ ಹೇಳಿದಷ್ಟನ್ನು ಮಾಡಿಕೊಂಡು ಆಯ್ಕೆ ಇಲ್ಲದೇ ಬಿದ್ದಿರಬೇಕು ಎಂಬ ವಾಂಛೆ ಹೀಗೆಲ್ಲ ಅಣಕಿಸುತ್ತದೆ. ಚರಿತ್ರೆಯೆಂದರೆ ಇದೇ ಕತೆ ಇದೇ ವ್ಯಥೆಯಾಗಿಬಿಟ್ಟಿದೆ.

ನಮ್ಮಲ್ಲೇ ಭಾರತದ ನಗರವಾಸಿಗಳು ದಿನಕ್ಕೆ ಮೂವತ್ತು ರೂಪಾಯಿ ಪಡೆದರೆ, ಹಳ್ಳಿಗಾಡಲ್ಲಿ ಇಪ್ಪತ್ತು ಚಿಲ್ಲರೆ ರೂಪಾಯಿ ಪಡೆದರೆ ಆ ಭಾರತದ ಪ್ರಜೆಗಳು ಬಡತನ ರೇಖೆಯಿಂದ ಮೇಲೆತ್ತಲ್ಪಡುತ್ತಾರೆ! ಹೀಗೆಲ್ಲಾ ಅಣಕಿಸುವವರು ತಿಂಗಳಿಗೆ ಕೇವಲ ಒಂದೇ ಒಂದು ದಿನ ಪೌರಕಾರ್ಮಿಕರ ಕೆಲಸವನ್ನೋ ಹಮಾಲಿ ಕೆಲಸವನ್ನೋ ಮಾಡಿ ಅವರು ಪಡೆಯುವ ಕೂಲಿಯನ್ನೇ ಪಡೆದು ಅಷ್ಟರಲ್ಲೇ ಆ ದಿನ ಜೀವಿಸಿ ಧನ್ಯತೆ ಅನುಭವಿಸಿದರೆ ಮಾತ್ರ ಭಾರತ ಪ್ರಕಾಶಿಸುತ್ತದೆ. ಆಗ ಭಾರತಕ್ಕೆ ಏನುಬೇಕೋ ಅದು ಅರ್ಥವಾಗಲೂಬಹುದು.

ಇಲ್ಲಿ ನಾವು ಮುಖಾಮುಖಿಯಾಗಬೇಕಾಗಿದೆ. ಇದು ಬಲು ಕಷ್ಟ. ಸಾಮ್ರಾಜ್ಯಶಾಹಿ ಸುಲಿಗೆ ಇಂದು ನವಿರಾಗಿ ಮೋಹಿನಿ ಎಂಬ ದೆವ್ವದ ರೂಪದಲ್ಲಿದೆ. ಇಲ್ಲಿ ಅಕ್ಕನ-

ತೆರಣಿಯ ಹುಳ ತನ್ನ ಸ್ನೇಹಕ್ಕೆ
ತಾನೇ ಮನೆಯ ಮಾಡಿ
ತಾನೇ ಸಾವ ತೆರನಂತೆ

ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳ ಆಕ್ಟೋಪಸ್ ಹಿಡಿತಕ್ಕೆ ಸಿಕ್ಕಿ ಭೂಮಿ ಒದ್ದಾಡುತ್ತಿದೆ. ಹಿಂದೆ ಸುಲಿಗೆ ದುಷ್ಟವಾಗಿ ಕಾಣುತ್ತಿತ್ತು. ಇಂದು ಸೆಳೆತವಾಗಿ ಆಕರ್ಷಕವಾಗಿದೆ. ಹಿಂದೆ ಯುದ್ಧವೆಂದರೆ ಯುದ್ಧವೇ ಆಗಿತ್ತು. ಹೆಣಗಳು ಉರುಳುತ್ತಿದ್ದವು. ಇಂದು ಯುದ್ಧವೆಂದರೆ ವ್ಯಾಪಾರವಾಗಿಬಿಟ್ಟಿದೆ.

ಆ ಯುದ್ಧಗಳಲ್ಲಿ ಒಂದೇ ಸಲ ಸತ್ತರೆ ಈ ಯುದ್ಧಗಳಲ್ಲಿ ಇಂಗ್ಲೆಂಡಿನ ಚಿಂತಕ ಜೆರೆಮಿ ಸೀ ಬ್ರೂಕ್ ಅವರಿಗೆ ಕಾಣುವ ಹಾಗೆ ಸಾವು ಕಂತಿನ (ಇನ್‌ಸ್ಟಾಲ್ಮೆಂಟ್) ಸಾವಾಗಿದೆ. ಈ ಸಾವು ಸಾವು ಎನಿಸುತ್ತಿಲ್ಲ. ಭೂಮಿಯನ್ನು ರಕ್ತ ಚೆಲ್ಲಿ ಸ್ವಾತಂತ್ರ್ಯ ಪಡೆದು ಪರತಂತ್ರದಿಂದ ಪಡೆದು ಪಾರಾದ ನಾವೇ ಈಗ ಪರತಂತ್ರವನ್ನೆ ಮೋಹಿಸಿ ಪಡೆದದ್ದನ್ನು ಕಳೆದುಕೊಳ್ಳುತ್ತಿದ್ದೇವೆ. ಸಮಾನತೆ ಮತ್ತು ಸಂಪತ್ತು ಅಭಿವೃದ್ಧಿ ಜೊತೆಜೊತೆಯಾಗಿ ಹೆಜ್ಜೆಯಿಡುವವರೆಗೂ ಇದು ಇದ್ದದ್ದೇ, ಆದರೆ ಸಾಮ್ರಾಜ್ಯಶಾಹಿ ತೊಡಿಸಿದ ಸರಪಳಿ ಚಿನ್ನದ ಚೈನಾಗಿ ಕಾಣುತ್ತದೆ. ಹೀಗಾಗೇ ಹಿಂದೆ ಕಪ್ಪು ಬಿಳುಪಿನ ನಡುವೆ ಸ್ವಾತಂತ್ರ್ಯ ಹೋರಾಟ ನಡೆದರೆ ಇಂದು ನೂರೆಂಟು ಬಣ್ಣಗಳ ನಡುವೆ ಸ್ವಾತಂತ್ರ್ಯ ಹೋರಾಟ ನಡೆಯಬೇಕಾಗಿದೆ.


ಈ ಕಾಲಕ್ಕೆ ತಕ್ಕಂತೆ ಸಮಾನತೆಯ ಕನಸನ್ನು ಕಸಿಮಾಡುವ ಪ್ರತಿಭೆ ಇಂದು ಬೇಕಾಗಿದೆ. ನಮ್ಮ ನಮ್ಮ ಆಲೋಚನೆಗಳು ಚಿಂತನೆಗಳು ಕರ್ಮಠವಾಗದಂತೆ, ಗೊಡ್ಡು ಆಗದಂತೆ ನಾವೂ ನಮ್ಮನ್ನು ಕಾಪಾಡಿಕೊಳ್ಳಬೇಕಾಗಿದೆ. ಉದಾಹರಣೆಗೆ, ನನ್ನ ಮೊಮ್ಮಗ ಅರವಿಂದ್ ಚಿಕ್ಕವನಾಗಿದ್ದಾಗ 'ಬೇಬಿ ಜಾನ್ಸನ್ ಬ್ಲಾಸಂ' ಸಾಬೂನು ಬಳಸುತ್ತಿದ್ದ. ಅವನ ಮೇಲಿನ ಮೋಹಕ್ಕೆ ಬೇಬಿ ಜಾನ್ಸನ್ ಬ್ಲಾಸಂ ಸಾಬೂನನ್ನೇ ನಾನೂ ಬಳಸಲು ಶುರು ಮಾಡಿದೆ.

ಅವನು ಬೆಳೆದಂತೆ ನಾನಾ ಸಾಬೂನುಗಳನ್ನು ಬಳಸುತ್ತಾ ಈಗ ಯಾವ ಸಾಬೂನು ಬಳಸುತ್ತಿದ್ದಾನೋ ನನಗೆ ಗೊತ್ತಿಲ್ಲ. ಆದರೆ ನಾನು ಮಾತ್ರ ಬೇಬಿ ಜಾನ್ಸನ್ ಬ್ಲಾಸಂ ಸಾಬೂನನ್ನೇ ಇನ್ನೂ ಬಳಸುತ್ತಿದ್ದೇನೆ. ಬದಲಾವಣೆಯ ಜಗತ್ತು ನನ್ನ ಮೊಮ್ಮಗನದಾದರೆ ಅದರ ಚಲನಶೀಲತೆಗೆ ಅಳವಡದೆ ನಾನಿದ್ದೇನೆ.

ಹಳೆಯ ಹತಾರಗಳಲ್ಲೇ ಈ ಜಗತ್ತಿನೊಡನೆ ವ್ಯವಹರಿಸಿದರೆ ಅದು ಸ್ಪಂದಿಸುವುದಿಲ್ಲವೇನೊ. ಹೀಗೆ ಆಲೋಚನೆಗಳೂ ಚಿಂತನೆಗಳೂ ಎಲ್ಲವೂ. ಈ ಅರಿವು ನಮಗೆ ದಿಕ್ಕುದೆಸೆ ಕಾಣಿಸಬಹುದೇ? ಬದಲಾಗುತ್ತಿರುವ ಜಗತ್ತಿನ ಒಳಗಿನಿಂದಲೇ ಸಮಾನತೆಯ ನಾಡಿಗೆ ಹಿಡಿಯುವ ಪ್ರತಿಭೆ ನಮಗೂ ಹೊಸ ನಡೆನುಡಿ ತಂದುಕೊಡಬಹುದೇ? ●

ಅಂಗನವಾಡಿ ಕೇಂದ್ರಗಳನ್ನು ಖಾಸಗೀಕರಣ ಮಾಡಲು ಬಿಡುವುದಿಲ್ಲ - ಅಂಗನವಾಡಿ ನೌಕರರ ಆಕ್ರೋಶ

ಅಪೌಷ್ಠಿಕತೆ ಎಂಬ ಪಿಡುಗು ಭಾರತ ದೇಶಾದ್ಯಂತ ವ್ಯಾಪಕವಾಗಿ ಹರಡಿಕೊಂಡಿದ್ದು, ಇದನ್ನು ನಿವಾರಣೆ ಮಾಡಲು ಯೋಚಿಸದ ಸರ್ಕಾರಗಳು ದೇಶದ ಸಂಪತ್ತನ್ನು



ಶ್ರೀಮಂತ ಕಂಪನಿಗಳ ಲೂಟಿಗೆ ನೀಡುವಲ್ಲಿ ಮಗ್ನವಾಗಿವೆ. ದೇಶದ ಗ್ರಾಮೀಣ ಭಾಗದಲ್ಲಿ ಸರಿಯಾದ ಪೌಷ್ಠಿಕ ಆಹಾರವಿಲ್ಲದೇ ನರಳುತ್ತಿರುವ ಹೆಣ್ಣು ಮಕ್ಕಳಿಗೆ ಮನೆ-ಮನೆಗೆ ಹೋಗಿ ಪೌಷ್ಠಿಕ ಆಹಾರ ವಿತರಿಸುವ ಹಾಗೂ 3 ರಿಂದ 6 ವರ್ಷದ ಒಳಗಿನ ಮಕ್ಕಳಿಗೆ ತಾಯಿಯ ಪ್ರೀತಿಯ ಜೊತೆ-ಜೊತೆಗೆ ಪೂರ್ವ ಆರೋಗ್ಯ ಕಾಳಜಿ ಮಾಡಿ, ಪ್ರಾಥಮಿಕ ಶಿಕ್ಷಣ ನೀಡುತ್ತಿರುವ ಅಂಗನವಾಡಿ ನೌಕರರನ್ನು ಸರಕಾರಗಳು ಮಾನವೀಯವಾಗಿ ನಡೆಸಿಕೊಳ್ಳುವ ಬದಲಾಗಿ ಅಂಗನವಾಡಿ ಕೇಂದ್ರಗಳನ್ನು ಖಾಸಗೀಕರಣ ಮಾಡಿ ಆ ಮೂಲಕ ಬಡ ನೌಕರರನ್ನು ಕೆಲಸದಿಂದ ತೆ-ಗೆದು ಹಾಕುವ ನೀಚ ಕೆಲಸಕ್ಕೆ ಇಳಿದಿದ್ದು, ಈ ನೀತಿಯ ವಿರುದ್ಧ ರಾಜ್ಯಾದ್ಯಂತ ಅಂಗನವಾಡಿ ನೌಕರರು ಆಕ್ರೋಶ ವ್ಯಕ್ತಪಡಿಸಿ ಇದೇ ಜುಲೈ 10, 2013 ರಂದು ವ್ಯಾಪಕ ಹೋರಾಟಗಳನ್ನು ನಡೆಸಿದ್ದಾರೆ. ಈ ಹೋರಾಟಗಳಲ್ಲಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ನೌಕರರು ಪಾಲ್ಗೊಂಡ ವರದಿಗಳು ಬರುತ್ತಿವೆ.

ಬೆಳಗಾಂ ಜಿಲ್ಲಾ ಪಂಚಾಯತ ಮುತ್ತಿಗೆ

ಬೆಳಗಾಂ ಸಹಸ್ರಾರು ನೌಕರರ ಜಿಲ್ಲಾ ಪಂಚಾಯತ ಮುತ್ತಿಗೆಹಾಕಿ ಬಡವರ ಜೊತೆ ಚೆಲ್ಲಾಟವಾಡುವ ಸರ್ಕಾರಗಳ ನೀತಿಯನ್ನು ಖಂಡಿಸಿದರು. ನಗರದ ಪ್ರಮುಖ ಕೇಂದ್ರವಾದ ಬೋಗಾರವೇಸ್‌ದಿಂದ ನಡೆದ ಮೆರವಣಿಗೆ ಬೆಳಗಾವಿ ಜನರು ನೋಡುವಂತಾಗಿತ್ತು. ಸುರಿಯುವ ಮಳೆಯನ್ನು ಲೆಕ್ಕಿಸದೇ ಸುಮಾರು 4000 ಅಂಗನವಾಡಿ ನೌಕರರು ಸರ್ಕಾರದ ಖಾಸಗೀಕರಣದ ನೀತಿ ವಿರುದ್ಧ ಘೋಷಣೆ ಕೂಗುತ್ತಾ ಜಿಲ್ಲಾ ಪಂಚಾಯತ ಕಚೇರಿ ಮುತ್ತಿಗೆ ಹಾಕಿ ಅಂಗನವಾಡಿ ಕೇಂದ್ರಗಳನ್ನು ಖಾಸಗೀಕರಣ ಮಾಡಲು ಹೊರಟಿರುವ ಸರಕಾರಕ್ಕೆ ಧಿಕ್ಕಾರ ಹಾಕಿದರು.

ಗ್ರಾಮೀಣ ಭಾಗದಲ್ಲಿ ರಾಜಕೀಯ ಪುಡಾರಿಗಳ ಕಿರುಕುಳ ಸಹಿಸಿಕೊಂಡು, ಇಂದು-ನಾಳೆ ಸರ್ಕಾರ ನಮ್ಮ ಪರ ಕೆಲಸ ಮಾಡಿ ಖಾಯಂ ಮಾಡಬಹುದೆಂಬ ನಿರೀಕ್ಷೆ ಇಟ್ಟುಕೊಂಡು ಕನಸು ಕಾಣುತ್ತಿರುವ ಬಡ ಅಂಗನವಾಡಿ ನೌಕರರ ಕೆಲಸವನ್ನು ಖಾಸಗೀಯವರಿಗೆ ಕೊಟ್ಟು ಈ ದೇಶದ ಬಂಡವಾಳ ಶಾಹಿಗಳಿಗೆ ಪ್ರೋತ್ಸಾಹ ನೀಡುತ್ತಿರುವ ಸರ್ಕಾರದ ಕ್ರಮ ಸರಿ ಅಲ್ಲ. ಕೂಡಲೇ ಸರಕಾರ ತನ್ನ ನಿಲುವೆ ಬದಲಿಸದಿದ್ದರೆ ದುಡಿಯುವ ಮಹಿಳೆಯರ ಹೋರಾಟ ತೀವ್ರವಾಗುತ್ತದೆ. “ಹೆಣ್ಣು ಒಲಿದರೆ ನಾರಿ, ಮುನಿದರೆ ಮಾರಿ” ಎಂಬ ಗಾದೆ ಮಾತು ಸರಕಾರಕ್ಕೆ ಗೊತ್ತಿರಲಿ ಎಂದು ಹಿರಿಯ ಕಾರ್ಮಿಕ ಮುಖಂಡರಾದ ಕಾಂ॥ ವ್ಹಿ.ಪಿ. ಕುಲಕರ್ಣಿರವರು ಎಚ್ಚರಿಕೆ ನೀಡಿದರು.



ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳನ್ನು ಒಗ್ಗೂಡಿಸಿ ಇಡೀ ರಾಜ್ಯದಲ್ಲಿ 20 ಲಕ್ಷ ಸದಸ್ಯರನ್ನಾಗಿ ಮಾಡಿ, 1.40 ಲಕ್ಷ ಗುಂಪುಗಳನ್ನು ರಚನೆ ಮಾಡಿ ಸುಮಾರು ರೂ. 500 ಕೋಟಿ ಹಣ ಉಳಿತಾಯ ಮಾಡಿ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ ಶಕ್ತಿ ತುಂಬಿ “ಸ್ತ್ರೀ ಶಕ್ತಿ ಗುಂಪು ರಚನೆ ಮಾಡಿದ್ದು ಸರಕಾರ ಅಲ್ಲ”. ಸಚಿವೆ ಉಮಾಶ್ರೀ ಅಲ್ಲ. ಸ್ತ್ರೀಶಕ್ತಿ ಗುಂಪುಗಳಿಗೆ ಶಕ್ತಿ ತುಂಬಿದ್ದು ಅಂಗನವಾಡಿ ಕಾರ್ಯಕರ್ತೆ-ಯರು ಎಂಬುವುದು ಸರ್ಕಾರಕ್ಕೆ ತಿಳಿಯಲಿ. ಇವತ್ತು ಸ್ತ್ರೀಶಕ್ತಿ ಗುಂಪುಗಳಿಗೆ ಅಂಗನವಾಡಿಯ ಅಡುಗೆ ಕೆಲಸ ಕೊಟ್ಟು ಆ ಮೂಲಕ ಅಂಗನವಾಡಿ ಕೇಂದ್ರಗಳನ್ನು ಖಾಸಗೀ ಮಾಡುವ ಹಾಗೂ ಗ್ರಾಮೀಣ ಭಾಗದ ನಮ್ಮ ಜೊತೆಯಲ್ಲಿರುವ ಸ್ತ್ರೀ ಶಕ್ತಿ ಗುಂಪಿನವರ ಮಧ್ಯದಲ್ಲಿ 'ಜಗಳಾ ಹಚ್ಚಿ ಮೋಜು ನೋಡುವ' ಸರಕಾರದ ನೀಚ ಕೆಲಸ ನಮಗೆ ತಿಳಿದಿದೆ. ಕಾರ್ಮಿಕ ಮುಖಂಡರಾದ ಕಾಂ॥ ಗೈಬು ಜೈನೆಖಾನ ಹೇಳಿದರು.





ಹಾಸನದಲ್ಲಿ ಅಂಗನವಾಡಿ ನೌಕರರ ಪ್ರತಿಭಟನೆ

ಮನವಿ ತೆಗೆದುಕೊಳ್ಳಲು ಜಿಲ್ಲಾಧಿಕಾರಿ, ಜಿಲ್ಲಾ ಪಂಚಾಯತನ ಸಿ.ಇ.ಓ. ಹಾಗೂ ಇಲಾಖೆಯ ಉಪನಿರ್ದೇಶಕರು ಬಂದಾಗ ಅಂಗನವಾಡಿ ನೌಕರರು ತಮ್ಮ ಆಕ್ರೋಶ ವ್ಯಕ್ತಪಡಿಸುತ್ತಿದ್ದ ದೃಶ್ಯ ನಿಜಕ್ಕೂ ಅಧಿಕಾರಿಗಳ ಗಮನ ಸೆಳೆಯಿತು.

ಸಂಘಟನೆಯ ಜಿಲ್ಲಾಧ್ಯಕ್ಷೆ ದೊಡ್ಡವ್ವ ಪೂಜಾರಿ, ಕಾರ್ಯದರ್ಶಿ ಗೋದಾವರಿ ರಾಜಾಪುರೆ, ಮುಖಂಡರಾದ ಸಿ.ಎಸ್. ಮಗದುಮ, ಪ್ರೇಮಾ ಕಿಲ್ಲೇದಾರ, ಸರಸ್ವತಿ ಮಾಳಶೆಟ್ಟಿ, ಚನ್ನಮ್ಮ ಗಡ್ಡರಿ, ಗೌರವ್ವ ಮಡಿವಾಳರ, ಸಂಧ್ಯಾ ಕುಲಕರ್ಣಿ, ಮಂದಾ ನೇವಗಿ ಇನ್ನಿತರರು ಮೆರವಣಿಗೆ ನೇತೃತ್ವ ವಹಿಸಿದ್ದರು.

ಸಿಐಟಿಯುನ ಜಿಲ್ಲಾ ಅಧ್ಯಕ್ಷರಾದ ಗಿರೀಶ ಶೆಟ್ಟಿ, ವ್ಹಿ.ಎಸ್. ಜುಮ್ಮನಾಳ ಹಾಗೂ ಗ್ರಾಮ ಪಂಚಾಯತ ನೌಕರರ ಸಂಘದ ತಾಲೂಕಾ ಮುಖಂಡರು ಮುಷ್ಕರಕ್ಕೆ ಬೆಂಬಲಿಸಿ ಮಾತನಾಡಿದರು.

ಹಾಸನ: ಐಸಿಡಿಎಸ್‌ನ ಮೂಲ ಆಶಯಗಳಿಗೆ ವಿರುದ್ಧವಾದ 'ಮಕ್ಕಳ ಮನೆ' ಯೋಜನೆ ರದ್ದು


ಹಾಸನದಲ್ಲಿ ಸಾವಿರಾರು ನೌಕರರು ನಗರದ ಹೇಮಾವತಿ ಪ್ರತಿಮೆ ಬಳಿಯಿಂದ ಕೈಯಲ್ಲಿ ಕೆಂಪುಬಾವುಟ ಹಿಡಿದು ತಲೆಗೆ ಕಪ್ಪುಪಟ್ಟಿ ಧರಿಸಿ ವಿನೂತನವಾಗಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಕಛೇರಿಗೆ ಮುತ್ತಿಗೆ ಹಾಕಿದರು. ಪ್ರತಿಭಟನೆಯ ನೇತೃತ್ವವನ್ನು ವಹಿಸಿ ಅಂಗನವಾಡಿ ನೌಕರರ ಸಂಘದ ರಾಜ್ಯ ಅಧ್ಯಕ್ಷರಾದ ಸಂಗಾತಿ ಎಸ್.ವರಲಕ್ಷ್ಮಿಯವರು ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದರು.

ಹಾಸನ ಜಿಲ್ಲೆಯಲ್ಲಿ 2011-12ನೇ ಇಸವಿಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಶಿಕ್ಷಣ ಅಡಿಯಲ್ಲಿ “ಮಕ್ಕಳ ಮನೆ ಯೋಜನೆಯನ್ನು ಜಾರಿಗೆ ತರಲಾಗಿತ್ತು. ಈ ಹೋರಾಟದ ಫಲವಾಗಿ ಈಗ ಸರ್ಕಾರ ಮಕ್ಕಳ ಮನೆ ಯೋಜನೆಯನ್ನು ಸ್ಥಗಿತಗೊಳಿಸಲು ನಿರ್ಧರಿಸಿರುವುದು ಹೋರಾಟಕ್ಕೆ ಸಿಕ್ಕ ಗೆಲುವಾಗಿದೆ.

ತುಮಕೂರಿನಲ್ಲಿ ನಡೆದ ಪ್ರತಿಭಟನೆಯಲ್ಲಿ ಸು 4000 ಜನ ನೌಕರರು ಪಾಲ್ಗೊಂಡು ಮುತ್ತಿಗೆ ಹೋರಾಟ ನಡೆದಿದೆ. ಪೋಲಿಸರು ಪ್ರತಿಭಟನಾಕಾರರನ್ನು ಬಂಧಿಸಿ ಬಿಡುಗಡೆ ಮಾಡಿದ್ದಾರೆ. ಮೈಸೂರು ಮಂಡ್ಯಗಳಲ್ಲಿ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದೆ. ಬೀದರ್‌ನಲ್ಲಿ ಪೋಲಿಸ್ ನಿರ್ಬಂಧದ ನಡುವೆಯೂ ಪ್ರತಿಭಟನೆ ನಡೆದಿದೆ. ದಕ್ಷಿಣ ಕನ್ನಡ, ಉತ್ತರ ಕನ್ನಡಗಳಲ್ಲಿ ಮುತ್ತಿಗೆ ಹೋರಾಟ ನಡೆದಿದೆ. ಬಾಗಲಕೋಟೆ, ಚಾಮರಾಜನಗರ ಅಲ್ಲದೇ ರಾಜ್ಯದ ನಾನಾ ಜಿಲ್ಲೆಗಳಿಂದ ಹೋರಾಟದ ವರದಿಗಳು ಬರುತ್ತಿವೆ. ಐಸಿಡಿಎಸ್ ಬಲಪಡಿಸಿ ಅಂಗನವಾಡಿ ಕೇಂದ್ರಗಳ ಖಾಸಗೀಕರಣ ನಿಲ್ಲಿಸಿ ಮತ್ತು ನೌಕರರನ್ನು ಖಾಯಂಗೊಳಿಸಬೇಕೆಂದು ಒತ್ತಾಯಿಸಿ ಅಂಗನವಾಡಿ ನೌಕರರ ಸಂಘವು ದೇಶಾದ್ಯಂತ ಎಲ್ಲ ಜಿಲ್ಲಾಧಿಕಾರಿಗಳ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲು ಕರೆನೀಡಿತ್ತು ಇದರ ಭಾಗವಾಗಿ ರಾಜ್ಯದ 21 ಜಿಲ್ಲೆಗಳ 81 ತಾಲ್ಲೂಕುಗಳಲ್ಲಿ ಸುಮಾರು 40 ಸಾವಿರದಷ್ಟು ನೌಕರರು ನೇರವಾಗಿ ಬೀದಿಗಿಳಿದು ಪ್ರತಿಭಟಿಸಿದರು ಎಂದು ವರದಿಯಾಗಿದೆ. ದೇಶಾದ್ಯಂತ ಆರು ಲಕ್ಷ ನೌಕರರು ಈ ನೀತಿಗಳ ವಿರುದ್ಧ ಚಳುವಳಿಯಲ್ಲಿ ಬೀದಿಗೆ ಇಳಿದಿದ್ದಾರೆ.

‘ಜ್ಯೋತಿಬಸುಗೆ ಜ್ಯೋತಿ ಬಸುವೇ ಸಾಟಿ’

ಬೆಂಗಳೂರು-ಮೈಸೂರುಗಳಲ್ಲಿ ಜನ್ಮ ಶತಮಾನೋತ್ಸವ ಸಂಭ್ರಮ



ಕರ್ನಾಟಕ ರಾಜ್ಯದಲ್ಲಿ ಭಾರತದ ದುಡಿಯುವ ವರ್ಗದ ಮಹಾನ್ ನೇತಾರ, ಹಿರಿಯ ಕಮ್ಯುನಿಸ್ಟ್ ನಾಯಕ ಕಾಂ. ಜ್ಯೋತಿ ಬಸು ಅವರ ಜನ್ಮ ಶತಮಾನೋತ್ಸದ ಆಚರಣೆಗಳು ಆರಂಭವಾಗಿವೆ. ಸಿಐಟಿಯು ಅದನ್ನು ಆರಂಭಿಸಿದೆ. ಜನರನ್ನು-ಜನರ ಮನಸ್ಸನ್ನು ಸೆಳೆಯುವ ಎಂಥ ಚುಂಬಕ ಶಕ್ತಿ ಜ್ಯೋತಿಬಸು ಅವರದ್ದು ಎಂಬುದು ಇಲ್ಲಿಯೂ ಸಿದ್ದವಾಗುತ್ತಿದೆ. ಸಭಾಂಗಣಗಳು ಉತ್ಸಾಹಭರಿತ ಕಾರ್ಮಿಕರಿಂದ ಕಿಕ್ಕಿರಿದು ಒಳಗೆ ಜಾಗವಿಲ್ಲದಂತಾಗಿದ್ದೇ ಅದಕ್ಕೆ ಸಾಕ್ಷಿ.

ಜುಲೈ 9 2013. ಬೆಂಗಳೂರು ನಗರದ ೃದಯ ಭಾಗ ಕಾರ್ಪೋರೇಷನ್ ವೃತ್ತದಲ್ಲಿ ಾರ್ಮಿಕರ ಒಂದು ಉತ್ಸಾಹಭರಿತ ುರವಣಿಗೆ. ಕಾಂ. ಜ್ಯೋತಿಬಸು ಅವರ ತ್ರಫಲಕ ಹಿಡಿದ ನೂರಾರು ಕಾರ್ಮಿಕರ ು ಸಾಲು. ಮುಂದೆ ಕಾರ್ಮಿಕರ ುಂದಾಳುಗಳು.

ಕಾಂ. ಜ್ಯೋತಿ ಬಸು ಅವರ ಜೀವನ ಂದೇಶ ಚಿರಾಯುವಾಗಲಿ. ಕಾರ್ಮಿಕರ ಕ್ಯತೆ ಚಿರಾಯುವಾಗಲಿ. ಕೋಮು ೌಹಾರ್ದತೆ ಚಿರಾಯುವಾಗಲಿ. ದೇಶದ ಕ್ಯತೆ ಚಿರಾಯುವಾಗಲಿ. ಐಟಿಯು ಜಿಂದಾಬಾದ್ ುಂತಾದ ಘೋಷಣೆಗಳು ೊಳಗಿದವು.

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ಸಂಘಟನೆಯ ಬೆಂಗಳೂರು ದಕ್ಷಿಣ-ಉತ್ತರ-ಗ್ರಾಮಾಂತರ ಜಿಲ್ಲಾ ಸಮಿತಿಗಳು ಜಂಟಿಯಾಗಿ ಸಂಘಟಿಸಿದ್ದ ಕಾರ್ಯಕ್ರಮ ಅದು. ಮೆರವಣಿಗೆ ನಡೆಯುತ್ತ ಬಂದು ದ್ದು ಸರ್. ಪುಟ್ಟಣ್ಣಚೆ- ಪುರಭವನಕ್ಕೆ. ಸಭಾಂಗಣ ುಂಬಿ ತುಳುಕಿತು. ಜ್ಯೋತಿಬಸು ನ್ಮ ಶತಮಾನೋತ್ಸವ ಸಮಾರಂಭವನ್ನು ಉದ್ಘಾಟಿಸಿದ್ದು ಿಐಟಿಯುನ ಆಖಿಲ ಭಾರತ ಆಧ್ಯಕ್ಷರಾದ ಾಂ. ಎ.ಕೆ.ಪದ್ಮನಾಭನ್.

ಬಸು ಅವರದ್ದು ಯಾವುದೇ ರಾಜಕೀಯ ಹಿನ್ನೆಲೆ ಇಲ್ಲದಿದ್ದ ಒಂದು ಮಧ್ಯಮವರ್ಗದ ಕುಟುಂಬವಾಗಿತ್ತು. ಶಾಲಾ ಬಾಲಕನಾಗಿದ್ದಾಗಲೇ ಸುಭಾಷ್ ಚಂದ್ರಬೋಸರಿಂದ ಪ್ರಭಾವಿತರಾಗಿ ಸ್ವಾತಂತ್ರ್ಯ ಚಳುವಳಿಯಲ್ಲಿ ಗೆಳೆಯರೊಂದಿಗೆ ಪಾಲುಗೊಂಡವರು ಬಸು. ಪೋಲಿಸರು ಲಾಠಿ ಪ್ರಹಾರ ನಡೆಸಿದಾಗಲೂ ಅವರುಗಳು ಓಡಿಹೋಗದೇ ನಿಧಾನ ನಡೆದುಕೊಂಡು ಹೋದರಂತೆ.

ಉನ್ನತ ವಿದ್ಯಾಭ್ಯಾಸಕ್ಕಾಗಿ ಲಂಡನ್‌ಗೆ ತೆರಳಿದ ಜ್ಯೋತಿ ಬಸು ಅಲ್ಲಿ ಭಾರತೀಯ ವಿದ್ಯಾರ್ಥಿ-ಯುವಜನರ ‘ಇಂಡಿಯನ್ ಮಜ್ಲೀಸ್’ ಸಂಘಟನೆಗೆ ಕಾರ್ಯದರ್ಶಿಯಾಗಿ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿಯಲ್ಲಿ ಪಾಲ್ಗೊಂಡರು.


ಭಾರತಕ್ಕೆ ವಾಪಸ್ಸಾದ ಮೇಲೆ ಹೈಕೋರ್ಟ್ ವಕೀಲರಾಗಿ ತಮ್ಮನ್ನು ನೋಂದಾಯಿಸಿಕೊಂಡರೂ ಸಹ ವಕೀಲಿ ವೃತ್ತಿಗೆ ಹೋಗಲಿಲ್ಲ. ಅವರು ಕಮ್ಯುನಿಸ್ಟ್ ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾದರು. 1944 ರಲ್ಲಿ ಪಕ್ಷ ಅವರಿಗೆ ರೈಲ್ವೆ ಕಾರ್ಮಿಕರನ್ನು ಸಂಘಟಿಸುವ ಜವಾಬ್ದಾರಿ ನೀಡಿತು. ಅದನ್ನು ನಿರ್ವಹಿಸಿದರು. 1946 ರಲ್ಲಿ ಬಸು ರೈಲ್ವೆ ಕಾರ್ಮಿಕರ ಕ್ಷೇತ್ರದಿಂದ ಅಂದಿನ ಬಂಗಾಳದ ವಿಧಾನ ಸಭೆಗೆ ಶಾಸಕರಾಗಿ ಆಯ್ಕೆಯಾದರು. ವಿಧಾನ ಸಭೆಯಲ್ಲಿ ಕಾರ್ಮಿಕರ ಜನರ ದನಿಯಾದರು. ಸ್ವಾತಂತ್ರ್ಯಾನಂತರ ಬಸು ಪಶ್ಚಿಮ ಬಂಗಾಳದ ಶಾಸಕರಾಗಿ ಮುಂದುವರೆದರು.

1954ರಲ್ಲಿ ರಾಜ್ಯದಲ್ಲಿ ನ್ಯಾಯಕ್ಕಾಗಿ ಶಿಕ್ಷಕರ ತೀವ್ರ ಹೋರಾಟ ನಡೆಯುತ್ತಿತ್ತು. ಸರ್ಕಾರ ದಮನಕಾರಿಯಾಗಿತ್ತು. ವಿಧಾನ ಸಭೆಯ ಸುತ್ತಲೂ ಪೋಲಿಸು ಸರ್ಪಗಾವಲು. ಬಸು ಬಂಧನಕ್ಕೆ ಪೋಲೀಸರು ಕಾದಿದ್ದರು. ಆದರೆ ಚಾಣಾಕ್ಷತೆಯಿಂದ ವಿಧಾನ ಸಭೆ ಪ್ರವೇಶಿಸಿದ ಬಸು ಒಂದು ವಾರ ಕಾಲ ವಿಧಾನ ಸಭೆಯ ಒಳಗೇ ಉಳಿದು ಅಲ್ಲಿ ಸದನದಲ್ಲಿ ಹೊರಗೆ ನಡೆಯುತ್ತಿದ್ದ ಶಿಕ್ಷಕರ ಚಳುವಳಿಯ ದನಿಯನ್ನು ಮೊಳಗಿಸಿದರು ಮತ್ತು ಸರ್ಕಾರದ ದೌರ್ಜನ್ಯಕಾರಿ ನೀತಿಯನ್ನು ಬಯಲಿಗೆಳೆದು ಖಂಡಿಸಿದರು.

1967 ರಲ್ಲಿ ಒಮ್ಮೆ ಮತ್ತು 1969 ರಲ್ಲಿ ಒಮ್ಮೆ ಅವರು ಸಿಪಿಐ(ಎಂ) ಮತ್ತು ಬಾಂಗ್ಲಾ ಕಾಂಗ್ರೆಸ್‌ಗಳ ಸಂಯುಕ್ತ ರಂಗ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾದರು. ಮೊದಲ ಸರ್ಕಾರದಲ್ಲಿ 9 ತಿಂಗಳು ನಂತರ 13 ತಿಂಗಳು. ಒಟ್ಟು 21 ತಿಂಗಳು. ಈ 21 ತಿಂಗಳು ಪಶ್ಚಿಮ ಬಂಗಾಳದ ಚರಿತ್ರೆಯಲ್ಲಿ ಅತ್ಯಂತ ಮಹತ್ವದ ಅವಧಿ.

ಪೋಲಿಸ್ ಕಮೀಷನರ್ ಅಲ್ಲ ಲೇಬರ್ ಕಮೀಷನರ್

ರಾಜ್ಯದ ಗೃಹಮಂತ್ರಿಯಾಗಿ ಬಸು ಕಾರ್ಮಿಕರ ಮುಷ್ಕರದಲ್ಲಿ ಪೋಲೀಸರು ಮಧ್ಯ ಪ್ರವೇಶಿಸುವಂತಿಲ್ಲ ಎಂದು ಆದೇಶ ಹೊರಡಿಸಿದರು. ಕಾರ್ಮಿಕರು ಮುಷ್ಕರ ನಡೆಸಿದಾಗ ಅಲ್ಲಿಗೆ ಪೋಲಿಸರನ್ನು ಕಳುಹಿಸುವ ಬದಲಿಗೆ ಸಮಸ್ಯೆ ಬಗೆಹರಿಸುವಂತೆ ಲೇಬರ್ ಕಮೀಷನರ್ ಅವರನ್ನು ಕಳಿಸುತ್ತಿದ್ದರು. ಅದೇ ರೀತಿ ರೈತರು ಭೂ ಆಕ್ರಮಣ ಚಳುವಳಿ ನಡೆಸಿದಾಗಲೂ ಭೂಮಾಲೀಕರ ಪರವಾಗಿ ಪೋಲಿಸರ ಮಧ್ಯಪ್ರವೇಶಕ್ಕೆ ಮತ್ತು ದಮನಕ್ಕೆ ಅವಕಾಶ ಕೊಡಲಿಲ್ಲ.



ತಮ್ಮ 96ನೇ ವರ್ಷದಲ್ಲಿ ತೀರಿಕೊಂಡ ಬಸು ಅವರು ಸುಮಾರು 70 ವರ್ಷಗಳ ಕಾಲ ಬದ್ಧ ಕಮ್ಯುನಿಸ್ಟರಾಗಿ ಜನರಿಗಾಗಿ ದುಡಿಯುವ ವರ್ಗಕ್ಕಾಗಿ ಶ್ರಮಿಸಿದರು. 1970ರಲ್ಲಿ ಸಿಐಟಿಯು ಬೇರೆಯಾದಾಗ ಅದರ ಸಂಸ್ಥಾಪಕರಲ್ಲಿ ಜ್ಯೋತಿಬಸು ಕೂಡ ಒಬ್ಬರಾಗಿದ್ದರು ಎಂದು ಪದ್ಮನಾಭನ್ ಹೇಳಿದರು.

ಕ್ಯಾಲೆಂಡರ್ ಬಿಡುಗಡೆ

ಜ್ಯೋತಿಬಸು ಜನ್ಮಶತಮಾನೋತ್ಸದ ಹಿನ್ನೆಲೆಯಲ್ಲಿ ಪುಟ್ಟ ಕ್ಯಾಲೆಂಡರ್ ಒಂದನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು. ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ.ವಿ.ಜೆ.ಕೆ. ನಾಯರ್, ಅದನ್ನು ಬಿಡುಗಡೆ ಮಾಡಿದರು.

ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸದಿದ್ದರೆ ಮಾಲೀಕರು ಕಾರ್ಖಾನೆಯಿಂದ ಹೊರಗೆ ಹೋಗಲು ಬಿಡುವುದಿಲ್ಲ ಎಂಬ ‘ಘೇರಾವೋ’ ಹೋರಾಟವನ್ನು ಪರಿಣಾಮಕಾರಿಯಾಗಿ ರೂಪಿಸಿದವರು ಜ್ಯೋತಿಬಸು ಎಂದು ವಿ.ಜೆ. ಕೆ. ನಾಯರ್ ಹೇಳಿದರು.

ಜ್ಯೋತಿಬಸುಗೆ ಜ್ಯೋತಿ ಬಸುವೇ ಸಾಟಿ

‘ಇಡೀ ದೇಶ ಅತ್ಯಂತ ಗೌರವದಿಂದ ಕಂಡ ನೇತಾರ ಜ್ಯೋತಿ ಬಸು ನಮ್ಮ ನಾಯಕ’ ಎಂದು ಹೆಮ್ಮೆ ವ್ಯಕ್ತಪಡಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿಯವರು ಬಂಡವಾಳಶಾಹಿ ವ್ಯವಸ್ಥೆಯ ಚೌಕಟ್ಟಿನೊಳಗೆ ಹೇಗೆ ಜನಪರವಾಗಿ ಕೆಲಸ ಮಾಡುವುದು ಎಂದು ತೋರಿಸಿಕೊಟ್ಟವರು ಬಸು ಎಂದರು. ಬಸು ಒಬ್ಬ ಮುತ್ಸದ್ದಿಯಾಗಿದ್ದರು. ದೇಶ ನಡೆಸುವ ರಾಷ್ಟ್ರೀಯ ಮುಂಖಡರು ಸಹ ಸಂಕಷ್ಟಗಳು ಎದುರಾದಾಗ ಬಸು ಅವರ ಸಲಹೆ ಕೇಳುತ್ತಿದ್ದರು. ಜ್ಯೋತಿಬಸು ಅವರಿಗೆ ಜ್ಯೋತಿ ಬಸುವೇ ಸಾಟಿ ಎಂದು ಕಾಂ. ಜಿ.ವಿ. ಶ್ರೀರಾಮರೆಡ್ಡಿ ಹೇಳಿದರು.

ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನ ಕುಮಾರ್, ಉಪಾಧ್ಯಕ್ಷೆ ಎಸ್. ವರಲಕ್ಷ್ಮಿ ಅತಿಥಿಗಳಾಗಿದ್ದರು. ಪ್ರಸನ್ನ ಕುಮಾರ್‌ರವರು ಪದ್ಮನಾಭನ್ ಅವರ ಮಾತುಗಳನ್ನು ಕನ್ನಡಕ್ಕೆ ಅನುವಾದಿಸಿದರು.

ಸಿಐಟಿಯು ದಕ್ಷಿಣ ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಕೆ.ಎನ್. ಉಮೇಶ್ ಸ್ವಾಗತಿಸಿದರು. ರಾಜ್ಯ ಕಾರ್ಯದರ್ಶಿ ಎಂ.ಎಸ್. ಮೀನಾಕ್ಷಿ ಸುಂದರಂ ಪ್ರಾಸ್ತಾವಿಕವಾಗಿ ಮಾತನಾಡಿದರು. ಉತ್ತರ ಜಿಲ್ಲಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಎನ್. ಪ್ರತಾಪ ಸಿಂಹ ಕಾರ್ಯಕ್ರಮ ನಿರೂಪಿಸಿದರು. ಜಿಲ್ಲಾ ಆಧ್ಯಕ್ಷರಾದ ಎಚ್. ಎನ್. ಗೋಪಾಲಗೌಡ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಗ್ರಾಮಾಂತರ ಜಿಲ್ಲಾ ಸಮಿತಿ ಅಧ್ಯಕ್ಷರಾದ ಪಿ.ಎ. ವೆಂಕಟೇಶ್ ಮುಂತಾದವರು ವೇದಿಕೆಯಲ್ಲಿದ್ದರು. ಜೋಗಿಲ ಸಿದ್ದರಾಜು ಅವರ ‘ಸಂಭ್ರಮ’ ತಂಡ ಕ್ರಾಂತಿಗೀತೆಗಳನ್ನು ಹಾಡಿತು. ಖ್ಯಾತ ವಿಚಾರವಾದಿ ಪ್ರೊ. ನರೇಂದ್ರ ನಾಯಕ್ ಅವರ ತಂಡ ‘ಪವಾಡ ರಹಸ್ಯ’ಗಳನ್ನು ಬಯಲು ಮಾಡುತ್ತಾ ಕಾರ್ಮಿಕರಿಗೆ ಮನರಂಜನೆಯ ಒದಗಿಸುವುದರ ಜೊತೆಗೆ ವೈಜ್ಞಾನಿಕ ಮನೋಭಾವ ಮತ್ತು ವೈಚಾರಿಕ ಚಿಂತನೆ ಹೇಗೆ ಏಕೆ ಬೇಕು ಎಂದು ಮನವರಿಕೆ ಮಾಡಿಕೊಡಲು ಶ್ರಮಿಸಿದರು.

ಮೈಸೂರಿನಲ್ಲಿ ಸಂಭ್ರಮಾಚರಣೆ

ಶೋಷಣೆ-ವಂಚನೆಯ ಕಗ್ಗತ್ತಲಲ್ಲಿ ಬಸವಳಿದ ದುಡಿಯುವ ಜನತೆಗೆ ಜ್ಯೋತಿಯಾಗಿ, ದಿಕ್ಸೂಚಿಯ ದಾರಿತೋರಿದ ಜ್ಯೋತಿಬಸುರವರ ಜನ್ಮ ಶತಾಬ್ದಿಯನ್ನು ಮೈಸೂರಿನ ಕಾರ್ಮಿಕ ವರ್ಗ ಆಚರಿಸಿತು.

ಪುಟ 14 ಕ್ಕೆ


ಚುನಾವಣೆಯ ಮೇಲೆ ಕಣ್ಣಿಟ್ಟ ಬಜೆಟ್

ಹಣಕಾಸು ಖಾತೆಯನ್ನು ಹೊಂದಿರುವ ಸಿದ್ದರಾಮಯ್ಯ ವಿಧಾನ ಸಭೆಯಲ್ಲಿ ಮಂಡಿಸಿ 2012-14ನೇ ಸಾಲಿನ ಬಜೆಟ್ ಮುಂಬರುವ ಲೋಕಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಸಿದ್ಧಪಡಿಸಲಾದ, ಯಾವುದೇ ಹೊಸತನವಿಲ್ಲದ, ಅಭಿವೃದ್ಧಿಯ ಕಣ್ನೋಟ ಇಲ್ಲದ ವ್ಯರ್ಥ ಕಸರತ್ತು ಎಂದು ಸಿಪಿಐ(ಎಂ) ಟೀಕಿಸಿದೆ.

ಹಿಂದಿನ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಕಳೆದ ಫೆಬ್ರವರಿಯಲ್ಲಿ 2013-14ನೇ ಸಾಲಿನ ಪೂರ್ಣ ಪ್ರಮಾಣದ ಬಜೆಟ್ ಮಂಡಿಸಿ, ನಾಲ್ಕು ತಿಂಗಳ ಲೇಖಾನುದಾನ ಪಡೆದು-ಕೊಂಡಿದ್ದರು. ಅನಂತರ ಚುನಾವಣೆ ನಡೆದು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದುದರಿಂದ ಹೊಸ ಬಜೆಟ್ ಮಂಡಿಸುವ ಪರಿಸ್ಥಿತಿ ಉಂಟಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಈ ಚೊಚ್ಚಲ ಬಜೆಟ್ ಅವಧಿಯು ಕೂಡ ಕೇವಲ 8 ತಿಂಗಳು ಮಾತ್ರ. ಸಿದ್ದರಾಮಯ್ಯ ಅಧಿಕಾರವಹಿಸಿಕೊಂಡ ದಿನವೇ ಮಾಡಿದ ಕೆಲವು ಜನಾಕರ್ಷಕ ಘೋಷಣೆಗಳಿಂದಾಗಿ ಅವರು ಮಂಡಿಸುವುದಾಗಿ ಘೋಷಿಸಿದ ಬಜೆಟ್ ಹಲವು ನಿರೀಕ್ಷೆಗಳನ್ನು ಹುಟ್ಟುಹಾಕಿತು. ಆದರೆ ಹಿಂದಿನ ಸರ್ಕಾರಕ್ಕಿಂತ ಭಿನ್ನವಾದ, ಅಭಿವೃದ್ಧಿ ಪರವಾದ ಬಜೆಟ್ ಮಂಡನೆಯಾಗಲಿದೆ ಎಂಬ ನಿರೀಕ್ಷೆಗಳೆಲ್ಲವೂ ಹುಸಿಯಾಗಿವೆ.

ಸಿದ್ದರಾಮಯ್ಯನವರ ಬಜೆಟ್ ಅಗ್ಗದ ಅಕ್ಕಿ ಯೋಜನೆ, ಹಾಲು ಉತ್ಪಾದಕರಿಗೆ ಲೀಟರಿಗೆ 4 ರೂ. ಪ್ರೋತ್ಸಾಹ, ಶಾಲಾ ಮಕ್ಕಳಿಗೆ ಹಾಲು ವಿತರಣೆಯಂತಹ ಯೋಜನೆಗಳಿಗೆ ಅನುಮೋದನೆ ಪಡೆಯುವ ಕಸರತ್ತು ಆಗಿದೆಯೇ ಹೊರತು ಕುಸಿಯುತ್ತಿರುವ ಕೃಷಿ, ಕೈಗಾರಿಕೆ ಮತ್ತು ಸೇವಾ ವಲಯದ ಚೇತರಿಕೆಗೆ ಅನುಕೂಲಕರವಾದ ಯಾವುದೇ ಪ್ರಸ್ತಾವವಿಲ್ಲ.



ರೂ. 1,21,611 ಕೋಟಿ ರೂ. ಮೊತ್ತದ ಬಜೆಟ್ ಇದಾಗಿದ್ದು ಹಿಂದಿನ ಬಿಜೆಪಿ ಸರ್ಕಾರದ ಬಜೆಟ್‌ಗಿಂತ ಗಾತ್ರದಲ್ಲಿ 18% ರಷ್ಟು ದೊಡ್ಡದಾಗಿದೆ ಎಂದು ಹೇಳಲಾಗಿದೆ. ಕೆಲವು ಬಾಬತ್ತುಗಳಿಗೆ ಹಿಂದಿನ ಸರ್ಕಾರ ಒದಗಿಸಿದ ಮೊತ್ತಕ್ಕಿಂತ ಹೆಚ್ಚು ಹಣವನ್ನು ಒದಗಿಸಿದನ್ನು ಬಿಟ್ಟರೆ ಬೇರೆ ಯಾವ ಹೊಸತನವೂ ಇದರಲ್ಲಿ ಇಲ್ಲ. ಅಗ್ಗದ ಪ್ರಚಾರ ಗಿಟ್ಟಿಸಿಕೊಳ್ಳುವ ಯೋಜನೆಗಳನ್ನು ಮುಂದುವರೆಸಲು ಮಾತ್ರ ಗಮನ ನೀಡಲಾಗಿದೆ.

ಜನಪ್ರಿಯ ಯೋಜನೆಗಳಿಗಾಗಿ ಸಂಪನ್ಮೂಲ ಕ್ರೋಢೀಕರಿಸಲು ಸಿದ್ದರಾಮಯ್ಯ ತೆರಿಗೆ ಹೆಚ್ಚಳಕ್ಕೆ ಮೊರೆ ಹೋಗಬಹುದೆಂಬ ನಿರೀಕ್ಷೆ ಇತ್ತು. ಆದರೆ ಜನರ ಮೇಲೆ ತೆ-ರಿಗೆ ಹೊರೆ ಹೇರುವುದು ಚುನಾವಣೆಯನ್ನು ಎದುರಿಸಬೇಕಾದ ಸಂದರ್ಭದಲ್ಲಿ ಪ್ರತಿಕೂಲ ಪರಿಣಾಮ ಬೀರುವ ಅಪಾಯವನ್ನು ಪರಿಗಣಿಸಿ ತೆರಿಗೆ ಹೆಚ್ಚಳಕ್ಕೆ ಸಿದ್ದರಾಮಯ್ಯ ಮುಂದಾಗಲಿಲ್ಲ ಎಂದು ಹೇಳಲಾಗಿದೆ. ಈಗಾಗಲೇ ವಿದ್ಯುತ್, ಬಸ್ ಪ್ರಯಾಣ ದರ ಮುಂತಾದವುಗಳ ಏರಿಕೆಯ ವಿರುದ್ಧ ರಾಜ್ಯದ ಜನತೆ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ.ಅಗತ್ಯ ವಸ್ತುಗಳ ತೀವ್ರ ಬೆಲೆ ಏರಿಕೆಯಿಂದಲೂ ಜನ ಸಾಮಾನ್ಯರು ಸುಸ್ತಾಗಿದ್ದಾರೆ. ಇಂತಹ ಸಂದರ್ಭದಲ್ಲಿ ತೆರಿಗೆ ಹೆಚ್ಚಳದ ಮೂಲಕ ಸಂಪನ್ಮೂಲ ಸಂಗ್ರಹಕ್ಕೆ ಸರ್ಕಾರ ಹಿಂದೇಟು ಹಾಕಿದೆ. ನೀರಾವರಿ, ಅಬಕಾರಿ ಮುಂತಾದ ತೆರಿಗೆಗಳನ್ನು ಹೆಚ್ಚಿಸುವ ಪ್ರಸ್ತಾವ ಮಾಡಲಾಗಿದ್ದರೂ ಅದನ್ನೇ ಸಂಪನ್ಮೂಲ ಕ್ರೋಢೀಕರಣಕ್ಕೆ ಪ್ರಧಾನ ಆಯ್ಕೆ ಮಾಡಲಾಗಿಲ್ಲ. ಅದರ ಬದಲಿಗೆ, ತೆರಿಗೆ ಸಂಗ್ರಹಣೆಯಲ್ಲಿ ಸುಧಾರಣೆ, ತೆ-ರಿಗೆ ಸೋರಿಕೆಯ ನಿಯಂತ್ರಣ ಮತ್ತು ತೆ-ರಿಗೆ ತಪ್ಪಿಸುವಿಕೆಯನ್ನು ತಡೆಗಟ್ಟಲು ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದಾಗಿ ಹೇಳಿಕೊಂಡಿದೆ. ಸಾಲ ಎತ್ತುವಳಿಯ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಆಶಯವನ್ನು ವ್ಯಕ್ತಪಡಿಸಲಾಗಿದೆ. ಆದರೆ ಇಂತಹ ಆಶಯಗಳು ಆಶಯಗಳಾಗಿಯೇ ಉಳಿಯುವ ಸಾಧ್ಯತೆಯೇ ಹೆಚ್ಚು. ಆಗ ಎದುರಾಗುವ ವಿತ್ತೀಯ ಕೊರತೆಯನ್ನು ಸರಿದೂಗಿಸಲು ಕಠಿಣ ನಿರ್ಧಾರಗಳ ಹೆಸರಿನಲ್ಲಿ ಜನ ಸಾಮಾನ್ಯರ ಮೇಲೆ ಹೊರೆ ಹೇರುವ ಕ್ರಮಗಳಿಗೆ ಸರ್ಕಾರ ಮುಂದಾಗದೆ ಇರಲಾರದು. ಇಲ್ಲಿಯೂ ಸರ್ಕಾರ ಮುಂಬರುವ ಲೋಕಸಭಾ ಚುನಾವಣೆಗಳನ್ನೇ ದೃಷ್ಟಿಯಲ್ಲಿಟ್ಟುಕೊಂಡಿರುವುದು ಸ್ಪಷ್ಟವಾಗುತ್ತದೆ. ತೆರಿಗೆ ಹೆಚ್ಚಳದಂತಹ ಕ್ರಮದಿಂದಾಗಿ ಸರ್ಕಾರದ ವಿರುದ್ಧ ಜನರ ಅತೃಪ್ತಿ ಬೆಳೆಯಲು ಅವಕಾಶ ಕೊಡದಿರಲು ಸಿದ್ದರಾಮಯ್ಯ ಸರ್ಕಾರ ವಿಶೇಷ ಗಮನ ಕೊಟ್ಟಂತೆ ಕಾಣುತ್ತದೆ. ಅವಧಿ ಪೂರ್ವ ಚುನಾವಣೆಯ ಪ್ರಸ್ತಾಪವೂ ಕೇಳಿ ಬರುತ್ತಿದೆ. ಅದೂ ಕಾಂಗ್ರೆಸ್ ವಲಯದಲ್ಲೇ. ರಾಜ್ಯದ ಜನತೆಯನ್ನು ಮೂರ್ಖರನ್ನಾಗಿಸಲು ಹೊರಟಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ಮುಖವಾಡವನ್ನು ಕಳಚಿಹಾಕಲು ಇದೇ ಸಕಾಲವಾಗಿದೆ.

ಓದುಗರ ಓಲೆ

ಹಗಲು ದರೋಡೆ

ನಮ್ಮ ದೇಶದಲ್ಲಿ ಉತ್ಪಾದನೆಯಾಗುತ್ತಿರುವ ನೈಸರ್ಗಿಕ ಅನಿಲದ ಬೆಲೆಯನ್ನು ಕೇಂದ್ರ ಸಚಿವ ಸಂಪುಟ ದುಪ್ಪಟ್ಟು ಹೆಚ್ಚಿಸಿದೆ. ಈ ಹಿಂದೆ ಒಂದು ಎಂಎಂಬಿಟಿಯು ಅನಿಲಕ್ಕೆ 4.2 ಡಾಲರ್ ಇದ್ದದ್ದನ್ನು 8.4 ಡಾಲರ್‌ಗೆ ಹೆಚ್ಚಿಸಲಾಗಿದೆ. ಕೃಷ್ಣಾ ಗೋದಾವರಿ ಕೊಳ್ಳದಲ್ಲಿ ಅನಿಲ ಉತ್ಪಾದನೆಗೆ ಪರವಾನಗಿ ಪಡೆದಿರುವ ರಿಲಯನ್ಸ್ ಕಂಪನಿಗೆ ಭರ್ಜರಿ ಲಾಭ ತಂದು ಕೊಡುವ ಯೋಜನೆ ಇದಾಗಿದೆ. ಅನಿಲದ ಬೆಲೆ ಒಂದು ಡಾಲರ್ ಹೆಚ್ಚಾದರೂ ರಿಲಯನ್ಸ್ ಕಂಪನಿಗೆ 77 ಮಿಲಿಯನ್ ಡಾಲರ್ ಲಾಭ ಹೆಚ್ಚಾಗುತ್ತದೆ. ಈಗ ಒಂದು ಡಾಲರ್ ಗೆ 60 ರೂಪಾಯಿ. ನಾಲ್ಕು ಡಾಲರ್ ಹೆಚ್ಚಾದರೆ ಎಷ್ಟು ಸಾವಿರ ಕೋಟಿ ಲಾಭವಾಗುತ್ತದೆ ಎಂಬುದನ್ನು ಯಾರು ಬೇಕಾದರೂ ಲೆಕ್ಕಹಾಕಬಹುದು.

ಬೇರಾವ ದೇಶದಲ್ಲೂ ನೈಸರ್ಗಿಕ ಅನಿಲಕ್ಕೆ ಈ ಬೆಲೆ ಇಲ್ಲ. ಖಾರಿ ದೇಶಗಳಲ್ಲಿ ಒಂದು ಎಂಎಂಬಿಟಿಯು ಅನಿಲಕ್ಕೆ ಒಂದು ಡಾಲರ್, ಈಜಿಪ್ಟಿನಲ್ಲಿ 2.57 ಡಾಲರ್, ನೈಜೀರಿಯಾದಲ್ಲಿ 0.11 ಡಾಲರ್, ಇಂಡೋನೇಶಿಯಾದಲ್ಲಿ ಒಂದು ಡಾಲರ್ ಹಾಗೂ ಆಸ್ಟ್ರೇಲಿಯಾದಲ್ಲಿ 5 ಡಾಲರ್. ನಮ್ಮ ದೇಶದಲ್ಲಿ ಮಾತ್ರ ಈ ವಿಪರೀತ ಬೆಲೆ ಯಾಕೆ? ಇದು ಹಗಲು ದರೋಡೆಯಲ್ಲವೇ, ಅದೂ ಸರ್ಕಾರದಿಂದಲೇ?

ತಡಗಳಲೆ ಸುರೇಂದ್ರ
ಬೆಂಗಳೂರು

"ಉಳಿತಾಯ ಖಾತ
ಬ್ಯಾಂಕ್ ತೆರೆಯಲು ತಿರಸ್ಕರಿಸುವಂ
ಜನತೆಯ ಅನುಕೂಲತೆ
ವಿಶೇಷ ಕೌಂಟರ್
ತೆರೆಯಿರಿ -ಸಿಪಿಐ(ಎಂ)

ಸರ್ಕಾರದ ವಿವಿಧ ಯೋಜನೆಗ
ಬ್ಯಾಂಕ್ ಉಳಿತಾಯ ಖಾತೆ ತೆರೆಯುವುದ
ಕಡ್ಡಾಯಗೊಳಿಸಿರುವ ಸರ್ಕಾರದ ಕ್ರಮದಿ
ಜನತೆಗೆ ಬ್ಯಾಂಕ್‌ಗಳಲ್ಲಿ ಉಳಿತಾಯ ಖ
ತೆರೆಯಲು ವಿಪರೀತ ತೊಂದರೆಯಾಗುತ್ತಿ
ಇದಕ್ಕಾಗಿ ಸಿಬ್ಬಂದಿ ಕೊರತೆಯು ಇರುವು
ವಾಸ್ತವವಾಗಿದೆ. ಈ ಹಿನ್ನೆಲೆಯಲ್ಲಿ ತಕ್ಷ
ವಿಶೇಷ ಕೌಂಟರ್‌ಗಳನ್ನು ತೆರೆಯುವ
ಒತ್ತಾಯಿಸಿ ಸಿಪಿಐ[ಎಂ], ಸಿಐಟಿಯ
ಕಾರ್ಯಕರ್ತರು ತುಮಕೂರಿನ ಲೀ
ಬ್ಯಾಂಕ್ ಎದುರು ಜೂನ್ 25,
ರಂದು ಪ್ರತಿಭಟನೆ ನಡೆಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಎಸ್.ಬಿ.
ಪ್ರಾದೇಶಿಕ ವ್ಯವಸ್ಥಾಪಕ
ಎ.ಜಿ.ಎಂ, ನಾಗೇಶ್, ಶಂಕರ್‌ರಾ
ಮಾತನಾಡಿ ಸಮಸ್ಯೆಗಳನ್ನು ಶೀಘ್ರ
ಬಗೆಹರಿಸುತ್ತೇವೆಂದು ಹೇಳಿ ಯಾವು
ಬ್ಯಾಂಕ್ ಶಾಖೆಗಳು ಫಲಾನುಭವಿಗ
ಬ್ಯಾಂಕ್‌ಗೆ ಬಂದಾಗ ಉಳಿತಾಯ ಖ
ತೆರೆಯಲು ನಿರಾಕರಿಸುವಂತಿಲ್ಲ ಎಂ
ನುಡಿದರು. ಲೀಡ್ ಬ್ಯಾಂಕ್ ವ್ಯವಸ್ಥಾ
ಜಯರಾಮಯ್ಯ ಮಾತನಾಡಿ ಯಾವು
ಸಮಸ್ಯೆಗಳಿದ್ದರೆ ತಮ್ಮ ಗಮನಕ್ಕೆ ತರುವ
ಕೋರಿದರು. ಬ್ಯಾಂಕ್ ನೌಕರರ ಸಂಘ
ವೆಂಕಟೇಶ್ ಉಪಸ್ಥಿತರಿದ್ದರು.

ಸಿಪಿಐ[ಎಂ] ಜಿಲ್ಲಾ ಕಾರ್ಯದ
ಸೈಯದ್ ಮುಜೀಬ್, ಸಿಐಟಿಯು ಜಿ
ಕಾರ್ಯದರ್ಶಿ ಎನ್.ಕೆ.ಸುಬ್ರಹ್ಮಣ್ಯ ಹಾಗ
ಡಿವೈಎಫ್‌ಐನ ರಾಘವೇಂದ್ರ, ಎಸ್ಎ
ಶಿವಣ್ಣ, ಸಿಐಟಿಯುನ ಮುತ್ತುರಾ
ರಾಘವೇಂದ್ರ ಮೊದಲಾದವ
ಮಾತನಾಡಿದರು.

ಜಿಲ್ಲೆಯ ವಿವಿದೆಡೆ ಏಕಕಾ
ಜನತೆ ಬ್ಯಾಂಕ್‌ಗಳತ್ತ ಉಳಿತಾಯ ಖಾ
ಆರಂಭಿಸಲು ಮುಗಿ ಬೀಳುತ್ತಿರುವುದ
ಸರ್ಕಾರ ಎಲ್‌ಪಿಜಿ ಸಹಾಯಧನ, ನೇ
ನಗದು ವರ್ಗಾವಣೆ ಬ್ಯಾಂಕ್‌ನಲ್ಲಿ ನೀಡ
ಹೊರಟಿದ್ದು ಕಾರಣವಾಗಿದೆ. ಶಾ
ಕಾಲೇಜುಗಳಲ್ಲಿ ಅಭ್ಯಾಸ ಮಾಡುತ್ತಿರು
ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕೆ ಶೂ
ಠೇವಣಿ ಖಾತೆಗಳನ್ನು ಅಡ-ತಡೆ ಇಲ್ಲ
ಆರಂಭಿಸುವಂತೆಯೂ ಪ್ರತಿಭಟನಾಕಾರ
ಒತ್ತಾಯಿಸಿದರು.

ತಿಪ್ಪೇಸ್ವಾಮಿ, ಮುತ್ತುರಾಜ್, ಇಂ
ಸಿಪಿಐ [ಎಂ] ನಗರಸಮಿತಿಯ ಅಜ
ಕಟ್ಟಡ ಕಾರ್ಮಿಕ ಸಂಘದ ಶಂಕರಪ್ಪ,
ಎಫ್.ಐ, ದರ್ಶನ್ ಉಪಸ್ಥಿತರಿದ್ದರು.

– ವರದಿ : ಮುತ್ತುರಾ

ಆಹಾರ ಭದ್ರತಾ ಮಸೂದೆ: ನಾಲ್ಕು ವರ್ಷಗಳ ನಿಷ್ಕ್ರಿಯತೆ, ಈಗ ಸುಗ್ರೀವಾಜ್ಞೆ


ಶೇಷ ಅಧಿವೇಶನವೇ, ಅಥವ ಸುಗ್ರೀವಾಜ್ಞೆಯೇ?– ುಪಿಎ–2 ಸರಕಾರ ಆಹಾರ ಭದ್ರತಾ ಮಸೂದೆಯನ್ನು ಲು ಕೊನೆಗೂ ಸುಗ್ರೀವಾಜ್ಞೆಯ ದಾರಿಯನ್ನೇ ಆರಿಸಿದೆ. ದ ಚುನಾವಣೆಯಲ್ಲಿ ಅದು ಕೊಟ್ಟಿದ್ದ ಭರವಸೆಯನ್ನು ಡೇರಿಸಲು ಕೊನೆಗೂ ಅದು ಮುಂದಾದ ಪರಿ ಈ ಸರಕಾರದ ಲ್ಕು ವರ್ಷಗಳ ದಾಖಲೆಗೆ ಅನುಗುಣವಾದದ್ದೇ.

ಸಿಪಿಐ(ಎಂ) ಪೊಲಿಟ್‌ಬ್ಯುರೋ ಹೇಳಿರುವಂತೆ ಈ ಸೂದೆಯನ್ನು ಯುಪಿಎ–2 ಸರಕಾರ ್ಯಂತ ಅಪ್ರಾಮಾಣಿಕ ರೀತಿಯಲ್ಲಿ ದಿದೆ. ಇಂತಹ ಒಂದು ಪ್ರಮುಖ ಸನವನ್ನು ತರಲು ಅತ್ಯಂತ ಹೆಚ್ಚಿನ ್ಯತೆ ಕೊಡಬೇಕಾಗಿತ್ತು. ಆದ– ನಾಲ್ಕು ವರ್ಷಗಳ ಕಾಲ ಸಂಸತ್ತಿನ ುಂದೆ ಒಂದು ಪರಿಣಾಮಕಾರಿಯಾದ ದೆಯನ್ನು ತರಲು ವಿಫಲವಾದ ಕಾರ ಕೊನೆಗೆ ಸುಗ್ರೀವಾಜ್ಞೆಯ ರೆ ಹೋಗಿದೆ. ಇದು ಸಂಸತ್ತಿನ ಬಗ್ಗೆ ಕಾಪ್ರಭುತ್ವ ವಿಧಿ–ವಿಧಾನಗಳ ಬಗ್ಗೆ ದರ ತಾತ್ಸಾರವನ್ನು ತೋರಿಸುತ್ತದೆ ುದು ಸಿಪಿಐ(ಎಂ) ಹೇಳಿದೆ.


ಹಸಿವು, ಅಪೌಷ್ಟಿಕತೆಯಿಂದ ನಮ್ಮ ೀಟಿಗಟ್ಟಲೆ ದೇಶಬಾಂಧವರು ಳುತ್ತಿರುವ ಸನ್ನಿವೇಶದಲ್ಲಿ ಇಂತಹ ುದು ಶಾಸನ ಅತ್ಯಂತ ಮಹತ್ವದ್ದಾಗಿದ್ದು ಬಗ್ಗೆ ಸಂಸತ್ತಿನಲ್ಲಿ ಆಮೂಲಾಗ್ರ ಚರ್ಚೆ ಡೆಯಬೇಕಾಗಿತ್ತು. ಇದಕ್ಕೆ ಸಮಯದ ಅಭಾವವೇನೂ ರಲಿಲ್ಲ, ರಾಜಕೀಯ ಇಚ್ಛಾಶಕ್ತಿಯ ಅಭಾವ ಮಾತ್ರ ಹಳಷ್ಟಿತ್ತು. ಜತೆಗೆ ವಿವಿಧ ನೆವಗಳನ್ನು ಒಡ್ಡುವಲ್ಲಿ ಪ್ರಮುಖ ತಿಪಕ್ಷದ 'ಮ್ಯಾಚ್ ಫಿಕ್ಸಿಂಗ್' ನೆರವೂ ಸಿಕ್ಕಿತ್ತು. ಆದರೂ, ಲ್ಕು ವರ್ಷಗಳ ಅನಗತ್ಯ ವಿಳಂಬದ ನಂತರವೂ, ಗಲೂ ಒಂದು ವಿಶೇಷ ಅಧಿವೇಶನ ಕರೆದು ಚರ್ಚಿಸುವ ವಕಾಶವಿತ್ತು. ಇಲ್ಲವೇ ಮಳೆಗಾಲದ ಅಧಿವೇಶನವನ್ನು ಮೊದಲೇ ಆರಂಭಿಸಿ ಇದನ್ನು ಆಮೂಲಾಗ್ರ ಚರ್ಚೆಗೆ ಡಿಸುವ ಅವಕಾಶವೂ ಇತ್ತು. ಹೀಗೆ ಮಾಡದಿರಲು ರಣಗಳೇನು ಎಂದು ಜನತೆಗೆ ಯುಪಿಎ–2 ಸರಕಾರ ಳಿಸಬೇಕಾಗಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಂಘಟನೆ ಹೇಳಿದೆ.

ಕಾರಣ ಸ್ಪಷ್ಟ. ಈ ಸುಗ್ರೀವಾಜ್ಞೆಯ ಹಿಂದೆ ನಮ್ಮ ೇಶದ ಜನಸಾಮಾನ್ಯರಿಗೆ ಸಾರ್ವತ್ರಿಕವಾದ ಆಹಾರದ ಕ್ಕು ಕೊಡಿಸುವುದು ಸರಕಾರಕ್ಕೆ ಮುಖ್ಯವಾಗಿರಲಿಲ್ಲ. ್ರಷ್ಟಾಚಾರಪೂರ್ಣ, ಜನ–ವಿರೋಧಿ ದಾಖಲೆಗಳನ್ನು ಂಬಿಕೊಂಡ ಒಂದು ಸರಕಾರ ಮತ್ತೆ ತಮಗೆ ಅಧಿಕಾರ ಕೊಡಿ ುದು ಕೇಳಲು ಜನರ ಬಳಿಗೆ ಹೋಗಲು ಸಾಧ್ಯವಿಲ್ಲ. ಅದ– ್ಕೊಂದು ಮುಖವಾಡ ಬೇಕಿತ್ತು. ಯುಪಿಎ–2 ತಯಾರಿಸಿರುವ ಮಸೂದೆ ಹಲವು ತೂತುಗಳಿಂದ ಕೂಡಿದೆ ಎಂಬುದೇ ದಕ್ಕೆ ಸಾಕ್ಷಿ. ಇವು ಉದ್ದೇಶಪೂರ್ವಕವಾಗಿಯೇ ಬಿಟ್ಟಿರುವ ತೂತುಗಳು ಎಂದು ಬೇರೆ ಹೇಳಬೇಕಾಗಿಲ್ಲ. ಏಕೆಂದರೆ ದಿಕ್ಕಿನಲ್ಲಿ ಸರಕಾರದ ನಿಲುವುಗಳ ಬಗ್ಗೆ ಎಡಪಕ್ಷಗಳು ುತ್ತು ಜನಪರ ಸಂಘಟನೆಗಳು ಮತ್ತು ವ್ಯಕ್ತಿಗಳು ವ ಆಕ್ಷೇಪಗಳನ್ನು ಮತ್ತು ನೀಡಿರುವ ಸಲಹೆಗಳನ್ನು ಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ. ಉದಾಹರಣೆಗೆ, ಈ ಮಸೂದೆಯಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಗೊಳಿಸುವ, ಅದನ್ನು ಸಾರ್ವತ್ರಿಕಗೊಳಿಸುವ ವಿಚಾರವಿಲ್ಲ. ಇದನ್ನು ಮಾಡದೆ ಒಂದು ನೈಜ ಆಹಾರ ಹಕ್ಕನ್ನು ಒದಗಿಸಲೂ ಸಾಧ್ಯವಿಲ್ಲ. ಅದರ ಪ್ರಾಮಾಣಿಕ ಅನುಷ್ಠಾನವಂತೂ ದೂರದ ಮಾತು. ವಾಸ್ತವವಾಗಿ ಇಂತಹ ಚರ್ಚೆಗಳನ್ನು ತಪ್ಪಿಸುವುದಕ್ಕಾಗಿಯೇ ಸುಗ್ರೀವಾಜ್ಞೆಯ ದಾರಿ ಹಿಡಿದಂತಿದೆ.

ಏನೇ ಆಗಲಿ, ಇದು ಶಾಸನವಾಗಲು ಸಂಸತ್ತಿನ ಮುಂದೆ ಬರಲೇಬೇಕು. ಸಿಪಿಐ(ಎಂ) ಮತ್ತು ಇತರ ಎಡಪಕ್ಷಗಳು ಇವನ್ನೆಲ್ಲ ಚರ್ಚೆಗೆ ತಂದು ಜನಪರ ತಿದ್ದುಪಡಿಗಳನ್ನು



ತರುವ ಪ್ರಯತ್ನ ನಡೆಸಲು ನಿರ್ಧರಿಸಿವೆ. ಆದರೆ, ಈ ನಡುವೆ ಯುಪಿಎ–2 ಮುಖಂಡರು ಇನ್ನೂ ಒಂದು ತಂತ್ರ ಹೆಣೆಯುತ್ತಿರುವುದಾಗಿ ವರದಿಯಾಗಿದೆ. ಇದುವರೆಗೆ ವಿಶೇಷ ಅಧಿವೇಶನ ಕರೆಯುವ ಅಥವ ಮಳೆಗಾಲದ ಅಧಿವೇಶನವನ್ನು ಮೊದಲೇ ಆರಂಭಿಸುವ ಮಾತಿತ್ತು. ತದ್ವಿರುದ್ಧವಾಗಿ ಈಗ ಅದನ್ನು ವಿಳಂಬಗೊಳಿಸುವ ಹುನ್ನಾರ ನಡೆದಿದೆಯಂತೆ, ಸಾಮಾನ್ಯವಾಗಿ ಜುಲೈ ಮ



ವೇದರಾಜ ಎನ್.ಕೆ.

ೂರನೇ ವಾರದಲ್ಲಿ ಆರಂಭವಾಗಬೇಕಾದ ಮಳೆಗಾಲದ ಅಧಿವೇಶನ ಅಗಸ್ಟ್ 15ರ ನಂತರವೇ ಆರಂಭವಾಗುವಂತೆ ಮಾಡಿ, ಈ ಮಧ್ಯದ ಅವಧಿಯನ್ನು ತನ್ನ 'ಪ್ರಾಮಾಣಿಕತೆ'ಯನ್ನು ಸ್ಥಾಪಿಸಲು ಸರಕಾರ ಬಳಸಬಹುದು ಎನ್ನಲಾಗುತ್ತಿದೆ.

ಯುಪಿಎ–2 ಸರಕಾರಕ್ಕೆ ಎರಡೆರಡು ತರಾಟೆ

ಕಳೆದ ವಾರ ಯುಪಿಎ–2 ಸರಕಾರ ದೇಶದ ಸರ್ವೋಚ್ಚ ನ್ಯಾಯಾಲಯದಿಂದ ಮತ್ತೆ ಎರಡು ಬಾರಿ ತರಾಟೆಗೊಳಗಾಯಿತು.

"ಒಂದೋ, ಸರಕಾರ ಎಲ್ಲ ದಾಖಲೆಗಳನ್ನೂ ಕೊಡಬೇಕು, ಇಲ್ಲವೇ, ಅರ್ಜಿಗಳ ಪರೀಕ್ಷಣೆ ಪಾರದರ್ಶಕವಾಗಿ, ಪ್ರಾಮಾಣಿಕವಾಗಿ ನಡೆದಿದೆ ಎಂದು ತೋರಿಸಲು ತನ್ನ ಬಳಿ ದಾಖಲೆಗಳಿಲ್ಲ ಎಂದು ಹೇಳಿ, ನ್ಯಾಯಾಲಯ ಅದರ ವರ್ತನೆಯ ಬಗ್ಗೆ ಒಂದು ಪ್ರತಿಕೂಲ ಉಲ್ಲೇಖಕ್ಕೆ ಬರಲು ಬಿಡಬೇಕು"– ಇದು ಕಲ್ಲಿದ್ದಲು ಬ್ಲಾಕುಗಳ ನೀಡಿಕೆ ಕುರಿತ ವಿಚಾರಣೆಯ ಸಂದರ್ಭದಲ್ಲಿ ಯುಪಿಎ–2 ಸರಕಾರದ ವರ್ತನೆಯ ಬಗ್ಗೆ ಮಾಡಿರುವ ಒಂದು ಟಿಪ್ಪಣಿ.

ಇನ್ನೊಂದು ಮಹಿಳೆಯರ ಮೇಲೆ ಆಸಿಡ್ ದಾಳಿ ಕುರಿತಾದದ್ದು. ಆಸಿಡ್‌ಗಳು ಸುಲಭವಾಗಿ ವ್ಯಾಪಕವಾಗಿ ಮಾರುಕಟ್ಟೆಯಲ್ಲಿ ಲಭ್ಯವಿರುವುದು ಇಂತಹ ದಾಳಿಗಳನ್ನು ತಡೆಯುವಲ್ಲಿ ಒಂದು ಅಡ್ಡಿ ಎಂಬ ಕಾರಣದಿಂದ ಸುಮಾರು ಮೂರು ತಿಂಗಳ ಹಿಂದೆ ಅವುಗಳ ಮಾರಾಟದ ಮೇಲೆ ನಿಯಂತ್ರಣದ ಬಗ್ಗೆ ಅಫಿಡವಿಟ್ ಸಲ್ಲಿಸಬೇಕು ಎಂದು ಸುಪ್ರಿಂ

ಪುಟ 14 ಕ್ಕೆ

ವಿದೇಶಿ ಸಾಲದ ಹೊರೆ 9 ವರ್ಷಗಳಲ್ಲಿ ನಾಲ್ಕು ಪಟ್ಟು

ಒಂಭತ್ತು ವರ್ಷಗಳ ಹಿಂದೆ, 2004 ರಲ್ಲಿ ಭಾರತದ ವಿದೇಶಿ ಸಾಲಗಳ ಮೊತ್ತ 100 ಬಿಲಿಯ ಡಾಲರುಗಳಿತ್ತು. ಈಗ 2013 ರಲ್ಲಿ ಅಂದರೆ ಯುಪಿಎ ಸರಕಾರಗಳ ಒಂಬತ್ತು ವರ್ಷಗಳ ಆಳ್ವಿಕೆಯ ನಂತರ ಅದು 390 ಬಿಲಿಯ ಡಾಲರುಗಳಿಗೆ ಬಂದು ನಿಂತಿದೆ. ಕಳೆದ ವಾರ ಪ್ರಕಟವಾದ ರಿಝರ್ವ್ ಬ್ಯಾಂಕಿನ ಮೂರು ವರದಿಗಳಲ್ಲಿ ಒಂದು ವರದಿ ಈ ಅಂಕಿ–ಅಂಶಗಳನ್ನು ನೀಡಿದ್ದರೆ, ಇನ್ನೆರಡು ವರದಿಗಳೂ ನಮ್ಮ ದೇಶದ ಆರ್ಥಿಕದ ಬಗ್ಗೆ ಆತಂಕವನ್ನೇನೂ ಕಡಿಮೆ ಮಾಡುವಂತದ್ದಲ್ಲ.

ಡಾಲರಿಗೆ ಎದುರಾಗಿ ರೂಪಾಯಿಯ ಬೆಲೆ ಕಳೆದ ವಾರ ಇನ್ನಷ್ಟು ಕುಸಿದಿರುವುದನ್ನು ಗಮನಕ್ಕೆ ತೆಗೆದುಕೊಂಡರೆ ವಿದೇಶಿ ಸಾಲದ ಹೊರೆಯ ಏರಿಕೆ ನಾಲ್ಕು ಪಟ್ಟು ಹೆಚ್ಚಾಗುತ್ತದೆ. ಒಂದು ವರ್ಷದೊಳಗೆ ತೀರಿಸಬೇಕಾದ ಅಲ್ಪಾವಧಿ ಸಾಲದ ಹೊರೆ ಇನ್ನೂ ಆತಂಕದ ಸಂಗತಿ. ಯುಪಿಎ–2 ಸರಕಾರ ಬರುವ ಸ್ವಲ್ಪ ಮೊದಲು, 2008ರಲ್ಲಿ 54 ಬಿಲಿಯ ಡಾಲರುಗಳಷ್ಟಿದ್ದ ಇದು, ಈಗ 172 ಬಿಲಿಯ ಡಾಲರುಗಳಿಗೆ ಹಿಗ್ಗಿದೆ. ಅಂದರೆ ಎಪ್ರಿಲ್ 2014ರ ಮೊದಲು ಇಷ್ಟು ಸಾಲವನ್ನು ತೀರಿಸಬೇಕಾಗಿದೆ. ಅಂದರೆ ನಮ್ಮ ವಿದೇಶಿ ವಿನಿಮಯ ಮೀಸಲು ಭಂಡಾರದ 60ಶೇ. ದಷ್ಟು.

ಇದಕ್ಕೆ ಕಾರಣ ಭಾರತದಂತಹ ದೇಶಗಳು ಮುಂದುವರೆದ ಬಂಡವಾಳಶಾಹಿ ದೇಶಗಳ, ಮುಖ್ಯವಾಗಿ ಅಮೆರಿಕ ಸಂಯುಕ್ತ ಸಂಸ್ಥಾನಗಳ 'ಸುಲಭ ಹಣ'ದ ಬಲೆಗೆ ಬಿದ್ದದ್ದು ಎನ್ನುತ್ತಾರೆ ಕೆಲವು ಆರ್ಥಿಕ ತಜ್ಞರು. ಈಗ ಆ ದೇಶಗಳು ತಮ್ಮ ಹಣಕಾಸು ಧೋರಣೆಗಳನ್ನು 'ಕಠಿಣ'ಗೊಳಿಸುತ್ತಿವೆ. ಅದರ ಒಂದು ಪರಿಣಾಮವಾಗಿ ಒಂದೆಡೆ ರೂಪಾಯಿ ಮೌಲ್ಯ ಕುಸಿಯುತ್ತಿದ್ದರೆ, ಇನ್ನೊಂದೆಡೆ ಈ 'ಸುಲಭ ಹಣ'ದ ಹರಿವಿನಿಂದಾಗಿ ದೇಶೀ ಉದ್ದಿಮೆಗಳನ್ನು ಬಲಪಡಿಸುವತ್ತ ಗಮನ ನೀಡಲಿಲ್ಲ. ಆಮದುಗಳು ಹೆಚ್ಚಿದವು, ರಫ್ತುಗಳು ಕುಸಿದು ಈಗ 'ಚಾಲ್ತಿ ಖಾತೆ ಕೊರತೆ' ಎಂಬ ಗಂಭೀರ ಸಮಸ್ಯೆಯನ್ನು ಎದುರಿಸುವಂತಾಗಿದೆ.

ಆದರೆ ಇಲ್ಲಿ ಏಳುವ ಪ್ರಶ್ನೆ–ಅಮೆರಿಕಾವೂ ಕಳೆದ ಕೆಲವು ವರ್ಷಗಳಿಂದ ಈ 'ಚಾಲ್ತಿ ಖಾತೆಯ ಕೊರತೆ' ಎಂಬ ಕಾಯಿಲೆಯಿಂದ ಬಳಲುತ್ತಿದೆ. ಆದರೆ ಅದರ ಡಾಲರ್ ಇನ್ನೂ ಗಟ್ಟಿಮುಟ್ಟಾಗಿಯೇ ಇದೆ, ಭಾರತದ ರೂಪಾಯಿ ಮಾತ್ರ ಕುಸಿಯುತ್ತಿದೆಯೇಕೆ? ವಾಸ್ತವವಾಗಿ ಇದು ನವ–ಉದಾರವಾದಿ ವ್ಯವಸ್ಥೆಯಡಿಯಲ್ಲಿ ಜಾಗತಿಕ ಆರ್ಥಿಕದಲ್ಲೇ ಅಡಕವಾಗಿರುವ ಮೂಲಭೂತ ಅಸಮಾನತೆಯನ್ನು ಮತ್ತೊಮ್ಮೆ ಎತ್ತಿ ತೆ–ೋರಿದೆ. ನವ–ಉದಾರವಾದಿ ಬಲೆಯಿಂದ ಹೊರ ಬರದೆ ಈ ಸಾಲದ ಹೊರೆಯಿಂದಲೂ ದೇಶಕ್ಕೆ ಮುಕ್ತಿಯಿಲ್ಲ ಎಂಬುದೂ ಈಗ ಸ್ಪಷ್ಟ. ಆದರೆ ಯುಪಿಎ–2 ಸರಕಾರ ದೇಶವನ್ನು ಅದೇ ಬಲೆಯಲ್ಲಿ ಮತ್ತಷ್ಟು ಗಟ್ಟಿಯಾಗಿ ಸಿಲುಕಿಸುವ ದಿಕ್ಕಿನಲ್ಲಿಯೇ ಸಾಗುತ್ತಿದೆ.

ಜ್ಯೋತಿ ಬಸು......


ಪುಟ 11 ರಿಂದ

ಮೈಸೂರು ನಗರದ ವರ್ಧಮಾನಯ್ಯ ಸಭಾಂಗಣ ಜುಲೈ 10, 2013ರಂದು ತುಂಬಿ ತುಳುಕುತ್ತಿತ್ತು. ದುಡಿಯುವ ಜನತೆ ಇಲ್ಲಿ ಸಂಭ್ರಮಿಸಿ ಜನ್ಮ ದಿನ ಆಚರಿಸಿದರು.

'ನಾವು ಬೆವರನು ಸುರಿಸಿ ದುಡಿಯುವ ಜನ ನಮ್ಮ ಬೆವರಿನ ಪಾಲನ್ನು ಕೇಳುವೆವು'

ಎಂಬ ಕ್ರಾಂತಿ ಗೀತೆಯೊಂದಿಗೆ ದುಡಿಯುವ ಜನರ ನೇತಾರ ಕಾಂ. ಜ್ಯೋತಿಬಸು ಜನ್ಮ ಶತಾಬ್ದಿ ಆಚರಣಾ ಕಾರ್ಯಕ್ರಮವು ಸಿಐಟಿಯು ನೇತೃತ್ವದಲ್ಲಿ ಪ್ರಾರಂಭವಾಯಿತು. ಇದಕ್ಕೂ ಮೊದಲು ನೂರಾರು ಕಾರ್ಮಿಕರು ನಗರದ ಗಾಂಧಿವೃತ್ತದಿಂದ ವರ್ಧಮಾನಯ್ಯ ಸಭಾಂಗಣದವರೆಗೆ ಮೆರವಣಿಗೆ ನಡೆಸಿದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕಾ॥ಎ.ಕೆ. ಪದ್ಮನಾಭನ್ ಜ್ಯೋತಿಬಸು ಸ್ವಾತಂತ್ರ್ಯ ಹೋರಾಟಗಾರರಾಗಿ, ಸಾಮೂಹಿಕ ಸಂಘಟನೆ ಮುಖಂಡರಾಗಿ ದುಡಿಯುವ ವರ್ಗದ ಮುಖಂಡರಾಗಿ, ಜನಪ್ರತಿನಿಧಿಯಾಗಿ, ಮುಖ್ಯಮಂತ್ರಿಯಾಗಿ, ತಮ್ಮ ಉಸಿರು ನಿಲ್ಲುವವರೆಗೂ ಜನತೆಗಾಗಿ ದುಡಿದಿದ್ದಾರೆ. ತಮ್ಮ ದೇಹವನ್ನು ಸಂಶೋಧನೆಗಾಗಿ ನೀಡಿ ಉಸಿರು ನಿಂತ ಮೇಲೂ ಜನತೆಯ ಮತ್ತು ಸಮಾಜದ ಪರವಾಗಿರುವುದು ಹೇಗೆಂಬುದನ್ನು ತೋರಿಸಿ ಕೊಟ್ಟಿದ್ದಾರೆ ಎಂದರು.

1940ರಂದು ಕಮ್ಯೂನಿಸ್ಟ್ ಪಕ್ಷಕ್ಕೆ ಸೇರಿದ ಅವರು ರೈಲ್ವೆ ಕಾರ್ಮಿಕ ಸಂಘಟನೆಯಲ್ಲಿ ತೊಡಗಿಕೊಂಡು ಸಿಪಿಐ(ಎಂ) ಸ್ಥಾಪನೆಯಾದಾಗ 9 ಜನ ಪಾಲಿಟ್ ಬ್ಯೂರೊ ಸದಸ್ಯರಲ್ಲಿ ಇವರು ಒಬ್ಬ ಪ್ರಮುಖ ನೇತಾರರಾದರು. ಸಮಿಶ್ರ ಸರ್ಕಾರದಲ್ಲಿ ಉಪಮುಖ್ಯ ಮಂತ್ರಿಯಾಗಿ, 1977 ರಿಂದ 2000ರ ವರೆಗೆ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದಲ್ಲಿ ಸತತ 23 ವರ್ಷಗಳ ಕಾಲ ಮುಖ್ಯಮಂತ್ರಿಯಾಗಿದ್ದರು. ಇವರ ನಾಯಕತ್ವದಲ್ಲಿ ಭೂ ಸುಧಾರಣೆ ಮಾಡಿ ಉಳುವವನಿಗೆ ಭೂಮಿ ನೀಡಲಾಯಿತು ಎಂದರು.



ಮುಖ್ಯ ಅತಿಥಿಗಳಾಗಿದ್ದ ಸಿಐಟಿಯುನ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನ ಕುಮಾರ್ ಮಾತನಾಡಿ ಇಂದು ಕರ್ನಾಟಕದಲ್ಲಿ ನೀಡುವ ಅಗ್ಗದ ಅಕ್ಕಿ ಯೋಜನೆ ಹೊಸತೇನಲ್ಲ. ಪಶ್ಚಿಮ ಬಂಗಾಳದಲ್ಲಿ ಜ್ಯೋತಿಬಸು ನೇತೃತ್ವದ ಸರ್ಕಾರ ಅಂದೇ ಅಕ್ಕಿ ಸೇರಿದಂತೆ 17 ಅಗತ್ಯ ವಸ್ತುಗಳನ್ನು ಕಡಿಮೆ ದರದಲ್ಲಿ ನೀಡುತ್ತಿತ್ತು ಎಂದರು. ಕಮ್ಯೂನಿಸ್ಟರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲ ಎನ್ನುವವರಿದ್ದಾರೆ. ಆದ-ರೆ ಪಶ್ಚಿಮ ಬಂಗಾಳದಲ್ಲಿ ಪೋಲೀಸರಿಗೂ ಸಂಘಟಿತರಾಗುವ ಅಧಿಕಾರ ಕೊಟ್ಟು ಪ್ರಜಾಪ್ರಭುತ್ವಕ್ಕೆ ಮಾದರಿಯಾದದ್ದು ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಎಂದರು.

'ಎಲ್ಲಿ ದುಡಿಯುವ ಜನರ ಹಕ್ಕುಗಳಿಗೆ ಸ್ಪಂದನೆ ಇರುವುದಿಲ್ಲವೋ ಅಲ್ಲಿ ಮಾಲೀಕರ ಹಕ್ಕುಗಳಿಗೂ ಸ್ಪಂದನೆ ಇಲ್ಲ' ಎಂಬ ಜ್ಯೋತಿಬಸುರವರ ಹೇಳಿಕೆಯೊಂದಿಗೆ ಅವರು ಮಾತು ಮುಗಿಸಿದರು.

ದೇಶದಲ್ಲಿ ಅಧಿಕಾರ ವಿಕೇಂದ್ರೀಕರಣದ ಉದ್ದೇಶದೊಂದಿಗೆ ಸದೃಢ ಪಂಚಾಯಿತಿ ಸಂಸ್ಥೆಯನ್ನು ಹುಟ್ಟಿ ಹಾಕಿದ್ದೇ ಜ್ಯೋತಿಬಸು ನೇತೃತ್ವದ ಎಡರಂಗ ಸರ್ಕಾರ ಎಂದು ಸಭಾಂಗಣದಲ್ಲಿ ನೆರೆದಿದ್ದ ಪಂಚಾಯಿತಿ ನೌಕರರ ಗಮನ ಸೆಳೆದ ಗ್ರಾ.ಪಂ.ನೌಕರರ ಸಂಘದ ಜಿಲ್ಲಾಧ್ಯಕ್ಷರು ಹಾಗೂ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿಗಳಾದ ಕೆ.ಬಸವರಾಜು ತಿಳಿಸಿದರು. ನಂತರ ಕಾವೇರಿ ಗ್ರಾಮೀಣ ಬ್ಯಾಂಕ್ ಅಧಿಕಾರಗಳ ಸಂಘದ ಅಧ್ಯಕ್ಷರಾದ ಮೂರ್ತಿಯವರು ಮಾತನಾಡುತ್ತಾ ಪಕ್ಷದ ನಿಲುಮೆಗೆ ಬದ್ದರಾಗಿ ಪ್ರಧಾನ ಮಂತ್ರಿ ಹುದ್ದೆ ನಿರಾಕರಿಸಿದ ಶಿಸ್ತು ಜ್ಯೋತಿಬಸು ಅವರದ್ದು ಎಂದರು.

ಸಿಐಟಿಯು ಜಿಲ್ಲಾಧ್ಯಕ್ಷರಾದ ಬಾಲಾಜಿರಾವ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಜಿ.ಜಯರಾಂ, ಬಿಆರ್‌ಜಿಐಇಎ ಅಧ್ಯಕ್ಷರಾದ ಬಲರಾಂ, ಐಸಿಇಯು ವಿಭಾಗೀಯ ಪ್ರಧಾನ ಕಾರ್ಯದರ್ಶಿ ಎಸ್. ಎಸ್.ನಾಗೇಶ್, ಅಂಗನವಾಡಿ ನೌಕರರ ರಾಜ್ಯ ಕಾರ್ಯದರ್ಶಿ ಸುನಂದ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕಾರ್ಮಿಕ ಸಂಘಗಳಾದ ವಿಕ್ರಾಂತ್ ಟೈರ್ಸ್ ಎಂಪ್ಲಾಯಿಸ್ ಯೂನಿಯನ್, ರಿಡ್ ಅಂಡ್ ಟೆಲರ್, ಐಸಿಇಯು, ಬಿಆರ್‌ಜಿಐಇಎ, ಅಂಗವಾಡಿ ನೌಕರರ ಸಂಘ, ಗ್ರಾಮ ಪಂಚಾಯಿತಿ ನೌಕರರ ಸಂಘ ಇತ್ಯಾದಿಗಳಿಂದ ನೂರಾರು ಕಾರ್ಮಿಕರು ಭಾಗವಹಿಸಿದ್ದರು.

–ಮಹೇಶ್ ಕುಮಾರ್
ಕಲ್ಕುಣಿಕೆ ಮೈಸೂರು.

ಆಧುನಿಕ ಭಾರತೀಯ.....

ಪುಟ 7 ರಿಂದ

ಅಂಗ ಬೇಕಾಯಿತು. ಮೊದಲಿಗೆ, 1952ರಲ್ಲಿ ಜನಸಂಘ ಆ ಕೆಲಸ ಮಾಡಿತು ನಂತರ ಇದು ಜನತಾಪಕ್ಷದೊಳಗೆ ವಿಲೀನಗೊಂಡಿತು. ಆ ಪಕ್ಷ ವಿಘಟನೆಗೊಂಡ ನಂತರ 1980 ರಿಂದ ಬಿಜೆಪಿ ಆ ಕೆಲಸ ಮಾಡುತ್ತಿದೆ.

ಮತ್ತದೇ ಅಜೆಂಡಾ!

ಆರೆಸ್ಸೆಸ್‌ನ ಗುರಿಸಾಧನೆಯಲ್ಲಿ ತೊಡಗಿ-ಕೊಂಡ ಬಿಜೆಪಿಗೆ ಕೋಮು ಧ್ರುವೀಕರಣವನ್ನು ತೀಕ್ಷ್ಣಗೊಳಿಸುವುದಲ್ಲದೆ, ದೊಡ್ಡ ಮಟ್ಟದಲ್ಲಿ ಇತಿಹಾಸದ ಮರು-ಬರವಣಿಗೆ ಮಾಡಬೇಕಾಗಿತ್ತು. ತಾವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಾಗ ಪಾಠ್ಯಕ್ರಮವನ್ನು ಬದಲಿಸಿದ ಬಗ್ಗೆ ಹೇಳುತ್ತ ಒಬ್ಬ ಮಾಜಿ ಬಿಜೆಪಿ ಅಧ್ಯಕ್ಷರು "ನಾವು ಈ ಹಿಂದೆಯೂ ಇದನ್ನು ಮಾಡಲು ಪ್ರಯತ್ನಿಸಿದ್ದೇವೆ, ಮುಂದೆಯೂ ನಾವು ಮತ್ತೆ ಪ್ರಯತ್ನಿಸುತ್ತೇವೆ" ಎಂದು ಹೇಳಿರುವುದಾಗಿ ಮಾಧ್ಯಮ ವರದಿಗಳು ತಿಳಿಸುತ್ತವೆ(ಹಿಂದುಸ್ತಾನ್ ಟೈಮ್ಸ್, ಜೂನ್ 24, 2013).

ಅದೇ ದಿನ ಅಡ್ವಾಣಿಯವರು "ದೇಶ ಈಗಲೂ ಕಲಮು 370ನ್ನು(ಜಮ್ಮು-ಕಾಶ್ಮೀರಕ್ಕೆ ಸಂಬಂಧಿಸಿದ್ದು) ರದ್ದು ಮಾಡುವ ದಿನಕ್ಕೆ ಕಾಯುತ್ತಿದೆ" ಎಂದರು. ಇತ್ತೀಚಿನ ದಿನಗಳಲ್ಲಿ ಬಿಜೆಪಿ ಮುಖಂಡರು ಮತ್ತೊಮ್ಮೆ, ಅಯೋಧ್ಯೆಯ ವಿವಾದಿತ ಪ್ರದೇಶದಲ್ಲಿ ಒಂದು ಶ್ರೀರಾಮ ದೇವಸ್ಥಾನ ಕಟ್ಟುವ ಮಾತನ್ನು ಆಡಲಾರಂಭಿಸಿದ್ದಾರೆ. 1998ರಲ್ಲಿ ಎನ್‌ಡಿಎ ಸರಕಾರ ರಚಿಸಲು ಮಿತ್ರಪಕ್ಷಗಳನ್ನು ಆಕರ್ಷಿಸಲಿಕ್ಕಾಗಿ ಹಿನ್ನೆಲೆಗೆ ಸರಿಸಿದ್ದಂತೆ ಕಂಡಿದ್ದ ಮೂಲಮಂತ್ರಗಳಿಗೆ-ಕಟ್ಟಾ ಕೋಮುವಾದಿ ಅಜೆಂಡಾಕ್ಕೆ ಮರಳುವ ಕ್ರಿಯೆಯಿದು.

ಇಂತಹ ಒಂದು ಅಜೆಂಡಾ ಭಾರತದ ಐಕ್ಯತೆ ಮತ್ತು ಸಮಗ್ರತೆಗೆ ತದ್ವಿರುದ್ಧವಾದದ್ದು, ಭಾರತದ ಅಪಾರ ಶ್ರೀಮಂತಿಕೆ ಹೊಂದಿರುವ ಸಾಮಾಜಿಕ-ಸಾಂಸ್ಕೃತಿಕ-ಧಾರ್ಮಿಕ ವೈವಿಧ್ಯತೆಯನ್ನು ಕಾಯ್ದುಕೊಂಡು, ಅದನ್ನು ಇನ್ನಷ್ಟು ಶ್ರೀಮಂತಗೊಳಿಸುವುದಕ್ಕೆ ತದ್ವಿರುದ್ಧವಾದದ್ದು. ಆಧುನಿಕ ಭಾರತೀಯ ಗಣತಂತ್ರವನ್ನು ಇನ್ನಷ್ಟು ಕ್ರೋಢೀಕರಿಸಲು ಸಾಧ್ಯವಾಗಬೇಕಾದರೆ ಇದಕ್ಕೆ ಅವಕಾಶ ಕೊಡಲಾಗದು. ಹೀಗೆ ಭಾರತದ ಭವಿಷ್ಯತ್ತಿನ ದೃಷ್ಟಿಯಿಂದ, ಆಧುನಿಕ ಭಾರತೀಯ ಗಣತಂತ್ರದ ರೂಪಾಂತರಕ್ಕೆ ಆರೆಸ್ಸೆಸ್/ಬಿಜೆಪಿಗಳು ನಡೆಸಿರುವ ಪ್ರಯತ್ನಗಳನು ಘಂಟಾಘೋಷವಾಗಿ ಎದುರಿಸಿ ಸೋಲಿಸಬೇಕು. ●

ಆಹಾರ ಭದ್ರತೆ......

ಪುಟ 13 ರಿಂದ

ಕೋರ್ಟ್ ಯುಪಿಎ–2 ಸರಕಾರಕ್ಕೆ ತ
ಮಾಡಿತ್ತು. ಆದರೆ ಯುಪಿಎ–2 ಸರಕ
ದಿಕ್ಕಿನಲ್ಲಿ ಏನೂ ಮಾಡಿದಂತಿಲ್ಲ.
ಅಫಿಡವಿಟ್? ಜನ ಸಾಯುತ್ತಿದ್ದಾರೆ.
ಆ ಬಗ್ಗೆ ಬೇಸರವೇ ಇಲ್ಲ. ಪ್ರತಿದಿನ ಒ
ಒಂದು ಘಟನೆ ನಡೆಯುತ್ತಲೇಇದೆ...ಸ
'ದಿಂದ ನಿರೀಕ್ಷಿಸುವ ಗಂಭೀರತೆ ಕಾಣು
ಎಂದು ಛೀಮಾರಿ ಹಾಕಿದ
ಕೋರ್ಟ್ ಕಳೆದ ಏಳು ವರ್ಷಗಳಿಂ
ವಿಷಯ ನ್ಯಾಯಾಲಯದ ಮುಂದೆ
ಎಂಬ ಸಂಗತಿಯತ್ತವೂ ಸರಕಾರದ
ಸೆಳೆಯಿತು. ಇನ್ನು ಒಂದು ವಾರದ
ಆಸಿಡ್ ಮಾರಾಟವನ್ನು ನಿಯಂ
ಸ್ಕೀಮು ಸಿದ್ಧಪಡಿಸದಿದ್ದರೆ
ಮಾರಾಟದ ಮೇಲೆಯೇ ಸಂಪ
ನಿಷೇಧ ಹಾಕಬೇಕಾಗಬಹುದು
ನ್ಯಾಯಾಲಯ ಎಚ್ಚರಿಸಿದೆ.

ಕಲ್ಲಿದ್ದಲು ಬ್ಲಾಕುಗಳ ಹಂಚ
ವಿಷಯದಲ್ಲೂ ಇಂತಹುದೇ ಎ
ಕೆ ನೀಡಲಾಗಿದೆ. "ಸಿಬಿಐ ಒದ್ದಾಡ
ಅವರಿಗೇನೂ ಕೊಡುತ್ತಿಲ್ಲ" ಎಂದು ಆ
ವ್ಯಕ್ತಪಡಿಸಿದ ನ್ಯಾಯಾಲಯ ಇನ್ನು
ವಾರಗಳೊಳಗೆ 1993 ರಿಂದ 2
ನಡುವೆ ನಡೆದ ಹಂಚಿಕೆಗಳಿಗೆ ಸಂಬಂ
ಎಲ್ಲ ದಾಖಲೆಗಳನ್ನು ಒದಗಿಸಬೇಕು
ಹೇಳಿದೆ. ಈ ಹಗರಣಕ್ಕೆ ಸಂಬಂಧಪ
ವಿಚಾರಣೆಗೆ ಸಿಬಿಐ ಸರಕಾರದ ಮಂಜೂ
ಪಡೆಯಬೇಕಾಗಿಲ್ಲ ಎಂದೂ ಅದು
ಪಡಿಸಿದೆ.

ಜನಶಕ್ತಿಗೆ ಕೊಡುಗೆ

ಸಿಪಿಐ(ಎಂ) ಬೆಂಗಳೂರು ದಕ್ಷಿಣ
ಸಮಿತಿಯ ವಿಮಾ ಶಾಖೆಯ ಸದಸ್ಯ
ಕಾ॥ ಸಿ.ವಿ. ಕುಮಾರ್ ಅವರು
ಭಾರತೀಯ ಜೀವ ವಿಮಾ ನಿಗ
ಸೇವೆಯಿಂದ ನಿವೃತ್ತಿಯಾದ ಹಿನ್ನೆಲೆ
'ಜನಶಕ್ತಿ'ಗೆ 5,000 ಸಾವಿರ ರೂ.ಗ
ಕೊಡುಗೆಯಾಗಿ ನೀಡಿದ್ದಾರೆ.
ಅವರಿಗೆ 'ಜನಶಕ್ತಿ' ಪತ್ರಿ
ಪರವಾಗಿ ಧನ್ಯವಾದಗಳು ಹ
ಶುಭಾಶಯಗಳು.
ಅದೇ ರೀತಿಯಲ್ಲಿ ಮೈಸೂರಿನ ವಿ
ಸಂಗಾತಿ ಸಿ.ಆರ್.ಕೃಷ್ಣಮೂರ್ತಿಯ
ತಮ್ಮ ಸೇವೆಯಿಂದ ನಿವೃತ್ತ
ಸಂದರ್ಭದಲ್ಲಿ ಜನಶಕ್ತಿಗೆ 3,
ರೂಪಾಯಿಗಳ ಕೊಡುಗೆ ನೀಡಿದ್ದನ್ನು
ನೆನಪಿಸಿಕೊಳ್ಳುತ್ತೇವೆ. ಅವರಿಗೂ ಜನಶ
ಶುಭಹಾರೈಕೆ ಅಭಿನಂದನೆಗಳು ಸಲ್ಲುತ್ತ
ದುಡಿಯುವ ಜನರ ಪ್ರಾಣ ವಿ
ಪತ್ರಿಕೆಗೆ ಇಂತಹ ಕೊಡುಗೆಗಳು ಇನ
ಹೆಚ್ಚಲಿ ಎಂದು ಆಶಿಸುತ್ತೇವೆ. – ಸಂ

ಕೆ.ಪಿಎಸ್.ಸಿ.....

ಪುಟ 5 ರಿಂದ

ಸಂದರ್ಶನದಲ್ಲಿ ಕಡಿಮೆ ಅಂಕ ಪಡೆದವರು

ನೊಂದಣಿ ಸಂಖ್ಯೆ	ಮುಖ್ಯ ಪರೀಕ್ಷೆ ಅಂಕ	ಸಂದರ್ಶನದ ಅಂಕ
6926	1064.5	50
17593	1062	50
17866	1054.5	50
13620	1054.5	60
13771	1054.5	65

ಸಂದರ್ಶನದಲ್ಲಿ ಹೆಚ್ಚು ಅಂಕ ಪಡೆದವರು

ನೊಂದಣಿ ಸಂಖ್ಯೆ	ಮುಖ್ಯ ಪರೀಕ್ಷೆ ಅಂಕ	ಸಂದರ್ಶನದ ಅಂಕ
10296	543	150
14443	550	150
15003	564.5	150
10032	617.5	150
16194	648.5	150

ಏಕೆಂದರೆ ಅಭ್ಯರ್ಥಿ ಯಾವ ವಿಷಯಕ್ಕೆ ಸಂಬಂಧಪಟ್ಟವನೇ ಆಗಿರಲಿ, ಯಾವ ಪ್ರಶ್ನೆಯನ್ನಾದರೂ ಆತನಿಗೆ ಕೇಳಬಹುದು. ಇಂತಹುದೇ ಪ್ರಶ್ನೆಗಳನ್ನು ಕೇಳಬೇಕೆಂದೇನಿಲ್ಲ. ಉದಾ : ಒಬ್ಬ 'ಜೀವ ರಸಾಯನ ಶಾಸ್ತ್ರ'ದ ಅಧ್ಯಾಪಕನಾಗ ಬಯಸುವ ಅಭ್ಯರ್ಥಿಗೆ ಹೊಯ್ಸಳರ ರಾಜಧಾನಿ ಯಾವುದು? ಎಂಬ ಪ್ರಶ್ನೆಯನ್ನೂ ಸಹ ಕೇಳಬಹುದು. ಅಭ್ಯರ್ಥಿ ಉತ್ತರ ಕೊಡಲಿ, ಕೊಡದಿದ್ದರೂ ಅಭ್ಯರ್ಥಿಗೆ ಎಷ್ಟು ಅಂಕಗಳನ್ನು ನೀಡಬೇಕೆಂಬುದು ಸಂದರ್ಶಕನಿಗೆ ಇರುವ ಅಧಿಕಾರ. ಹೀಗಾಗಿ ಇದನ್ನು ಅತ್ಯಂತ ವ್ಯವಸ್ಥಿತವಾಗಿ ದುರ್ಬಳಕೆ ಮಾಡಿಕೊಂಡು ಯಾರಿಗೆ ಎಷ್ಟು ಅಂಕಗಳನ್ನು ನೀಡಬೇಕೆಂದು ಪೂರ್ವ ನಿರ್ಧಾರಕ್ಕೆ ಬಂದು ಆನಂತರ ಶಾಸ್ತ್ರಕ್ಕೆಂಬಂತೆ ಸಂದರ್ಶನ ನಡೆಸುವುದು ರೂಢಿಗತವಾಗಿದೆ. ಹೀಗಾಗಿ ಇಲ್ಲಿ ಮುಖ್ಯ ಪರೀಕ್ಷೆಯಲ್ಲಿ ಆತ ಎಷ್ಟೇ ಬುದ್ಧಿವಂತನಾಗಿದ್ದು, ಗರಿಷ್ಠ ಅಂಕಗಳನ್ನು ಪಡೆದಿದ್ದರೂ ಸಂದರ್ಶನದಲ್ಲಿ ಮಾತ್ರ ಆತ ಅತ್ಯಂತ 'ದಡ್ಡ'ನಾಗುತ್ತಾನೆ. ಮುಖ್ಯ ಪರೀಕ್ಷೆಯಲ್ಲಿ ಕಡಿಮೆ ಅಂಕಗಳನ್ನು ಪಡೆದ ಅಭ್ಯರ್ಥಿ ಸಂದರ್ಶನದಲ್ಲಿ ಮಾತ್ರ 'ಬುದ್ದಿವಂತ' ನಾಗುತ್ತಾನೆ.

361 ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕಾತಿಯಲ್ಲಿಯೂ ಇದೇ ರೀತಿಯ ಗೋಲ್‌ಮಾಲ್ ನಡೆದಿದೆ ಎನ್ನಲಾಗುತ್ತಿದೆ. ಈ ಪ್ರಕರಣದಲ್ಲಿ ಮಾತ್ರವಲ್ಲ, ಇದು ಬಹಳ ಹಿಂದಿನಿಂದಲೂ ಪಾಲಿಸುತ್ತಿರುವ ಸಿದ್ಧ ಮಾದರಿಯಾಗಿದೆ.


ಗೆಜೆಟೆಡ್ ಪ್ರೊಬೆಷನರಿ ಹುದ್ದೆಗಳ ನೇಮಕಾತಿಗಾಗಿ ನಡೆದ ಮೌಖಿಕ ಸಂದರ್ಶನದಲ್ಲಿ ಅಭ್ಯರ್ಥಿಗಳಿಗೆ ನೀಡಲಾದ ಅಂಕಗಳ ಒಂದು ಸ್ಯಾಂಪಲ್, ಆಶ್ಚರ್ಯ - ಭಯ ಎರಡನ್ನೂ ತರಿಸಬಹುದು.

ಸಂದರ್ಶನವೆನ್ನುವುದು ಕೇವಲ 'ಹೈಡ್ರಾಮ'ವಷ್ಟೆ, ಇಲ್ಲಿ ಎಲ್ಲವೂ ಮೊದಲೇ ನಿಶ್ಚಯವಾಗಿರುತ್ತದೆ. ಸಂದರ್ಶನಕ್ಕೂ ಮೊದಲೇ ವ್ಯವಹಾರದ 'ಡೀಲಿಂಗ್' ಆಗಿದು 'ಸೆಟ್ಲ್' ಆಗುವುದರಿಂದ 'ತನ್ನ' ಅಭ್ಯರ್ಥಿಯನ್ನು ಮೇಲೆತ್ತಲು ನೀಡಬೇಕಾದ ಅಂಕಗಳೆಷ್ಟು? ಎಂಬ ಬಗ್ಗೆ ಅವರು 'ಮ್ಯಾಥಮ್ಯಾಟಿಕಲಿ ಪರ್ಫೆಕ್ಟ್' ಇರುತ್ತಾರೆ. ಹೀಗಾಗಿ ಮುಖ್ಯ ಪರೀಕ್ಷೆಯಲ್ಲಿ ಎಷ್ಟೇ ಗರಿಷ್ಠ ಅಂಕಗಳನ್ನು ಪಡೆದಿದ್ದರೂ 'ವ್ಯವಹಾರ' ನಡೆಸದಿದ್ದಲ್ಲಿ ಉದ್ಯೋಗವೆಂಬುದು ಕನಸಿನ ಗಂಟಾಗಿಯೇ ಉಳಿಯುತ್ತದೆ.'

ಡಾ॥ ಮೈತ್ರಿ ಈ ಕುರಿತು ತನ್ನ ಅನುಭವವನ್ನು ನೇರವಾಗಿ ಹೇಳಿಕೊಳ್ಳುತ್ತಾ 'ನನ್ನ ಸಂದರ್ಶನ ಮೂರೇ ನಿಮಿಷದಲ್ಲಿ ಮುಗಿದುಹೋಯಿತು' ಎನ್ನುತ್ತಾರೆ. ಸಂದರ್ಶನವನ್ನು ವಿಷಯ ತಜ್ಞರಿಂದ ಮಾಡಿಸಬೇಕೆಂಬ ನಿಯಮವಿದ್ದರೂ ಅದನ್ನು ಗಾಳಿಗೆ ತೂರಲಾಗುತ್ತಿದೆ. ಹಾಗು ಇಂತಿಷ್ಟೇ ಸಮಯ ಸಂದರ್ಶನ ನಡೆಸಬೇಕೆಂಬ ಯಾವ ನಿಯಮಾವಳಿಯೂ ಇಲ್ಲ. ಯುಪಿಎಸ್‌ಸಿಯಲ್ಲಿ ಅಭ್ಯರ್ಥಿಯ ಮುಖ್ಯ ಪರೀಕ್ಷೆಯ ಅಂಕಗಳನ್ನು ಗೌಪ್ಯವಾಗಿಟ್ಟು ಸಂದರ್ಶನ ನಡೆಸಲಾಗುತ್ತದೆ. ಇದರಿಂದ ನೇಮಕಾತಿ ಪ್ರಕ್ರಿಯೆ ಒಂದಷ್ಟು ನ್ಯಾಯಯುತವಾಗಿರುವುದು ಸಾಧ್ಯವಾಗುತ್ತದೆ. ಆದರೆ ಕೆಪಿಎಸ್‌ಸಿಯಲ್ಲಿ ಸಂದರ್ಶನಕ್ಕೂ ಮೊದಲೇ ಅಭ್ಯರ್ಥಿಯ ಮುಖ್ಯ ಪರೀಕ್ಷೆಯ ಅಂಕಗಳನ್ನು ಪರಿಶೀಲಿಸಲಾಗುತ್ತದೆ. ಹೀಗಾಗಿ ವ್ಯವಹಾರ ನಡೆಸಲು ಬೇಕಾದ ಸುಲಭ ಮಾರ್ಗ ದೊರಕಿದಂತಾಗಿದೆ.!

ಈದುವರೆಗೆ ಅಧಿಕಾರ ಅನುಭವಿಸಿದ ಕೆಪಿಎಸ್‌ಸಿಯ ಅಧ್ಯಕ್ಷರು/ಸದಸ್ಯರು ಹಾಗೂ ಅಧಿಕಾರಿಗಳ ಆಸ್ತಿಗಳನ್ನು ಸರಿಯಾದ ತನಿಖೆಗೆ ಗುರಿಪಡಿಸಿದಲ್ಲಿ ಕೆಪಿಎಸ್‌ಸಿಯಲ್ಲಿನ ಭ್ರಷ್ಟಾಚಾರದ ಅಗಾಧತೆಯಲ್ಲಿ ಒಂದಷ್ಟು ಅರಿಯಬಹುದೇನೊ? ಕೆಪಿಎಸ್‌ಸಿಯಲ್ಲಿ ಆಗುತ್ತಿರುವ ಅಕ್ರಮ ನೇಮಕಾತಿಗಳು ಅದರಿಂದಾಗಿ ಹರಿದಾಡುತ್ತಿರುವ ಭ್ರಷ್ಟಾಚಾರದ ಕೋಟಿ ಕೋಟಿ ಹಣ ಭವಿಷ್ಯದ ಬಗ್ಗೆ ಸುಂದರ ಕನಸುಗಳನ್ನು ಕಟ್ಟಿಕೊಂಡು ಕಷ್ಟಪಟ್ಟು ಓದಿ ಪ್ರಾಮಾಣಿಕವಾಗಿ ಪರೀಕ್ಷೆ ಎದುರಿಸುವ ನಿರುದ್ಯೋಗಿ ಯುವಜನರಿಗೆ ತೀವ್ರ ನಿರಾಸೆ ಮೂಡಿಸಿವೆ. ಇಂತಹ ದೈತ್ಯ ಭ್ರಷ್ಟ ವ್ಯವಸ್ಥೆಯಿಂದ ನೊಂದ ಯುವಜನರನ್ನು ಅಂತಿಮವಾಗಿ ನಾವು ಭಯೋತ್ಪಾದಕರನ್ನಾಗಿಯೋ, ನಕ್ಸಲರಾಗಿಯೋ, ದರೋಡೆಕೋರರಾಗಿಯೋ ಅಥವಾ ಕೊಲೆಗಡುಕರಾಗಿಯೋ ನೋಡಬೇಕಾದ ದುರಂತಗಳು ಹೆಚ್ಚುತ್ತಿವೆ.

ಅಪರಾಧ ತನಿಖೆ ಆರಂಭಗೊಂಡಿದೆ, ಅದು ಚುರುಕಾಗಬೇಕು. ತಪ್ಪಿತಸ್ಥರನ್ನು ಎಳದು ತಂದು ಉಗ್ರ ಶಿಕ್ಷೆಗೆ ಗುರಿಪಡಿಸಬೇಕು. ಇದರ ಜೊತೆಯಲ್ಲೇ ಕೆಪಿಎಸ್‌ಸಿಯಲ್ಲಿನ 'ನೇಮಕಾತಿ ದಂಧೆ'ಗೆ ಕಡಿವಾಣ ಹಾಕಲು ಬೇಕಾದ ಅಗತ್ಯ ನಿಯಮಾವಳಿಗಳನ್ನು ರೂಪಿಸಿ ಸೂಕ್ತಕ್ರಮಗಳನ್ನು ಕೈಗೊಳ್ಳಲು ಸರ್ಕಾರ ಮುಂದಾಗಬೇಕು. ಯುಪಿಎಸ್‌ಸಿ ಮಾದರಿಯಲ್ಲಿ ಪರೀಕ್ಷೆ ಮತ್ತು ಸಂದರ್ಶನಗಳನ್ನು ಅತ್ಯಂತ ಪಾರದರ್ಶಕವಾಗಿ ನಡೆಸಲು ಕಟ್ಟುನಿಟ್ಟಿನ ಕ್ರಮ ಅನುಸರಿಸಬೇಕು. ಆಗ ಮಾತ್ರವೇ ಸಾಂವಿಧಾನಿಕ ಸಂಸ್ಥೆ ಉದ್ದೇಶ ಸಾರ್ಥಕಗೊಳ್ಳುತ್ತದೆ.



ಕಾಂ. ಜ್ಯೋತಿಬಸು ಜನ್ಮಶತಮಾನೋತ್ಸವ ಉದ್ಘಾಟನ ಸಂಧರ್ಭದಲ್ಲಿ ಸಿಐಟಿಯು ಬೆಂಗಳೂರು ಜಿಲ್ಲಾ ಸಮಿತಿ ಹೊರ ತಂದ ಪಾಕೆಟ್ ಬುಕ್‌ನ್ನು ಸಿಐಟಿಯು ರಾಜ್ಯ ಅಧ್ಯಕ್ಷರಾದ ವಿ.ಜೆ.ಕೆ. ನಾಯರ್ ಬಿಡುಗಡೆ ಮಾಡುತ್ತಿರುವುದು. ಚಿತ್ರದಲ್ಲಿ ಅ.ಭಾ.ಅಧ್ಯಕ್ಷರಾದ ಎ.ಕೆ. ಪದ್ಮನಾಭನ ಮುಂತಾದವರು

ನೀವು 'ಜನಶಕ್ತಿ'ಯ ಚಂದಾದಾರರೇ? ಏಜೆನ್ಸಿದಾರರೇ? ದಯವಿಟ್ಟು ಗಮನಿಸಿ

'ಜನಶಕ್ತಿ ಕನ್ನಡ ವಾರ ಪತ್ರಿಕೆ'ಯ ಆಡಳಿತ ಮತ್ತು ಪ್ರಸಾರ ನಿರ್ವಹಣೆಯ ಜವಾಬ್ದಾರಿ ಬದಲಾವಣೆಯಾಗಿರುವುದನ್ನು ಈಗಾಗಲೇ ಗಮನಿಸಿದ್ದೀರಿ ಎಂದು ಭಾವಿಸುತ್ತೇವೆ. ಹೊಸ ಚಂದಾಗಳ ನೀಡಿಕೆ, ವಿಳಾಸ ಬದಲಾವಣೆ, ಪತ್ರಿಕೆ ತಲುಪದಿರುವ ಬಗೆಗಿನ ದೂರುಗಳು, ಏಜೆನ್ಸಿದಾರರ ಪತ್ರಿಕೆಗಳ ಹೆಚ್ಚಳ, ಬಾಕಿ ವಿಚಾರಣೆ, ಹಣ ಪಾವತಿ, ದೂರುಗಳು ಹಾಗೂ ಜಾಹಿರಾತುಗಳಿಗೆ ಸಂಬಂಧಿಸಿದ ಎಲ್ಲ ವ್ಯವಹಾರ, ವಿಚಾರಣೆ ಇತ್ಯಾದಿಗಳನ್ನು ಇನ್ನು ಮುಂದೆ ಈ ಕೆಳಗಿನ ವಿಳಾಸದಲ್ಲೇ ಮಾಡುವುದು. ಕಚೇರಿಯ ನೇರ ಸಂಪರ್ಕವು ಕಛೇರಿ ಕಾರ್ಯ ನಿರ್ವಹಿಸುವ ನಿರ್ದಿಷ್ಟ ಅವಧಿಯಲ್ಲಿ ಮಾತ್ರ ಲಭ್ಯವಿರುತ್ತದೆ ಎಂಬುದನ್ನು ಗಮನಿಸ ತಕ್ಕದ್ದು.

ವಿಳಾಸ : 'ಜನಶಕ್ತಿ' ಆಡಳಿತ ಕಚೇರಿ,

c/o. ಕ್ರಿಯಾ ಪ್ರಕಾಶನ, ಸೂರಿ ಭವನ, # 40/5, 2ನೇ 'ಬಿ' ಮೈನ್, 16ನೇ ಕ್ರಾಸ್, ಸಂಪಂಗಿರಾಮನಗರ, ಬೆಂಗಳೂರು-560027

email : janashakthi13.admn@gmail.com

Phone : 22234369

ಹೆಚ್.ಆರ್.ಸವಿತ ರಾಣಿ : 9483966467,

ಜಿ.ಚಂದ್ರಶೇಖರ್ : 9448578021

(ಕಾರ್ಯಾಲಯದ ಸಮಯ: ಬೆಳಿಗ್ಗೆ 10.00 ರಿಂದ ಸಂಜೆ 6.00 ಗಂಟೆವರೆಗೆ)

ಮಾರ್ಕ್ಸ್‌ವಾದ.....

ಪುಟ 16 ರಿಂದ

ಮಾರ್ಕ್ಸ್‌ವಾದದ ಸಾರವನ್ನು ಲೆನಿನ್ ಅವರು ಗುರುತಿಸಿದ ಮೂಲಸಾರದ ಬೆಳಕಿನಲ್ಲಿ ವಿಶದಪಡಿಸಲು ಪ್ರಯತ್ನಿಸುತ್ತದೆ. ಅದೇ ರೀತಿ 'ಇಂದಿನ ಸಾಮ್ರಾಜ್ಯಶಾಹಿ' ಲೆನಿನ್ ಈ ಪುಸ್ತಕವನ್ನು ಯಾವಾಗ, ಯಾಕೆ ಬರೆದರು ? ಇವತ್ತು ಯಾಕೆ ಓದಬೇಕು ? - ಎಂಬ ಪ್ರಶ್ನೆಗಳನ್ನು ಹಾಕಿಕೊಂಡು ಅದನ್ನು ಉತ್ತರಿಸಲು ಪ್ರಯತ್ನಿಸುತ್ತದೆ. 20ನೇ ಶತಮಾನದ ಆದಿ ಭಾಗದ ಸಾಮ್ರಾಜ್ಯಶಾಹಿ ಬಗೆಗಿನ ಸಂಕೀರ್ಣ ಅಂಕೆ-ಸಂಖ್ಯೆಗಳೂ, ವಿವರಗಳು, ವಿಶ್ಲೇಷಣೆಗಳಲ್ಲಿ ಓದುಗ ಕಳೆದು ಹೋಗದಂತೆ ಒಟ್ಟು ಸಾರಾಂಶವನ್ನು ಪ್ರಸ್ತುತಪಡಿಸುತ್ತದೆ. ಇಂದಿನ ಸಾಮ್ರಾಜ್ಯಶಾಹಿಯ ಲಕ್ಷಣಗಳನ್ನು ಗುರುತಿಸುತ್ತಾ, ಸಾಮ್ರಾಜ್ಯಶಾಹಿ ಬಗ್ಗೆ ಲೆನಿನ್ ಸಿದ್ಧಾಂತ ಎಷ್ಟರ ಮಟ್ಟಿಗೆ ಕಾಲದ ಪರೀಕ್ಷೆ ಗೆದ್ದಿದೆ ಎಂದು ಪರಿಶೀಲಿಸುತ್ತದೆ.

ಈ ಮೂರು ಪುಸ್ತಕಗಳಲ್ಲಿ ಮೂಲ ಕೃತಿಯ ಕನ್ನಡ ಪಠ್ಯಕ್ಕೆ ಹಿಂದೆ ಈಗಾಗಲೇ ಪ್ರಕಟವಾಗಿರುವ (ಪ್ರಗತಿ ಪ್ರಕಾಶನದ ಪ್ರಕಟಣೆಗಳು ಸೇರಿದಂತೆ) ಅನುವಾದವನ್ನು ಸಾಧ್ಯವಿದ್ದಲ್ಲಿ ಅವಶ್ಯವಿದ್ದಲ್ಲಿ ಆಧಾರವಾಗಿ ಇರಿಸಿಕೊಳ್ಳಲಾಗಿದೆ. ಅದನ್ನು ಇಂದಿನ ಭಾಷೆ ಮತ್ತು ನುಡಿಗಟ್ಟುಗಳಿಗೆ ಸಮಕಾಲೀನಗೊಳಿಸಿದ್ದಲ್ಲದೆ, ಓದಿಸಿಕೊಂಡು ಹೋಗುವ ಗುಣವನ್ನು ಹೆಚ್ಚಿಸಲು ಗಂಭೀರ ಪ್ರಯತ್ನ ಮಾಡಲಾಗಿದೆ. ಅಗತ್ಯವಿದ್ದಲ್ಲಿ ಹೊಸತಾಗಿ ಅನುವಾದ ಮಾಡಲಾಗಿದೆ. ಪಠ್ಯ ಮತ್ತು ವಿಶೇಷವಾಗಿ ಪ್ರವೇಶಿಕೆಯನ್ನು ಸಾಮಾನ್ಯ ಆಸಕ್ತ ಓದುಗರಿಗೆ ನಿಲುಕುವ ಮಟ್ಟದಲ್ಲಿ ಮತ್ತು ಶೈಲಿಯಲ್ಲಿ ಕೊಡಲಾಗಿದೆ ಎಂಬುದು ಈ ಪುಸ್ತಕಗಳ ಹೆಗ್ಗಳಿಕೆ.

ಈ ನಾಲ್ಕೂ ಪುಸ್ತಕಗಳೂ ನಮ್ಮ ಇಂದಿನ ಸನ್ನಿವೇಶ ಅರ್ಥೈಸಲು ಮತ್ತು ಬದಲಾಯಿಸಲು ಸಹಾಯಕವಾಗುತ್ತದೆ. ಈ ಪುಸ್ತಕಗಳನ್ನು ಕೊಂಡು, ಓದಿ, ಮಾರಿ ಹಾಗೂ ಅದರ ಸಂದೇಶವನ್ನು ಹರಡುವುದು ಭಾರತದ ಪ್ರಜಾಸತ್ತಾತ್ಮಕ ಕ್ರಾಂತಿಯಲ್ಲಿ ಆಸಕ್ತರಾಗಿರುವ ಎಲ್ಲರ ಕರ್ತವ್ಯ.

JANASHAKTHI KANNADA VARA PATRIKE JUL 21, 2013 Price : Rs. 10/- RNI No. KARKAN/2000/17920 ...
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP

ಮಾರ್ಕ್ಸ್‌ವಾದದ ಓದು ಓಕೆ? ಮರು-ಓದು ಯಾಕೆ ?

ಜುಲೈ 7 ರಂದು ಬೆಂಗಳೂರಿನಲ್ಲಿ ಒಂದು ಚಾರಿತ್ರಿಕ ಘಟನೆ ನಡೆಯಿತು. 'ಜೈ ಭೀಮ್' ಭವನದಲ್ಲಿ ಕಾ.ಪಿ.ಸುಂದರಯ್ಯ ಅವರ ಶತಮಾನೋತ್ಸವ ಸಮಾರೋಪದಲ್ಲಿ 'ಮಾರ್ಕ್ಸ್‌ವಾದದ ಮೂಲಕೃತಿಗಳ ಮರು-ಓದು ಮಾಲಿಕೆ'ಯ ಮೂರು ಪುಸ್ತಕಗಳು ಬಿಡುಗಡೆ ಆದವು. ಈ ಕೃತಿಗಳನ್ನು ಬಿಡುಗಡೆ ಮಾಡಿದವರು ಹಿರಿಯ ಲೇಖಕ-ಚಿಂತಕ, ದಲಿತ ಚಳುವಳಿಯ ದ್ರಷ್ಟಾರ ದೇವನೂರ ಮಹಾದೇವ. ಇದಲ್ಲದೆ 'ಕ್ರಾಂತಿಕಾರಿ ನವರತ್ನ ಮಾಲೆ'ಯ ಮೊದಲ ಪುಸ್ತಕವಾದ 'ಪಿ.ಸುಂದರಯ್ಯ' ಪುಸ್ತಕವನ್ನೂ ಅವರು ಬಿಡುಗಡೆ ಮಾಡಿದರು. ಈ ಘಟನೆಯ ಚಾರಿತ್ರಿಕ ಮಹತ್ವವನ್ನು ಅರ್ಥ ಮಾಡಿಕೊಳ್ಳಲು, ಪುಸ್ತಕ ಬಿಡುಗಡೆ ಮಾಡಿದ ದೇವನೂರು ಮಹಾದೇವ ಅವರ ಮಾತುಗಳನ್ನೂ (ಈ ಸಂಚಿಕೆಯ ಪುಟ 16 ರಲ್ಲಿ ಅದರ ವರದಿ ಇದೆ) ಮನನ ಮಾಡಬೇಕು. ಈ ಎರಡು ಮಾಲಿಕೆಗಳ ಪುಸ್ತಕಗಳ ಪರಿಚಯವನ್ನೂ ಮಾಡಿಕೊಳ್ಳಬೇಕು. ಪುಸ್ತಕಗಳ ಪರಿಚಯ ಮಾಡುವ ಪ್ರಯತ್ನ ಇದು.

ಶರತ್ ಚಂದ್ರ

ಕ್ರಾಂತಿಕಾರಿ ನವರತ್ನಗಳು

'ಕ್ರಾಂತಿಕಾರಿ ನವರತ್ನ ಮಾಲೆ'ಯ ಬಗ್ಗೆ ಮೊದಲು ನೋಡೋಣ. 1947ರ ಮೊದಲಿನ ಚಳುವಳಿ ಹಲವು ರತ್ನಗಳನ್ನು ಕಂಡಿದೆ. ಆದರೆ ಸ್ವಾತಂತ್ರ್ಯದ ಎಲ್ಲಾ ಆಶಯಗಳನ್ನೂ, ಅಪೂರ್ಣವಾಗಿದ್ದ ಭಾರತದ ಪ್ರಜಾಸತ್ತಾತ್ಮಕ ಕ್ರಾಂತಿಯನ್ನೂ ಸಾಧಿಸಲು ಹೂಡಿದ ಕ್ರಾಂತಿಕಾರಿ ಚಳುವಳಿಯಲ್ಲಿ 1947ರ ಮೊದಲೂ ಆ ನಂತರವೂ, ಕಂಡ ನವರತ್ನಗಳು ನಮ್ಮ ದೇಶದ ಜನರಿಗೆ ಅಷ್ಟಾಗಿ ಪರಿಚಿತರಲ್ಲ. 1947ರ ಮೊದಲೂ ನಂತರವೂ ಆ ಚಳುವಳಿಯನ್ನು ಮುನ್ನಡೆಸಿದ ಈ ನವರತ್ನಗಳು, ಆಳುವ ಬೂರ್ಜ್ವಾ-ಭೂಮಾಲಕ ವರ್ಗಗಳ ರಾಜಕೀಯಕ್ಕೆ ಪ್ರತಿಯಾಗಿ, ಜನತಾ ಪ್ರಜಾಪ್ರಭುತ್ವದ ಬದಲಿ ರಾಜಕೀಯ ಒದಗಿಸಿದ ಸಿಪಿಐ(ಎಂ)ಗೆ ಮೊದಲ ಸಾಮೂಹಿಕ ನಾಯಕತ್ವ ಕೊಟ್ಟವರು. ಕಮ್ಯುನಿಸ್ಟ್ ಚಳುವಳಿಯನ್ನು ಪರಿಷ್ಕರಣವಾದದ 'ಬಲ ತಪ್ಪು' ಮತ್ತು ಸಾಹಸವಾದದ 'ಎಡ ತಪ್ಪು'ಗಳ ವಿರುದ್ಧ ರಕ್ಷಿಸಿ ಜನತಾ ಪ್ರಜಾಪ್ರಭುತ್ವದತ್ತ ನಡೆಸಿದವರು. ಸಿಪಿಐ(ಎಂ)ನ ಮೊದಲ ಪೊಲಿಟ್ ಬ್ಯೂರೊ ಸದಸ್ಯರಾಗಿದ್ದ ಈ ಒಂಬತ್ತು ನಾಯಕರು. ಈ ಕ್ರಾಂತಿಕಾರಿ ನವರತ್ನಗಳ ಬಗ್ಗೆ ಕರ್ನಾಟಕದ ಜನತೆಗಂತೂ ಅರಿವು ಇಲ್ಲವೇ ಇಲ್ಲ ಎನ್ನುಷ್ಟು ಕಡಿಮೆ. ಈ ಕೊರತೆ ನೀಗಿಸಲು ಕ್ರಿಯಾ 'ಕಾಂತಿಕಾರಿ ನವರತ್ನ ಮಾಲೆ' ಪ್ರಕಟಿಸಲು ಯೋಜಿಸಿದೆ. ಈ ನವರತ್ನಗಳು ದೇಶದ ವಿವಿಧ ಭಾಗಗಳಿಂದ ವಿವಿಧ ಹಿನ್ನೆಲೆಗಳಿಂದ ಬಂದಿದ್ದು, ಅವರ ಕಾರ್ಯಕ್ಷೇತ್ರಗಳೂ ವೈವಿಧ್ಯಮಯವಾಗಿದ್ದವು. ಈ ಒಂಬತ್ತು ಅಪ್ರತಿಮ ಕ್ರಾಂತಿಕಾರಿಗಳ ಜೀವನದ ಪರಿಚಯವೆಂದರೆ ಭಾರತದ ಪ್ರಜಾಸತ್ತಾತ್ಮಕ ಕ್ರಾಂತಿಗೆ ನಡೆಯುತ್ತಿರುವ ಚಳುವಳಿಯ ಚರಿತ್ರೆಯ ಹಲವು ಆಯಾಮಗಳನ್ನೂ ತಿಳಿದುಕೊಂಡಂತೆ.



ಪುಸ್ತಕಗಳನ್ನು ಬಿಡುಗಡೆ ಮಾಡುತ್ತಿರುವ ಹಿರಿಯ ಸಾಹಿತಿ ದೇವನೂರು ಮಹಾದೇವರವರು. ಚಿತ್ರದಲ್ಲಿ ಕಾ. ಜಿ.ವಿ. ಶ್ರೀರಾಮರೆಡ್ಡಿ, ವಿ.ಜೆ.ಕೆ. ನಾಯರ್, ಜಿ.ಎಸ್. ನಾಗರಾಜು, ಕೆ. ಪ್ರಕಾಶ್.

ಈ ಮಾಲೆಯ ಮೊದಲ ಪ್ರಕಟಣೆಯಾಗಿ ಈ ವರ್ಷ ಶತಮಾನೋತ್ಸವ ಆಚರಿಸಲಾಗುತ್ತಿರುವ ಪುಚ್ಚಲಪಲ್ಲಿ ಸುಂದರಯ್ಯ ಅವರ ಬಗ್ಗೆ ಕಿರು ಹೊತ್ತಗೆ, ಬಿಡುಗಡೆಯಾಗಿದೆ. ಅವರು ಸಿಪಿಐ(ಎಂ)ನ ಮೊದಲ ಪ್ರಧಾನ ಕಾರ್ಯದರ್ಶಿಯಾಗಿದ್ದವರು. ತೆಲಂಗಾಣದ ನಿಜಾಮನ ನಿರಂಕುಶ ಆಡಳಿತ ಮತ್ತು ಪಾಳೆಯಗಾರಿ ವ್ಯವಸ್ಥೆಯ ವಿರುದ್ಧ 5 ವರ್ಷಗಳ ರೈತರ ವೀರ ಸಶಸ್ತ್ರ ಹೋರಾಟದ ಸಮರ್ಥ ಸಾರಥಿ. ಪಿ.ಸುಂದರಯ್ಯ ಅವರ ಸ್ಫೂರ್ತಿದಾಯಕ ಕ್ರಾಂತಿಕಾರಿ ಜೀವನದ ಪರಿಚಯ ನೀಡುವ 54 ಪುಟಗಳ ಈ ಕಿರು ಹೊತ್ತಗೆ ಸಿಪಿಐ(ಎಂ) ಕೇಂದ್ರ ಸಮಿತಿ ಇಂಗ್ಲೀಷಿನಲ್ಲಿ ಪ್ರಕಟಿಸಿದ ಪುಸ್ತಿಕೆಯ ಅನುವಾದ. ಓದಿಸಿಕೊಂಡು ಹೋಗುವ ಉತ್ತಮ ಕನ್ನಡ ಅನುವಾದ ಕೆ.ಎಸ್.ವಿಮಲಾ ಅವರದು. ಹರ್‌ಕಿಶನ್ ಸಿಂಗ್ ಸುರಜಿತ್ ಮತ್ತು ಜ್ಯೋತಿ ಬಸು ಅವರ ಜೀವನ ಪರಿಚಯ ಮಾಡುವ ಪುಸ್ತಿಕೆಗಳು ಈಗಾಗಲೇ ತಯಾರಿಯಲ್ಲಿವೆ. ಎಲ್ಲಾ ಒಂಬತ್ತು ರತ್ನಗಳ ಬಗ್ಗೆ ಇಂತಹ ಪುಸ್ತಿಕೆಗಳನ್ನು ಶೀಘ್ರವೇ ಪ್ರಕಟಿಸಲಾಗುವುದು ಎಂದು ಬಿಡುಗಡೆ ಸಮಾರಂಭದಲ್ಲಿ ಪ್ರಕಟಿಸಲಾಯಿತು.

'ಗೆಲ್ಲಲೊಂದು ಜಗತ್ತೇ ಇದೆ'

'ಮಾರ್ಕ್ಸ್‌ವಾದದ ಮೂಲಕೃತಿಗಳ ಮರು-ಓದು ಮಾಲಿಕೆ' ಇನ್ನೊಂದು ವಿಶಿಷ್ಟ ಮಾಲಿಕೆ. ಈ ಮಾಲಿಕೆಯ ಮೂರು ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಈ ಮೂರು ಪುಸ್ತಕಗಳಲ್ಲಿ ಮೂಲಕೃತಿಯ ಕನ್ನಡ ಅನುವಾದವಲ್ಲದೆ ಒಂದು ಪ್ರವೇಶಿಕೆಯೂ ಇದೆ. 'ಗೆಲ್ಲಲೊಂದು ಜಗತ್ತೇ ಇದೆ' ಮಾರ್ಕ್ಸ್-ಎಂಗೆಲ್ಸ್ ಅವರ ಕಮ್ಯುನಿಸ್ಟ್ ಪ್ರಣಾಳಿಕೆಯ ಕನ್ನಡ ರೂಪ. ವೇದರಾಜ ಎನ್.ಕೆ. ಇದರ ಸಮರ್ಥ ಅನುವಾದ ಮಾಡಿರುವುದಲ್ಲದೆ, ಉತ್ತಮ ಪರಿಣಾಮಕಾರಿ ಪ್ರವೇಶಿಕೆಯನ್ನೂ ಬರೆದಿದ್ದಾರೆ. 'ಮಾರ್ಕ್ಸ್‌ವಾದ ಎಂದರೇನು ?' ಈ ಪ್ರಶ್ನೆಗೆ ಸಮಗ್ರ ಚುಟುಕು ಉತ್ತರ ಕೊಡುವ ಲೆನಿನ್ ಅವರ ಮೂರು ಲೇಖನಗಳ ಸಂಗ್ರಹ. ಇದು ಕನ್ನಡದಲ್ಲಿಯೇ ಬರೆದ ಮೂಲ ಲೇಖನವೇ ಎಂದುಕೊಳ್ಳುವಷ್ಟು ಚೆನ್ನಾಗಿ ಇದರ ಅನುವಾದ ಮಾಡಿದವರು ಎ.ಎಸ್. ಆಚಾರ್ಯ. ಇಂದಿನ ಮಾರ್ಕ್ಸ್‌ವಾದದ ಬಗ್ಗೆ ಪ್ರವೇಶಿಕೆ ಬರೆದವರು ವಸಂತರಾಜ ಎನ್.ಕೆ. 'ಸಾಮ್ರಾಜ್ಯಶಾಹಿ' ಅದೇ ಹೆಸರಿನ ಲೆನಿನ್ ಅವರ ಪ್ರಸಿದ್ಧ ಪುಸ್ತಕದ ಕನ್ನಡ ರೂಪ. ಅದರ ಅನುವಾದ ಮತ್ತು ಪ್ರವೇಶಿಕೆ ಬರೆದವರು ವಸಂತರಾಜ ಎನ್.ಕೆ..

ಮಾರ್ಕ್ಸ್‌ವಾದದ ಪ್ರಸ್ತುತತೆ ಬಗ್ಗೆ ಈಗ ಯಾರಿಗೂ ಸಂದೇಹಗಳಿಲ್ಲ. ಬಿಬಿಸಿ '20ನೇ ಶತಮಾನದ ಅತ್ಯಂತ ಪ್ರಭಾವಶಾಲಿ ಚಿಂತಕ ಯಾರು' ಎಂಬ ಬಗ್ಗೆ ವಿಶ್ವವ್ಯಾಪಿ ಸಮೀಕ್ಷೆ ನಡೆಸಿದಾಗ ಮಾರ್ಕ್ಸ್ ನಂಬರ್ 1 ಸ್ಥಾನ ಗಳಿಸಿದರು. 2008ರ ತೀವ್ರ ಜಾಗತಿಕ ಬಿಕ್ಕಟ್ಟಿನ ನಂತರ ಜರ್ಮನಿ, ಬ್ರಿಟನ್, ಜಪಾನ್

ಮುಂತಾದ ಅಭಿವೃದ್ಧ ಬಂಡವಾ...
ದೇಶಗಳಲ್ಲಿ 'ಬಂಡವಾಳ' ...
ಬಂಡವಾಳಶಾಹಿ ವ್ಯವಸ್ಥೆಯ ಮಾರ್ಕ್...
ವಿಮರ್ಶೆ ಮಾಡುವ ಪುಸ್ತಕಗಳ ವ...
ಬಹುವಾಗಿ ಹೆಚ್ಚಿದೆಯಂತೆ. ದುಡಿ...
ಜನ ಮಾತ್ರವಲ್ಲ, ಬಂಡವಾಳಶಾಹಿ...
ಈ ಬಗ್ಗೆ ಈಗ ಸಂದೇಹ ಇಲ್ಲ. ಅ...
ಪ್ರಸಿದ್ಧ ವಾರಪತ್ರಿಕೆ 'ಟೈಂ' ಫ...
2009ರ ಸಂಚಿಕೆಯಲ್ಲಿ ಮಾ...
ಮುಖಪುಟದ 'ಗೌರವ' ಕೊಟ್ಟು...
ಹೇಳಿತ್ತು: "ಮಾರ್ಕ್ಸ್ ಬಗ್ಗೆ ಪುನರ್ವಿ...
ಮಾಡಬೇಕಾಗಿದೆ. ಬಂಡವಾಳಶಾಹಿ...
ರಕ್ಷಿಸುವುದು ಹೇಗೆ ಎಂದು ...
ನಡೆಸುತ್ತಿರುವಾಗ, ಈ ವ್ಯವಸ್ಥೆಯ...
ದೊಡ್ಡ ವಿಮರ್ಶಕ ಏನು ಹೇಳಿದ್ದ...
ಅಧ್ಯಯನ ಮಾಡಬೇಕಾಗಿದೆ."
ರಿಂದ ಮಾರ್ಕ್ಸ್‌ವಾದದ ಮೂಲ...
ಓದುವುದರ ಮಹತ್ವದ ಬಗೆಗೂ ...
ಸಂದೇಹಗಳಿಲ್ಲ. ಆದರೆ 'ಮಾರ್ಕ್ಸ್‌ವಾ...
ಓದು ಓಕೆ? ಮರು-ಓದು ಯಾಕೆ?' ...
ಪ್ರಶ್ನೆ ಏಳಬಹುದು.

ಮರು ಓದು ಯಾಕೆ ? ಹೇಗೆ ?

ಮಾರ್ಕ್ಸ್‌ವಾದದ ಮರು-...
ಅಗತ್ಯವಾಗಿರುವುದು ಈ ಮೂಲಕೃ...
ಪ್ರಕಟಣೆಯಾದ ನಂತರ ಜಗತ್ತಿನಲ್ಲಿ ಆ...
ಅಗಾಧ ಬದಲಾವಣೆಗಳನ್ನು ಆ ಕೃ...
ಬೆಳಕಿನಲ್ಲಿ ಅರ್ಥೈಸಲು. ಆ ಕೃತಿ...
ಮೂಡಿರುವ ಮಾರ್ಕ್ಸ್‌ವಾದದ ನಿ...
ಆಯಾಮವನ್ನು ಸಮಕಾಲೀನಗೊಳಿ...
ನಮ್ಮ ದೇಶ ಮತ್ತು ರಾಜ್ಯದ ಇಂದಿನ ...
ಸನ್ನಿವೇಶವನ್ನು ಅರ್ಥೈಸಲು ಬದಲಾಯಿ...
ಹೇಗೆ ಈ ಕೃತಿ ಸಹಾಯಕವಾಗಬ...
ಎಂಬ ಹುಡುಕಾಟ ನಡೆಸಲು. ಇವೆಲ್ಲ...
ಪ್ರತಿಯೊಂದು ಪುಸ್ತಕದ ಪ್ರವೇಶಿಕೆ...
ಮಾಡಲಾಗಿದೆ. ಈ ಪ್ರವೇಶಿಕೆ ಸಾಮಾನ್...
(ಆಯಾ ಕೃತಿಗೆ ಅನ್ವಯವಾಗುವ ವ...
ಹಲವು ಅಂಶಗಳನ್ನು ಒಳಗೊಂಡಿರ...
ಆಯಾ ಮೂಲಕೃತಿ ಬರೆದ...
ಸನ್ನಿವೇಶ-ಹಿನ್ನೆಲೆ, ಕೃತಿಯ ಮುಖ್ಯ...
ಅದರ ಇಂದಿನ ಪ್ರಸ್ತುತತೆ, ಅದರ ಮೊ...
ಪ್ರಕಾಶನದಿಂದೀಚೆಗೆ ಆಯಾ ವಿಷಯ...
ಆದ ಪ್ರಮುಖ ಬೆಳವಣಿಗೆಗಳು, ಇವೆ...
ಬೆಳಕಿನಲ್ಲಿ ಮೂಡಿರುವ ಸಮಕಾಲೀನಗೆ...
ದೃಷ್ಟಿಕೋನ-ಇವೇ ಆ ಅಂಶಗಳು.

ಉದಾಹರಣೆಗೆ ಕಮ್ಯುನಿಸ್ಟ್ ಪ್ರಣಾಳಿ...
160ಕ್ಕೂ ಹೆಚ್ಚು ವರ್ಷಗಳ ಅವಧಿ...
ಕ್ರಾಂತಿ, ಕ್ರಾಂತಿಕಾರಿ ಚಳುವಳಿ/ಪಕ್ಷಗಳ ...
ಅದು ಬೀರಿದ ಪ್ರಭಾವ ಪ್ರವೇಶಿಕೆ...
ಪ್ರಧಾನವಾಗಿ ಬಂದಿದೆ. '...
ಮಾರ್ಕ್ಸ್‌ವಾದ ಎಂದರೇನು' ಎಂಬ ಪ್ರ...
ಮಾರ್ಕ್ಸ್‌ವಾದದ ಮೂರು ಘಟಕಗ...
ತತ್ವಶಾಸ್ತ್ರ, ರಾಜಕೀಯ ಅರ್ಥಶಾಸ್ತ್ರ ...
ಸಮಾಜವಾದಿ ಚಳುವಳಿಯಲ್ಲಿ ಆ...
ಬದಲಾವಣೆಗಳನ್ನು ಗುರುತಿಸುತ್ತಾ ಇ...

ಪುಟ ...

JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor : NITHYANANDASWAMI